
ಪ್ರಚೋದನೆ

# ಲಂಕೇಶ್

ಜೂನ್ 6, 2012 ಪುಟ 20 ರೂ. 14/-



ಪೇಜಾವರರಿಗೆ ಜಾತಿ ರೋಗ



## ಮಹಾಂತೇಶ್ ಹತ್ಯೆ
## ಸರ್ಕಾರವೇ ಸುಳ್ಳುಗಾರ



# ಅಂಬರೀಷ್‌ಗೆ ಅರವತ್ತು

ಅಪರೂಪದ ಸಂದರ್ಶನ

ಂಡು ಗದ್ದಲ
ನ್ನಂಜಿ ರಾಜ, ಸೈಲ್,
ಸ್ನೋಟಿಕರ್ ನಾಟಕ

ಚನ್ನಗಿರಿ
ವಿರೂಪಾಕ್ಷಪ್ಪನ
ಜಾತಿ ರಾಜಕಾರಣ

ಯಡ್ಡಿ ಗೆಲ್ಲಲ್ಲ
ಹೈಕಮಾಂಡ್
ಜಗ್ಗಲ್ಲ

ಸಾ, ಜೊತೆ ಹೆಬ್ಬೆಟ್ ಮಂಜನ ಗನ್ ನಂಟು

## ಡಾಲರ್ ಎದುರು ರೂಪಾಯಿ ಕುಸಿತ:

# ಅಮೆರಿಕದ ಅಧೀನತೆ ತಪ್ಪದೆ ಕುಸಿತ ತಪ್ಪುವುದೇ?



ಕಳೆದ ವರ್ಷದ ಪ್ರಾರಂಭದಿಂದಲೂ ಒಂದೇಸಮನೆ ಡಾಲರ್ ಎದುರು ಮುಗ್ಗರಿಸುತ್ತಿದ್ದ ಭಾರತದ ರೂಪಾಯಿ ಈಗ ಮಕಾಡೆ ಮಲಗುತ್ತಿದೆ. ಕಳೆದ ವರ್ಷದ ಪ್ರಾರಂಭದಲ್ಲಿ ಒಂದು ಡಾಲರ್‌ಗೆ 46 ರೂಪಾಯಿ ಇದ್ದದ್ದು 50 ರೂಪಾಯಿಯ ಗಡಿ ದಾಟಿ ಈಗ 55 ರೂಪಾಯಿಗೆ ಜಾರಿದೆ. ಹೀಗೆ ಮುಂದುವರೆದರೆ ಈ ವಾರದ ಕೊನೆಗೆ ಅದು 60 ರೂಪಾಯಿಯನ್ನು ದಾಟುವ ಎಲ್ಲಾ ಲಕ್ಷಣಗಳೂ ಕಾಣುತ್ತಿದೆ. ಈ ಹಿಂದೆ ರೂಪಾಯಿ ಅತ್ಯಂತ ಅಪಮೌಲ್ಯಗೊಂಡಿದ್ದು ಕೆಲವರ್ಷಗಳ ಕೆಳಗೆ. ಆಗ ಅದು ಒಂದು ಡಾಲರ್‌ಗೆ 52 ರೂಪಾಯಿ ಮುಟ್ಟಿತ್ತು. ಈಗ ಜಾಗತೀಕರಣದ ಮತ್ತು ಉದಾರೀಕರಣದ ಮೂರನೇ ಕಾಲಘಟ್ಟದಲ್ಲಿ ರೂಪಾಯಿ ಹಿಂದೆಂದಿಗಿಂತಲೂ ಅತ್ಯಂತ ತೀವ್ರಗತಿಯಲ್ಲಿ ಅಪಮೌಲ್ಯಗೊಂಡಿದೆ.

ಡಾಲರ್ ಎದುರು ರೂಪಾಯಿ ಈ ಪರಿಯಲ್ಲಿ ಅಪಮೌಲ್ಯಗೊಂಡರೆ ಜನಸಾಮಾನ್ಯರಿಗೆ ಅತಿದೊಡ್ಡ ಆಪತ್ತೇ ಎದುರಾಗುತ್ತದೆ. ಏಕೆಂದರೆ ನಮ್ಮ ಆರ್ಥಿಕತೆಯ ಪ್ರಮುಖ ಭಾಗಗಳು ಈಗಲೂ ಡಾಲರ್‌ಗೆ ಅಧೀನವಾಗಿದೆ. ಅಂದರೆ ನಮ್ಮ ಆರ್ಥಿಕತೆಗೆ ಅತ್ಯಗತ್ಯವಾಗಿರುವ ಬಹುಪಾಲು ಸರಕುಗಳನ್ನು ಸ್ವಾತಂತ್ರ್ಯ ಬಂದು 63 ವರ್ಷಗಳಾದ ನಂತರವೂ ಈಗಲೂ ನಾವು ಡಾಲರ್ ಕೊಟ್ಟೇ ಖರೀದಿಸುತ್ತಿದ್ದೇವೆ.

ಒಂದು ಉದಾಹರಣೆಯ ಮೂಲಕ ಈ ವಿಷಯ ಇನ್ನಷ್ಟು ಸ್ಪಷ್ಟವಾಗುತ್ತದೆ. ನಮ್ಮ ಆಮದುಗಳಲ್ಲಿ ಅತ್ಯಂತ ಮುಖ್ಯವಾಗಿರುವುದು ಪೆಟ್ರೋಲಿಯಂ ಉತ್ಪನ್ನಗಳು. ನಮ್ಮ ಪೆಟ್ರೋಲಿಯಂ ಅಗತ್ಯದ ಶೇ.70ರಷ್ಟು ಭಾಗವನ್ನು ನಾವು ವಿವಿಧ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತೇವೆ. ಆ ರಾಷ್ಟ್ರಗಳಿಗೆ ನಾವು ಡಾಲರ್‌ನಲ್ಲೇ ಪ್ರಧಾನವಾಗಿ ಹಣ ಪಾವತಿಸಬೇಕು. ಡಾಲರ್ ಹೇಗೆ ನಮಗೆ ಸಿಗುತ್ತದೆ? ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮ ಸರಕುಗಳನ್ನು ನಾವು ಮಾರಿದಾಗ ನಮಗೆ ಯೂರೋಗಳು ಮತ್ತು ಡಾಲರ್‌ಗಳು ಸಿಗುತ್ತವೆ. ಹಾಗೆಯೇ ನಮ್ಮ ದೇಶಕ್ಕೆ ಉದಾರವಾಗಿ ಬರಮಾಡಿಕೊಳ್ಳುತ್ತಿರುವ ವಿದೇಶಿ ಬಂಡವಾಳದ ಮೂಲಕ ಮತ್ತು ವಿದೇಶದಲ್ಲಿರುವ ಭಾರತೀಯರು ತಮ್ಮ ಸಂಪಾದನೆಯನ್ನು ಭಾರತಕ್ಕೆ ರವಾನಿಸುವ ಮೂಲಕವೂ ನಮ್ಮ ದೇಶದಲ್ಲಿ ಡಾಲರ್ ಸಂಗ್ರಹ ಹೆಚ್ಚುತ್ತದೆ. ಹಾಗೆಯೇ ಇವತ್ತಿದ್ದು ನಾಳೆ ಹಾರಿಹೋಗುವ ಸ್ಟಾಕ್ ಮಾರ್ಕೆಟ್ ಹೂಡಿಕೆಯಿಂದಲೂ ಡಾಲರ್ ಹಾಗೂ ಇತರ ವಿದೇಶಿ ವಿನಿಮಯ ಸಂಗ್ರಹವಾಗುತ್ತದೆ. ಆದರೆ ಅದನ್ನು ನೆಚ್ಚಿಕೊಂಡು ಯಾವುದೇ ಆರ್ಥಿಕ ಯೋಜನೆಗಳನ್ನು ಪ್ಲಾನ್ ಮಾಡಲಾಗುವುದಿಲ್ಲ.

ಒಂದು ದೇಶ ನಿಜಕ್ಕೂ ಸ್ವತಂತ್ರಗೊಂಡಮೇಲೆ ಅದು ಆಮದಿಗೆ ಬದಲಾಗಿ ಸ್ವಾವಲಂಬಿ ಪರ್ಯಾಯಗಳನ್ನು ಹುಡುಕಿಕೊಳ್ಳಬೇಕು. ಆಗ ಮಾತ್ರ ಅರ್ಥದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯ ಕಬಂಧ ಹಸ್ತಗಳಿಂದ ದೇಶದ ಆರ್ಥಿಕತೆ ವಿಮೋಚನೆಗೊಳ್ಳುತ್ತದೆ. ಆದರೆ ನಮ್ಮ ದೇಶ ಸ್ವಾತಂತ್ರ್ಯ ನಂತರವೂ ಈವತ್ತಿಗೂ ಪೆಟ್ರೋಲಿಯಂ ವಿಷಯದಲ್ಲಿ ಸ್ವಾವಲಂಬನೆಯ ಪ್ರಯತ್ನವನ್ನೇ ಮಾಡಲಿಲ್ಲ. ಹೀಗಾಗಿ ಇಂದಿಗೂ ಶೇ.70ರಷ್ಟು ಪೆಟ್ರೋಲಿಯಂ ಅಗತ್ಯಗಳನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಿಂದ ಡಾಲರ್ ಕೊಟ್ಟು ಖರೀದಿಸುತ್ತೇವೆ. ಅದನ್ನು ಕೊಳ್ಳುವಷ್ಟು ಡಾಲರ್ ನಮ್ಮ ಬಳಿ ಇಲ್ಲವೆಂದರೆ ಅಷ್ಟು ಡಾಲರ್ ಅನ್ನು ರೂಪಾಯಿ ಕೊಟ್ಟು ಖರೀದಿಸಬೇಕಾಗುತ್ತದೆ. ಆಗ ಡಾಲರ್ ಎದುರು ರೂಪಾಯಿ ಕುಸಿದಷ್ಟು ಪೆಟ್ರೋಲಿನ ಬೆಲೆ ಜಾಸ್ತಿಯಾಗುತ್ತಾ ಹೋಗುತ್ತದೆ. ಉದಾಹರಣೆಗೆ ಒಂದು ಬ್ಯಾರೆಲ್ ಪೆಟ್ರೋಲಿಯಂ ಬೆಲೆ 100 ಡಾಲರ್ ಇದ್ದು, ಡಾಲರ್ ಬೆಲೆ ಈ ವರ್ಷದ ಪ್ರಾರಂಭದಲ್ಲಿ 46.50 ರೂಪಾಯಿ ಇದ್ದಾಗ ಒಂದು ಬ್ಯಾರೆಲ್ ಪೆಟ್ರೋಲಿಯಂ ಬೆಲೆ 4,650 ರೂಪಾಯಿ ಆಗಿತ್ತು. ಈಗ ಒಂದು ಡಾಲರ್‌ಗೆ 55 ರೂಪಾಯಿ ಆಗಿರುವುದರಿಂದ ಒಂದು ಬ್ಯಾರೆಲ್‌ಗೆ 5,500 ರೂ. ಆಗುತ್ತದೆ. ಅಂದರೆ ಒಂದು ಬ್ಯಾರೆಲ್ ಪೆಟ್ರೋಲಿಯಂಗೆ ಕಳೆದ ವರ್ಷಕ್ಕಿಂತ ಈಗ ಹೆಚ್ಚೂ ಕಡಿಮೆ ಒಂದು ಸಾವಿರ ರೂಪಾಯಿ ಅಧಿಕವಾಗಿ ತೆರಬೇಕಾಗುತ್ತದೆ.

ಈಗಾಗಲೇ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳಿಗೆ ಸಿಕ್ಕಾಪಟ್ಟೆ ಸಬ್ಸಿಡಿಯನ್ನು ಕೊಡುತ್ತಿದೆಯೆಂದೂ, ಅದರಿಂದಾಗಿ ಸರ್ಕಾರದ ವಿತ್ತೀಯ ಕೊರತೆ ಹೆಚ್ಚಾಗಿ ವಿದೇಶಿ ಬಂಡವಾಳಕ್ಕೆ ಪೂರಕವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿಲ್ಲವೆಂದೂ ಪ್ರತಿ ವರ್ಷ ತುತ್ತೂರಿ ಊದುತ್ತಿದೆ. ಅದಕ್ಕೆ ತಕ್ಕಂತೆ ಯುಪಿಎ ಸರ್ಕಾರ ನೇಮಕ ಮಾಡಿದ್ದ ಕಿರೀಟ್ ಪಾರೀಖ್ ಸಮಿತಿಯು ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳಿಗೆ ಕೊಡುತ್ತಿದ್ದ ಎಲ್ಲಾ ಸಬ್ಸಿಡಿಯನ್ನು ವಾಪಸ್ ಪಡೆಯಬೇಕೆಂದು ಶಿಫಾರಸ್ಸು ಮಾಡಿದೆ. ಮೊನ್ನೆ ಡಾಲರ್ ಬೆಲೆ ಹೆಚ್ಚಳದ ಕುರಿತು ಮಾತನಾಡುತ್ತಾ ಕೇಂದ್ರ ಮಂತ್ರಿ ಜೈಪಾಲ್ ರೆಡ್ಡಿ "ಡಾಲರ್ ಎದುರು ರೂಪಾಯಿ ಒಂದಂಕಿ ಕೆಳಗಿಳಿದರೂ ಭಾರತದ ಪೆಟ್ರೋಲ್ ಕಂಪನಿಗಳಿಗೆ ವರ್ಷಕ್ಕೆ 8,000 ಕೋಟಿ ಲಾಸ್ ಆಗುತ್ತದೆ. ಕಳೆದ ವರ್ಷ ಒಂದು ಡಾಲರ್‌ಗೆ 46 ರೂಪಾಯಿ ಇತ್ತು, ಇಂದು 55 ರೂಪಾಯಿಯಾಗಿದೆ. ಹೀಗಾಗಿ ಒಟ್ಟಾರೆ 72,000 ಕೋಟಿ ನಷ್ಟವಾಗಿದೆ" ಎಂದು ಹೇಳಿ "ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಕೂಡಲೇ ಏರಿಸದೆ ಬೇರೆ ವಿಧಿಯಿಲ್ಲ" ಎಂದೂ ಹೇಳಿದ್ದಾರೆ. ಇದು ಡಾಲರ್ ಬೆಲೆ ಏರಿಕೆಯಿಂದಾಗಿ ಸಾಮಾನ್ಯ ಜನರ ಮೇಲೆ ಆಗುವ ನೇರ ಪರಿಣಾಮದ ಒಂದು ವಿಧಾನ. ಆದರೆ ಅದರಿಂದಾಗುವ ಅನಾಹುತವನ್ನು ತಡೆಯಲು ಸರ್ಕಾರ ಹಾಕಿಕೊಳ್ಳುತ್ತಿರುವ ಪರಿಹಾರೋಪಾಯಗಳು ಕಾಯಿಲೆಯ ಕಾರಣಕ್ಕಿಂತಲೂ ಭೀಕರವಾಗಲಿದೆ.

ಅದನ್ನು ಪರಿಶೀಲಿಸುವ ಮುಂಚೆ ಡಾಲರ್ ಬೆಲೆ ಏರಲು ಕಾರಣವೇನೆಂದು ನೋಡೋಣ. ಈಗಾಗಲೇ ಚರ್ಚಿಸಿದಂತೆ ಯಾವ ದೇಶದ ಆರ್ಥಿಕತೆಯು ಜಗತ್ತನ್ನು ಹೆಚ್ಚು ನಿಯಂತ್ರಿಸುತ್ತದೆಯೋ ಆ ದೇಶದ ಕರೆನ್ಸಿ ಜಗತ್ತಿನ ಇತರ ಕರೆನ್ಸಿಯ ಬೆಲೆಯನ್ನೂ ನಿಯಂತ್ರಿಸುತ್ತದೆ. ಇಂದು ಜಗತ್ತಿನ ಬಹುಪಾಲು ದೇಶಗಳು ತಮ್ಮ ಅಂತರರಾಷ್ಟ್ರೀಯ ವಾಣಿಜ್ಯವನ್ನು ಡಾಲರ್‌ನಲ್ಲಿಯೇ ಮಾಡಲು ಬಯಸುತ್ತವೆ. ಏಕೆಂದರೆ ಅಮೆರಿಕದ ಆರ್ಥಿಕತೆ ಮತ್ತು ರಾಜಕಾರಣ ಇಂದು ಜಗತ್ತನ್ನೇ ನಿಯಂತ್ರಿಸುತ್ತಿದೆ. ಅದರ ಜಾಗವನ್ನು ಈ ಮಧ್ಯೆ ಯೂರೋ ಕಬಳಿಸುತ್ತಿತ್ತು. ಆದರೆ ಇತ್ತೀಚೆಗೆ ಹಲವು ಯೂರೋಪಿಯನ್ ಬ್ಯಾಂಕುಗಳು ಮುಳುಗಿಹೋದವು ಮತ್ತು ಯೂರೋಪಿಯನ್ ಆರ್ಥಿಕತೆ ಬಿಕ್ಕಟ್ಟಿಗೆ ಸಿಲುಕಿದೆ. ಹೀಗಾಗಿ ಯೂರೋ ಹೂಡಿದ್ದ ಹೂಡಿಕೆದಾರರು ಈಗ ಯೂರೋ ಅನ್ನು ಮಾರಿ ದೊಡ್ಡ ಮಟ್ಟದಲ್ಲಿ ಡಾಲರ್ ಅನ್ನು ಖರೀದಿಸುತ್ತಿದ್ದಾರೆ. ಇದರಿಂದಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಡಾಲರ್ ಕೊರತೆ ಏರ್ಪಟ್ಟಿದೆ. ಯಾವುದರ ಸರಬರಾಜು ಕಡಿಮೆ ಇದೆಯೋ ಅದರ ಬೆಲೆ ಏರುವಂತೆ ಕಳೆದ ಮೂರು ತಿಂಗಳಲ್ಲಿ ಡಾಲರ್ ಬೆಲೆ 49 ರೂ.ಗಳಿಂದ 55 ರೂ.ಗಳಿಗೆ ಏರಿಬಿಟ್ಟಿದೆ.

ಇದು ತತ್‌ಕ್ಷಣದ ಕಾರಣ.

## ಚಾರ್ವಾಕ



• ಶಿವಸುಂದರ್

ಡಾಲರ್ ಬೆಲೆ 49 ರೂ. ಇದ್ದದ್ದು 55 ಆಗಲು ಅಂದರೆ 6 ರೂ. ಏರಲು ಇದು ಮ... ಕಾರಣ.

ಆದರೆ 1980ರಲ್ಲಿ ಒಂದು ಡಾಲರ್‌ಗೆ ಕೇವಲ ... ರೂಪಾಯಿ ಇದ್ದದ್ದು ಈಗ 49 ರೂಪಾಯಿ ಆಗಲ... ಅಂದರೆ 39 ರೂಪಾಯಿ ಜಾಸ್ತಿಯಾಗಲು - ಕಾರಣವೇ... 1991ರಲ್ಲಿ 18 ರೂ. ಇದ್ದದ್ದು ನಂತರದಲ್ಲಿ ಪ್ರತಿ... ಕುಸಿಯುತ್ತಲೇ ಹೋಗುವಂತೆ ಹಾದಿಯ... ರೂಪಾಯಿಯನ್ನು ತೂರಿಬಿಟ್ಟವರು ಯಾರು?

ಇದಕ್ಕೆ ಪ್ರಧಾನ ಕಾರಣ 1991ರಿಂದ ನ... ಆರ್ಥಿಕತೆಯಲ್ಲಿ ಬಂದ ಬದಲಾವಣೆ. ಈಗಾಗ... ಚರ್ಚಿಸಿದಂತೆ ಒಂದು ಸ್ವತಂತ್ರ ದೇಶ ಆಮ... ಅವಲಂಬನೆಯನ್ನು ಕಡಿಮೆ ಮಾಡಿಕೊಂ... ಸ್ವಾವಲಂಬನೆಯನ್ನು ಬೆಳೆಸಿಕೊಳ್ಳಬೇಕು. ಆದರೆ ... ನಂತರ ನಾವು ಆಧರಿಸಿರುವ ನೀತಿಯೇ ವಿದೇಶಿ ಅವ... ಬಂಡವಾಳ ಮತ್ತು ಆಮದು ತಂತ್ರಜ್ಞಾನ ಆಧಾ... ಆರ್ಥಿಕತೆಯನ್ನು. ಇದಕ್ಕೆ ಡಾಲರ್ ಮೇಲೆ ಅವಲಂ... ಅತ್ಯಧಿಕ. ಹೀಗಾಗಿ ಅದರೆದುರು ರೂಪಾಯಿ ಮಂಡಿಯ... ಮಣಿಯಬೇಕಾಗುತ್ತದೆ. ಆದ್ದರಿಂದಲೇ ಈಗ ಸರ್ಕಾರ ವ... ರಿಸರ್ವ್ ಬ್ಯಾಂಕುಗಳು ಈ ಬಿಕ್ಕಟ್ಟಿನಿ... ಹೊರಬರಬೇಕಾದರೆ ಇನ್ನೂ ಹೆಚ್ಚು ವಿದೇಶಿ ಬಂಡ... ಹೂಡಿಕೆಯನ್ನು ಬರಮಾಡಿಕೊಳ್ಳಬೇಕು. ಆಗ ಹೆಚ್... ಡಾಲರ್ ಸಿಗುತ್ತದೆ. ಹಾಗೆ ವಿದೇಶಿ ಬಂಡವ... ಬರಬೇಕೆಂದರೆ ಅವರಿಗೆ ನಮ್ಮ ಆರ್ಥಿಕತೆಯಲ್ಲಿ ಈವ... ಯಾವ್ಯಾವುದು ಮುಕ್ತವಾಗಿಲ್ಲವೋ ಅಂದರೆ ಚಿಲ್ಲರೆ ವ್ಯಾ... ಇನ್ನಿತ್ಯಾದಿಗಳನ್ನು ಸಂಪೂರ್ಣವಾಗಿ ಮುಕ್ತಗೊಳಿಸಬೇ... ಆ ವಿದೇಶಿ ಬಂಡವಾಳ ನಮ್ಮಲ್ಲಿ ಹೂಡಲು ಆ... ತೋರಬೇಕೆಂದರೆ ಸರ್ಕಾರದ ಹಣಕಾಸು ವ್ಯವಹಾರ ... ಇರಬೇಕು. ಹಾಗಿರಬೇಕೆಂದರೆ ಸರ್ಕಾರ ಜನ... ಕೊಡುತ್ತಿರುವ ಎಲ್ಲಾ ರಿಯಾಯತಿಗಳನ್ನು ಹಿಂತೆಗೆದುಕೊಂ... ಆ ಮೊತ್ತವನ್ನು ವಿದೇಶಿ ಬಂಡವಾಳಕ್ಕೆ ಪೂರಕವ... ಬಳಸಬೇಕೆಂದು ಯೋಜನೆ ಹಾಕಿದೆ.

ಅರ್ಥಾತ್ ಪೆಟ್ರೋಲ್ ಬೆಲೆ ಏರಿಸು... ಈವರೆಗೆ ಜನತೆಯ ಕಲ್ಯಾಣಕ್ಕೆಂದು ಸರ್ಕಾ... ವೆಚ್ಚ ಮಾಡುತ್ತಿರುವ ಎಲ್ಲಾ ಹಣವ... ಹಿಂತೆಗೆದುಕೊಳ್ಳುವ ಮತ್ತು ವಿದೇ... ಬಂಡವಾಳದ ಆಕರ್ಷಣೆಯ ಹೆಸರಲ್ಲಿ ... ದೇಶದ ಸಂಪನ್ಮೂಲಗಳನ್ನೆಲ್ಲಾ ದುಗ್ಗ... ಬೆಲೆಗೆ ಅವರಿಗೆ ಮಾರುವ ದೇಶದ್ರೋ... ಆರ್ಥಿಕತೆಯನ್ನೇ ಇನ್ನಷ್ಟು ತೀವ್ರವಾಗಿ ಜಾ... ತರುವುದೇ ಪರಿಹಾರವೆಂದು ಸರ್ಕಾ... ಹೇಳುತ್ತಿದೆ.

ಡಾಲರ್ ಮತ್ತು ವಿದೇಶಿ ಬಂಡವಾಳದ ಮೇ... ಆಮದು ಅವಲಂಬಿತ ಆರ್ಥಿಕತೆಯಿಂದ ಹೊರಬಾರ... ಏಷಿಯಾದ ಮತ್ತು ಲ್ಯಾಟಿನ್ ಅಮೆರಿಕದ ಹಲವು ದೇಶ... ಮತ್ತು ಯೂರೋಪಿನ ಗ್ರೀಸ್‌ನಂಥ ದೇಶಗಳೂ ಇವ... ಬೀದಿ ಭಿಕಾರಿಗಳಾದದ್ದು ಇತ್ತೀಚಿನ ಇತಿಹಾಸ. ನ... ದೇಶವೂ ಅದೇ ದಾರಿ ಹಿಡಿಯುತ್ತಿದೆ ಎಂಬುದನ್ನು ಡಾಲರ್ ಬಿಕ್ಕಟ್ಟು ತೋರಿಸುತ್ತಿದೆ.

## ನೋ ಕಾಮೆಂಟ್ಸ್

### ನೋ ಕಾಮೆಂಟ್ಸ್

"ಒಬ್ಬ ಮುಸ್ಲಿಮ್, ಒಬ್ಬ ಸಿಖ್, ಒಬ್ಬ ದಲಿತ, ಹಲವು ಹಿಂದೂಗಳು ಆದ ಮೇಲೆ ಈ ದೇಶದಲ್ಲಿ ಮಹಿಳೆಯೊಬ್ಬಳು ರಾಷ್ಟ್ರಪತಿಯಾಗುವ ಅವಕಾಶ ಸಿಕ್ಕಿತು. ಆದರೆ ಪ್ರತಿಭಾ ಪಾಟೀಲರ ಕಳೆದ ಐದು ವರ್ಷಗಳ ಅವಧಿಯನ್ನು ನೋಡಿದರೆ ಅಪೂರ್ವ ಅವಕಾಶವೊಂದನ್ನು ಕಳೆದುಕೊಂಡ ಭಾವನೆ ಉಂಟಾಗುತ್ತದೆ. ಕೆಲವು ವಿದೇಶೀ ಪ್ರವಾಸಗಳನ್ನು ಬಿಟ್ಟರೆ ಪ್ರತಿಭಾ ಪಾಟೀಲರ ಅವಧಿಯಲ್ಲಿ ಯಾವುದೇ ವಿಶೇಷಗಳು ಸಂಭವಿಸಲಿಲ್ಲ. ಮಹಿಳೆಯೊಬ್ಬರು ಅಧ್ಯಕ್ಷೆಯಾದ್ದರಿಂದ ಆ ಸ್ಥಾನಕ್ಕೆ ಯಾವುದೇ ವಿಶೇಷ ಬಗೆಯ ಘನತೆ, ಅರ್ಥ ಮತ್ತು ಚೈತನ್ಯವನ್ನು ಪ್ರತಿಭಾ ತಂದುಕೊಡದೇ ಇದ್ದದ್ದು ಅತಿ ವಿಷಾದನೀಯ ಸಂಗತಿ."


- ಊರ್ವಶಿ ಭುಟಾಲಿಯಾ, ಚಿಂತಕಿ

"ಗುಲ್ಬರ್ಗಾ, ಬೀದರ್, ರಾಯಚೂರು, ಯಾದಗಿರಿ, ಕೊಪ್ಪಳ ಜಿಲ್ಲೆಗಳಲ್ಲಿ ಗಣಿತ, ವಿಜ್ಞಾನ ಹಾಗೂ ಇಂಗ್ಲಿಷ್ ಬೋಧಕರ ಬರ ಸದಾ ಹಸಿರು. ಇಲ್ಲಿ 10 ನೇ ತರಗತಿ ಮಕ್ಕಳು ಹೆಚ್ಚು ಫೇಲಾಗೋದು ಸಹ ಇದೇ ವಿಷಯಗಳಲ್ಲಿ. ಇಲ್ಲಿನ ಅಫ್ಜಲ್ಪುರ, ಆಳಂದ, ಚಿತ್ತಾಪುರ, ಚಿಂಚೋಳಿಯಂಥ ಗಡಿಭಾಗಕ್ಕಂಟಿಕೊಂಡಿರುವ ತಾಲ್ಲೂಕು ಶಾಲೆಗಳಲ್ಲಿ ಇಂದಿಗೂ ಒಬ್ಬನೇ ಶಿಕ್ಷಕ ಸರತಿಯಲ್ಲಿ ನಾಲ್ಕಾರು ಊರುಗಳನ್ನು ತಿರುಗಿ ಬೋಧನೆ ಮಾಡುವ ಅನಿವಾರ್ಯತೆ ಕಾಡುತ್ತಿದೆ. ಇಲ್ಲಿನ ಶಿಕ್ಷಕರ ನೇಮಕಾತಿ ನಿರಂತರ ನಡೆದರೂ ಅಲ್ಪಾವಧಿಗೆ ಬಂದುಹೋಗುವವರೇ ಹೆಚ್ಚು. ನೇಮಕಾತಿಗಷ್ಟೆ ಹೈ-ಕ ಪ್ರದೇಶವನ್ನು ನೆಲವಾಗಿ ಮಾಡಿಕೊಂಡು ಅನೇಕರು ಒಂದೆರಡು ತಿಂಗಳಲ್ಲಿ ವರ್ಗಾವಣೆ ಮಾಡಿಸಿಕೊಂಡು ಜಾಗ ಖಾಲಿ ಮಾಡಿದಾಗ ಶಿಕ್ಷಕರ ಖಾಲಿ ಹುದ್ದೆ ಭರ್ತಿ ಆಗುವುದು ಹೇಗೆ?"

- ಶೇಷಮೂರ್ತಿ ಅವಧಾನಿ, ಪತ್ರಕರ್ತ

"ಕೋಮು ಹಿಂಸಾಚಾರದಲ್ಲಿ ಕಳೆದ ಮೂರು ವರ್ಷಗಳಲ್ಲಿ 344 ಮಂದಿ ಸಾವಿಗೀಡಾಗಿದ್ದಾರೆ. ಇದರಲ್ಲಿ ಬಿಜೆಪಿ ಆಡಳಿತವಿರುವ ಕರ್ನಾಟಕದಲ್ಲಿ 261 ಘಟನೆಗಳು ಸಂಭವಿಸಿದ್ದು 54 ಮಂದಿ ಸಾವನ್ನಪ್ಪಿದ್ದಾರೆ. ಮತ್ತು 725 ಮಂದಿಗೆ ಗಾಯಗಳಾಗಿವೆ."

- ಕೇಂದ್ರ ಗೃಹ ಖಾತೆ ಹೇಳಿಕೆ



"ಕಪ್ಪುಹಣದ ಬಗ್ಗೆ ಯುಪಿಎ ಸರ್ಕಾರ ಪ್ರಕಟಿಸಿದ ಶ್ವೇತಪತ್ರ, ಒಂದು ಮಾಹಿತಿಪೂರ್ಣ ದಾಖಲೆಯಲ್ಲವೇ ಅಲ್ಲ. ಅದು ಒಂದು ತರದಲ್ಲಿ ಬಿಕನಿ ಶ್ವೇತಪತ್ರ. ಅಸಲು ನೋಡಬಯಸುವುದನ್ನೆಲ್ಲಾ ಮುಚ್ಚಿಟ್ಟುಕೊಂಡು ಬೇಡವಾದದ್ದನ್ನ ತೋರಿಸುತ್ತದೆ."

- ಜಸ್ವಂತ್ ಸಿಂಗ್

### ನಂಬಿದ್ರೆನಂಬಿ ಬಿಟ್ರೆಬಿಡಿ

"ಬಂಗಾಳದ ಸಿಪಿಎಂನವರು ಮಾವೋವಾದಿಗಳ ಜೊತೆ ಸೇರಿ ನನ್ನನ್ನು ಮುಗಿಸಲು ಸಂಚು ಮಾಡಿದ್ದಾರೆ. ಅವರಿಗೆ ಉತ್ತರ ಕೊರಿಯಾ, ವೆನಿಜುಯೇಲಾ ಮತ್ತು ಹಂಗೇರಿಯಿಂದ ಹಣ ಸರಬರಾಜಾಗುತ್ತಿದೆ."


- ಮಮತಾ ಬ್ಯಾನರ್ಜಿ

### ಭೂತದ ಬಾಯಲ್ಲಿ ಭಗವದ್ಗೀತೆ

"ಪ್ರಾಮಾಣಿಕ ಅಧಿಕಾರಿಗಳನ್ನು ಉಳಿಸಿಕೊಳ್ಳುವುದು ಸರಕಾರದ ಆದ್ಯತೆಯಾಗಬೇಕು. ಹಾಗಿದ್ದರೆ ಮಾತ್ರ ಅಂತಹ ಅಧಿಕಾರಿಗಳಲ್ಲಿ ಆತ್ಮವಿಶ್ವಾಸ ತುಂಬಲು ಸಾಧ್ಯ. ಇಲ್ಲದಿದ್ದರೆ ಅವರು ಮುಕ್ತವಾಗಿ ಕಾರ್ಯನಿರ್ವಹಿಸಲು ಅಸಾಧ್ಯ."

- ನಾರಾಯಣಮೂರ್ತಿ

### ಅಂದರೆ, ಆತ್ಮಹತ್ಯೆ ಮಾಡಿಕೊಳ್ಳಲು ಒತ್ತಡ ಹಾಕುವುದಿಲ್ಲ ಅಂತಾನಾ?



"ಯಡಿಯೂರಪ್ಪನವರಿಗೆ ಬಂದಿರುವ ಕಷ್ಟಗಳು ನಮಗೆ ಬಂದಿದ್ದರೆ ಎದುರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆವು. ಅವರ ಧೈರ್ಯವನ್ನು ಮೆಚ್ಚಲೇಬೇಕು. ಆದರೆ ಯಡಿಯೂರಪ್ಪನವರು ನೋವಿನಲ್ಲಿದ್ದಾರೆ. ಅವರ ಮೇಲೆ ಒತ್ತಡ ಹಾಕುವುದಿಲ್ಲ."

- ಈಶ್ವರಪ್ಪ

### ಅಪಕ್ವ ಪ್ರಜಾತಂತ್ರದ ವಿಕೃತಿಗಳಿವರು

"ಮಡೆಸ್ನಾನ ನಿಷೇಧ ಮಾಡುವ ಮುನ್ನ ಸಾರ್ವಜನಿಕರ ನೆಮ್ಮದಿ... ಮತ್ತು ಬದುಕನ್ನು ಅಸಹನೀಯಗೊಳಿಸಿರುವ ಮದ್ಯಪಾನ, ಅಶ್ಲೀಲ ವರ್ತನೆ... ಅರೆನಗ್ನ ಪ್ರದರ್ಶನ, ಇನ್ನಿತ್ಯಾದಿಗಳಿಂದ ಮನುಷ್ಯನ ಮನಸ್ಸಿನ ಮೇಲೆ... ದುಷ್ಪರಿಣಾಮ ಉಂಟುಮಾಡುತ್ತಿರುವ ಸಿನಿಮಾ, ದೂರದರ್ಶನ ಮತ್ತು ಪತ್ರಿಕೆಯನ್ನು ನಿಷೇಧಿಸಬೇಕು. ಸರ್ಕಾರ ಮಡೆಸ್ನಾನ ನಿಷೇಧಿಸಿದರೆ ವ್ಯಕ್ತಿಯ... ಮತೀಯ ಸ್ವಾತಂತ್ರ್ಯ ಹಾಗೂ ಇಚ್ಛೆಗೆ ಧಕ್ಕೆಯಾಗಲಿದೆ."

- ಶ್ರೀ ಕೃಷ್ಣಾ ಪ್ರಜ್ಞಾ ಪ್ರತಿಷ್ಠಾನ...

### ಅಂದರೆ 72,000 ಕೋಟಿ ತೆರಿಗೆ ಹೊರೆ ಜನರ ಮೇಲೆ?

"ಡಾಲರ್ ಎದುರು ರೂಪಾಯಿ ಒಂದಂಕಿ ಕೆಳಗಿಳಿದರೂ ಭಾರತದ ಪೆಟ್ರೋಲ್ ಕಂಪನಿಗಳಿಗೆ ವರ್ಷಕ್ಕೆ 8,000 ಕೋಟಿ ಲಾಸ್ ಆಗುತ್ತದೆ. ಕಳೆದ ವರ್ಷ ಒಂದು ಡಾಲರ್‌ಗೆ 46 ರೂಪಾಯಿ ಇತ್ತು, ಇಂದು 55 ರೂಪಾಯಿಯಾಗಿದೆ. ಹೀಗಾಗಿ ಒಟ್ಟಾರೆ 72,000 ಕೋಟಿ ನಷ್ಟವಾಗಿದೆ."

- ಜೈಪಾಲ್ ರೆ...

# ಹೀಗೊಂದು ಮದುವೆ...

## ಕಂಡಹಾಗೆ



• ಗೌರಿ ಲಂಕೇಶ್

ಕಡೇನಂದಿಹಳ್ಳಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ...ಲ್ಲೂಕಿನಲ್ಲಿರುವ ಒಂದು ಕುಗ್ರಾಮ. ಹತ್ತಿರಹತ್ತಿರ ಐನೂರು ...ನೆಗಳಿರುವ ಈ ಹಳ್ಳಿಯಲ್ಲಿ ದ್ವಾರದಲ್ಲೇ ಸುಮಾರು ...ರು ವರ್ಷದಷ್ಟು ಹಳೆಯದಾದ ಪುಟ್ಟ ಶಾಲೆ ಇದೆ. ...ಗ ಈ ಹಳ್ಳಿಯ ಎಲ್ಲರ ಕೈಗಳಿಗೆ ಮೊಬೈಲ್ ಫೋನ್‌ಗಳು ...ದಿದ್ದರೂ ಹಳ್ಳಿಗೆ ಇಲ್ಲಿಯ ತನಕ ಒಂದು ಆಲೋಪಥಿಕ್ ...ಸ್ಪತ್ರೆ ಬಂದಿಲ್ಲ.

...ಹಳೆ ಮೈಸೂರು ಸಂಸ್ಥಾನದ ಕೊನೆ ಹಳ್ಳಿಯಾಗಿದ್ದ ...ಡೇನಂದಿಹಳ್ಳಿ ತನ್ನ ಚಹರೆಯಲ್ಲಿ ನಮ್ಮ ಬಹಳಷ್ಟು ...ಳ್ಳಿಗಳಂತೆಯೇ ಇದೆ. ಉದಾಹರಣೆಗೆ 'ಕೆಟ್ಟದಿಕ್ಕು' ಎಂದೇ ...ಗಣಿಸಲಾಗುವ ದಕ್ಷಿಣಕ್ಕೆ ದಲಿತರ ಕೇರಿ ಇದೆ. ...ದಾದನಂತರ ಮಧ್ಯಮ ಜಾತಿಗಳ ಕೇರಿ. ಅದಾದನಂತರವೇ ...ಮೇಲು ಜಾತಿಯ' ಲಿಂಗಾಯತರ ಮನೆಗಳಿವೆ. ಲಿಂಗಾ...ಯತರ ಕೇರಿಯ ಪಕ್ಕವೇ ಒಂದು ಹಳೇ ದೇವಸ್ಥಾನ ...ಇ. ಅದೀಗ ಹಾಳು ಬಿದ್ದಿರುವುದರಿಂದ ಅದರ ಪಕ್ಕದಲ್ಲೇ ...ದು ಹೊಸ ದೇವಸ್ಥಾನ ನಿರ್ಮಾಣದ ಕೆಲಸ ನಡೆಯುತ್ತಿದೆ. ...ವಸ್ಥಾನದ ಪಕ್ಕದಲ್ಲೇ ಇರುವ ಶಾಲಾ ಕಟ್ಟಡ ಸುಣ್ಣದ ...ಮುಖ ನೋಡಿ ಹಲವಾರು ವರ್ಷಗಳೇ ಆಗಿದ್ದರೂ ಅದರ ...ತ್ರವೇ ಕೆತ್ತನೆಗಳನ್ನು ಹೊಂದಿರುವ ಕಲ್ಲಿನ ಗೋಡೆಗಳು ...ವಸ್ಥಾನಕ್ಕೆಂದು ಸಿದ್ಧವಾಗುತ್ತಿರುವುದು ಕಡೇನಂದಿಹಳ್ಳಿಯ ...ಕ್ಕೊಂದು ಮುಖವೊಂದನ್ನು ಅನಾವರಣ ಮಾಡುವಂತಿದೆ. ...ಸ್ವಲ್ಪ ಎತ್ತರದ ಪ್ರದೇಶದಲ್ಲಿ ಈ ಹಳ್ಳಿ ಇದ್ದು ಇದರ ...ತ್ತ 32 ಚಿಕ್ಕ ಮತ್ತು ದೊಡ್ಡ ಕೆರೆಗಳಿವೆ.

...ರಾತನ ಕಾಲದ ಈ ಕೆರೆಗಳನ್ನು ಎಷ್ಟು ವ್ಯವಸ್ಥಿತವಾಗಿ ...ರ್ಮಿಸಲಾಗಿದೆ ಎಂದರೆ ಒಂದು ಕೆರೆಯ ನೀರು ತುಂಬಿದರೆ ...ನ್ನೊಂದು ಕೆರೆಗೆ ಹೋಗುವಂತೆ ಹಾಗೂ ಊರಿನ ಎಲ್ಲಾ ...ಗಳು ತುಂಬಿದ ನಂತರವಷ್ಟೇ ಆ ಊರಿನಲ್ಲಿ ಬಿದ್ದ ...ಳೆನೀರು ಪಕ್ಕದ ಹಿರೇಕೆರೂರಿನ ದುರ್ಗಮ್ಮನ ಕೆರೆಗೆ ...ಹೋಗುವಂತೆ ವ್ಯವಸ್ಥೆ ಮಾಡಲಾಗಿದೆ. ಏಳನೆ ತರಗತಿತನಕ ...ಇರುವ ಶಾಲೆಯಲ್ಲಿ ಓದಿದ ನೂರಾರು ಹಳ್ಳಿಯ ...ಡುಗರು ಆನಂತರ ಹತ್ತಿರದ ಪೇಟೆಗಳಲ್ಲಿ ತಮ್ಮ ...ದ್ಯಾಭ್ಯಾಸವನ್ನು ಮುಗಿಸಿ, ರಾಜ್ಯದ ವಿವಿಧ ಭಾಗಗಳಲ್ಲಿ ...ಕಾರಿ ನೌಕರರಾಗಿ, ಇಂಜಿನಿಯರ್‌ಗಳಾಗಿ, ವೈದ್ಯರಾಗಿ, ...ಧ್ಯಾಪಕರಾಗಿ, ವಕೀಲರಾಗಿ ಬದುಕುತ್ತಿದ್ದಾರೆ.

...ನೀರಾವರಿ ಇಲ್ಲದಿರುವುದರಿಂದ ಈ ಹಳ್ಳಿಯ ...ಷಿಗಳು ಮಳೆಯನ್ನೇ ಆಧರಿಸಿದ್ದಾರೆ. ಹೆಚ್ಚಿನವರು ...ಹಿಡುವಳಿದಾರರಾಗಿದ್ದು, ಹತ್ತಿ ಮತ್ತು ಮೆಕ್ಕೆ ಜೋಳ ...ಯುತ್ತಾರೆ. ಪ್ರೊ. ಎಂ.ಡಿ.ನಂಜುಂಡಸ್ವಾಮಿ ಅವರು ...ದ್ದಾಗ ಈ ಹಳ್ಳಿಯ ಒಂದಿಷ್ಟು ಜನ ರೈತಸಂಘದೊಂದಿಗೆ ...ತಿಸಿಕೊಂಡಿದ್ದರೂ ಆ ಸಂಘಟನೆಯ ಪ್ರಗತಿಪರ ...ಲೋಚನೆಗಳು ಇಲ್ಲಿನ ಬದುಕನ್ನು ತಟ್ಟಲೇ ಇಲ್ಲ. ...ಲ್ಲಿಯತನಕ ಯಾವ ಪ್ರಗತಿಪರ ಚಿಂತನೆಯಾಗಲಿ, ...ಳುವಳಿಯಾಗಲಿ ಕಡೇನಂದಿಹಳ್ಳಿಯನ್ನು ಪ್ರಭಾವಿಸಲಿಲ್ಲವಾದ್ದ...ದ ಇದು ಒಂದು ರೀತಿಯಲ್ಲಿ ಜಗತ್ತಿಗೆ ...ನ್ನೂ ಅಷ್ಟಾಗಿ ತೆರೆದುಕೊಳ್ಳದೇ ಇರುವ ...ಗ್ರಾಮ ಎಂದರೂ ತಪ್ಪಾಗಲಿಕ್ಕಿಲ್ಲ.

...ಇಂತಹ ಒಂದು ಹಳ್ಳಿಯಲ್ಲಿ ಕಳೆದ ವಾರ ...ದು ಅಪರೂಪದ ಘಟನೆ ನಡೆ ಯಿತು. ...ು ನಮ್ಮ ಕುಮಾರ್ ಬುರಡಿಕಟ್ಟಿ ಮತ್ತು ...ತಾ ಸಿ.ಎನ್. ಮಾಡಿಕೊಂಡ ಸರಳ ...ದುವೆ. ಈಗ ಕಡೇನಂದಿಹಳ್ಳಿಯಲ್ಲಿ ...ಾತ್ರವಲ್ಲದೆ ಸುತ್ತಮುತ್ತಲಿನ ಹತ್ತಾರು ...ಗ್ರಾಮಗಳಲ್ಲಿ ಈ ಮದುವೆಯದ್ದೇ ಸುದ್ದಿ!

...ಕುಮಾರ್ ಬುರಡಿಕಟ್ಟಿ ನಮ್ಮ ಸಂಸ್ಥೆಯಲ್ಲಿ ...ಸ ಮಾಡುತ್ತಿದ್ದ ಹುಡುಗ. (ಈಗ 'ದ ...ಡೇ ಇಂಡಿಯನ್' ಎಂಬ ಪಾಕ್ಷಿಕದಲ್ಲಿ ...ಸೋಸಿಯೇಟ್ ಎಡಿಟರ್ ಆಗಿ ಕೆಲಸ ಮಾಡುತ್ತಿದ್ದಾನೆ) ...ನ್ನಂತೆಯೇ ಪ್ರಗತಿಪರ ಚಿಂತನೆಗಳನ್ನು ...ಗೂಡಿಸಿಕೊಂಡಿರುವ, ಜನಪರ ಹೋರಾಟಗಳಲ್ಲಿ ...ಯವಾಗಿಯುವ ಯುವಕ. ನಗು ಮುಖದ, ತಮಾಷೆಯ ...ಮಾರ್ ಕಂಡರೆ ನನಗೆಷ್ಟು ಪ್ರೀತಿ ಅಂದರೆ ನಾನು ...ನನ್ನು 'ಕೂಸೆ' ಎಂದು ಕರೆದರೆ ಆತ ನನ್ನನ್ನು 'mom' ...ಂದು ಕರೆಯುತ್ತಾನೆ.

...ಇಂತಹ ಕುಮಾರ್‌ಗೆ ಮದುವೆ ಮಾಡಲು ಅವನ ...ಹೋದರರು ನಿರ್ಧರಿಸಿದರು. ಆಗ ಕುಮಾರ್ ಹಾಕಿದ ...ಷರತ್ತುಗಳು ಹುಡುಗಿಯ ಮನೆಯವರು ವರದಕ್ಷಿಣೆ ...ಡಬಾರದು ಮತ್ತು ಸರಳ ಮದುವೆಗೆ ಒಪ್ಪಬೇಕು ...ಬುದು.

...ಈಗ ನಮ್ಮ ಸಮಾಜದಲ್ಲಿ ಈ ವರದಕ್ಷಿಣೆ ಎಂಬ ...ಗು ಯಾವ ಮಟ್ಟಕ್ಕೆ ಹಬ್ಬಿದೆ ಎಂದರೆ ಪ್ರಗತಿಪರ ...ಯುವಕನೊಬ್ಬ ತನಗೆ ವರದಕ್ಷಿಣೆ ಬೇಡವೆಂದರೆ ಆತನಲ್ಲಿ ...ಏನೋ ಐಬಿದೆ ಎಂದೇ ಹುಡುಗಿಯ ಮನೆಯವರು ...ಸಿ ಮದುವೆ ಮಾತುಕತೆಯನ್ನೇ ನಿಲ್ಲಿಸುತ್ತಾರೆ. ಪರಿಸ್ಥಿತಿ ...ಇರುವಾಗ ವರದಕ್ಷಿಣೆ ಮಾತ್ರವಲ್ಲ, ಹೆಚ್ಚಿನ ಜನ ಒಪ್ಪದೇ ...ಇರುವ, ಸಂಪ್ರದಾಯ ಮದುವೆಗಳಿಗೆ ಸಿಗುವಷ್ಟು ಸಾಮಾಜಿಕ ...ನ್ಯತೆ ಸಿಗದಿರುವ ಈ 'ಸರಳ ಮದುವೆ' ಆಗಬೇಕೆನ್ನುವ ...ಹುಡುಗನಿಗೆ ಯಾರು ತಾನೆ ತಮ್ಮ ಮಗಳನ್ನು ಕೊಡಲು ...ಒಪ್ಪುತ್ತಾರೆ?

...ಕುಮಾರನ ಆಶೆಗಳಿಗೆ ಮೊದಲು ಸ್ಪಂದಿಸಿದವರು ...ನ ಮೂವರು ಸಹೋದರರು. ಹಿರಿಯ ಸಹೋದರ ...ಎಸ್. ಬುರಡಿಕಟ್ಟಿ ರಾಣೇಬೆನ್ನೂರಿನಲ್ಲಿ ವಕೀಲರಾಗಿದ್ದು ಪ್ರಗತಿಪರ ಚಿಂತನೆಗಳನ್ನು ಹೊಂದಿರುವವರು. ಎರಡನೆ ಅಣ್ಣ ಕಲ್ಲಪ್ಪ ಕೃಷಿಕರಾಗಿದ್ದರೂ ತಮ್ಮ ಸಹೋದರರು ಸರಿಯಾದದ್ದನ್ನೇ ಮಾಡುತ್ತಾರೆಂಬ ನಂಬಿಕೆ ಇಟ್ಟುಕೊಂಡಿರುವವರು. ಮೂರನೆ ಅಣ್ಣ ರಾಜೇಂದ್ರ. ತೀರ್ಥಹಳ್ಳಿಯಲ್ಲಿ ಶಾಲಾ ಮಾಸ್ಟರ್ ಆಗಿದ್ದು, ಸೂಕ್ಷ್ಮ ಸಂವೇದನೆಯ ಕವಿಯೂ ಆಗಿದ್ದಾರೆ. ಈಗ ತೀರ್ಥಹಳ್ಳಿಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿರುವ ರಾಜೇಂದ್ರ ಸ್ವತಃ ಮಂತ್ರ ಮಾಂಗಲ್ಯ ಮಾಡಿಕೊಂಡಿದ್ದವರು. ಇನ್ನು ಕುಮಾರನ ವಿಧವಾ ತಾಯಿ ವೀರಮ್ಮನವರು ಪುತ್ರರ ಜನಪರ ಚಿಂತನೆಗಳಿಗೆ ಸ್ಪಂದಿಸುವವರು.

ಇಂತಹ ಬುರಡಿಕಟ್ಟಿ ಸಹೋದರರಿಗೆ ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕಿನ ಬೆನಕನಕೊಂಡ ಗ್ರಾಮದ ಚೆನ್ನಬಸಪ್ಪ ಮತ್ತು ಲಲಿತಾ ಅವರ ಮಗಳು ಗೀತಾ ಬಗ್ಗೆ ಕುಮಾರ್ ಅವರ ಸಂಬಂಧಿಯೇ ಆಗಿರುವ ಮುದೇನೂರ್ ಮಂಜು ಎಂಬುವವರು ಹೇಳಿದರು. ಅದು ಸಣ್ಣ ಹಿಡುವಳಿ ಹೊಂದಿರುವ ಸಾಮಾನ್ಯ ರೈತ ಕುಟುಂಬ. ತಮ್ಮ ಇಬ್ಬರು ಹೆಣ್ಣುಮಕ್ಕಳಿಗೆ ತಮ್ಮ ಕೈಲಾದಷ್ಟು ವಿದ್ಯೆ ಕೊಡಿಸಿರುವವರು. ಆದರೆ ಸರಳ ಮದುವೆ, ಪ್ರಗತಿಪರತೆ ಇತ್ಯಾದಿಗಳ ಬಗ್ಗೆ ಕಂಡುಕೇಳರಿಯದವರು.

ಚೆನ್ನಬಸಪ್ಪ ದಂಪತಿಗಳಿಗೆ ಮತ್ತು ಅವರ ಪುತ್ರಿ ಗೀತಾಳಿಗೆ ಕುಮಾರ್ ಒಪ್ಪಿಗೆಯಾದ. ಆದರೆ ಕಷ್ಟದ ಕೆಲಸ ಎದುರಾಗಿದ್ದೇ ಆನಂತರ. ರಾಜೇಂದ್ರ ಮತ್ತು ಇತರ ಸಹೋದರರು ಚೆನ್ನಬಸಪ್ಪನವರ ಕುಟುಂಬದವರಿಗೆ ಪುರೋಹಿತಶಾಹಿಗಳು ಇರದಂತಹ, ಮಹೂರ್ತ-ಗಳಿಗೆಗಳನ್ನು ಗಮನಕ್ಕೆ ತೆಗೆದುಕೊಳ್ಳದಂತಹ 'ಮಂತ್ರ ಮಾಂಗಲ್ಯ' ಎಂಬ ಸರಳ ಮದುವೆ ಬಗ್ಗೆ ವಿವರಿಸಿದರು. ಅದಕ್ಕೆ ಒಪ್ಪಿಸಲು ತಿಣುಕಾಡಿದರು. ಬಹಳ ಶ್ರಮ ವಹಿಸಿದ ನಂತರ ಚೆನ್ನಬಸಪ್ಪ ಮತ್ತು ಅವರ ಮಡದಿ ಲಲಿತಮ್ಮ ಒಪ್ಪಿಕೊಂಡರು. ಆದರೆ ಅವರ ಪುತ್ರಿ ಗೀತಾ ತಕರಾರೆತ್ತಿದಳು. "ಇದೆಂತಹ ಮದುವೆ? ನನಗೆ ಸರಿಯಾಗಿ ಮದುವೆ ಮಾಡಿಸಿಕೊಡಿ" ಎಂದಳು. ಆದರೆ ಚೆನ್ನಬಸಪ್ಪನವರು ಬುರಡಿಕಟ್ಟಿ ಸಹೋದರರು ಹೇಳಿದಂತೆಯೇ ಮದುವೆ ನಡೆಯಲಿ ಎಂದರು.

ಅಷ್ಟು ಸಾಕಾಯಿತು, ಗೀತಾಳ ಊರಲ್ಲಿ ಜನ ಗುಸುಗುಸು ಮಾತನಾಡಿಕೊಳ್ಳಲು. "ಹುಡುಗ ವರದಕ್ಷಿಣೆ ಬೇಡ ಅಂದನಂತೆ. ಅವನಲ್ಲಿ ಏನೋ ಐಬು ಇರಬೇಕು. ಮದುವೆಯಲ್ಲಿ ಅಯ್ನೋರು ಇರಲ್ಲವಂತೆ. ಅದೇನೋ ಭಾಷಣ ಮಾಡುತ್ತಾರಂತೆ" ಎಂದೆಲ್ಲ ಮಾತನಾಡಿಕೊಂಡರು.



ಕುಮಾರನ ಹಳ್ಳಿಯಲ್ಲೂ ಅಂತಹದ್ದೇ ಪರಿಸ್ಥಿತಿ. "ಆ ದಿನ ಯಾವುದೇ ಮದುವೆ ಮಹೂರ್ತಗಳಿಲ್ಲ. ಯಾವ ಮದುವೆಯೂ ನಡೆಯುತ್ತಿಲ್ಲ. ನೀವು ಹೇಗೆ ಮದುವೆ ಮಾಡುತ್ತಿದ್ದೀರಿ. ಇದೇನು ಲಗ್ನ ಪತ್ರಿಕೆ ಲಗ್ನ ಪತ್ರಿಕೆ ತರ ಇಲ್ಲ? ಇದಕ್ಕೆ ಅರಿಶಿಣ ಹಚ್ಚಿಲ್ಲ? ಸೊಸೈಟಿ ಮೀಟಿಂಗ್ ಆಹ್ವಾನವಿದ್ದಂತಿದೆ. ಮುಹೂರ್ತದ ಬದಲು ಮಾತುಗಾರರ ಹೆಸರುಗಳಿವೆ" ಎಂದೆಲ್ಲ ಪ್ರಶ್ನಿಸಲಾರಂಭಿಸಿದರು. ಮದುವೆ ಸಂಪ್ರದಾಯಿಕ ಮದುವೆಗಳಲ್ಲಾದರೆ ಮೂರು ದಿನ ಮುಂಚಿತವಾಗಿಯೇ ಮದುಮಗನಿಗೆ ಅರಿಶಿಣ ಹಚ್ಚಿ ಹೊರಹೋಗದಂತೆ ಕೂರಿಸಿಬಿಟ್ಟಿರುತ್ತಾರೆ. ಆದರೆ, ಕುಮಾರ್ ಹಿಂದಿನ ದಿನ ಮಧ್ಯರಾತ್ರಿಯ ತನಕವೂ ಸ್ನೇಹಿತರೊಡಗೂಡಿ ಹೊರಗಡೆ ಸುತ್ತಾಡಿಕೊಂಡು ಕೆಲಸ ಮಾಡುತ್ತಿದ್ದದನ್ನು ಕಂಡು ಜನರಿಗೂ ಮತ್ತೂ ಆಶ್ಚರ್ಯ. ಮದುವೆಯ ಬೆಳಗ್ಗೆಯೂ ಯಾರೋ ಒಬ್ಬರು "ಕುಮಾರ, ಇಷ್ಟು ಹೊತ್ತಾದರೂ ಓಲಗದವರು ಬಂದಿಲ್ಲವಲ್ಲಾ?" ಎಂದು ಕೇಳಿದರು. "ಕರೆದಿದ್ದರ ತಾನೆ ಅವರು ಬರೋದು" ಎಂದು ಕುಮಾರ್ ಉತ್ತರಿಸಿದಾಗ ಪ್ರಶ್ನೆ ಕೇಳಿದವನಿಗೆ ಇದೆಂತಹ ಮದುವೆ ಎಂದು ಅಚ್ಚರಿ. ಮದುವೆಗಾಗಿ ಊಟ ತಯಾರಿಸುವವರ ಹತ್ತಿರ ಹೋದಾಗಲೂ ಇದೇ ಸಮಸ್ಯೆ. ಮದುವೆಯ ಹಿಂದಿನ ದಿನ ರಾತ್ರಿ ಎಷ್ಟು ಜನರಿಗೆ ಊಟ ರೆಡಿ ಮಾಡಬೇಕು ಎಂಬ ಅವರ ಪ್ರಶ್ನೆಗೆ "ಯಾರಿಗೂ ಬೇಡ" ಎಂದು ಕುಮಾರ್ ಹೇಳಿದ್ದ, ಅದಕ್ಕೆ ಅವರು ದಿಗ್ಭ್ರಮೆಗೊಂಡು "ಇದು ಮದುವೆ ಸಮಾರಂಭ ತಾನೆ" ಅಂತ ಪ್ರಶ್ನಿಸಿದ್ದರು.

ವಿಧಿ ಇಲ್ಲದೆ ಇಂತಹ ಮದುವೆ ಸಮಾರಂಭಕ್ಕೆ ಒಪ್ಪಿದ್ದ ಗೀತಾ ಕೂಡ "ಅದೇನೋ ಮಾಡಕ್ಕೆ ಹೊರಟಿದ್ದೀರಿ. ಇದು ನನಗೆ ಸರಿ ಕಾಣಿಸಲಿಲ್ಲ ಅಂದರೆ ನಾನು ಬೇರೆಯವರಿಗೆ ಇಂತಹ ಮದುವೆ ಸಮಾರಂಭಕ್ಕೆ ಒಪ್ಪಬೇಡಿ ಅಂತ ಹೇಳ್ತೀನಿ" ಎಂದು ಪದೇ ಪದೇ ಕುಮಾರನಿಗೆ ಎಚ್ಚರಿಕೆ ನೀಡುತ್ತಿದ್ದಳು.

ಇದೆಲ್ಲದರಿಂದಾಗಿ ಇಡೀ ಕಡೇನಂದಿಹಳ್ಳಿಯಲ್ಲಿ ಕುಮಾರನ ಮದುವೆ ಸಮಾರಂಭ ಕುತೂಹಲವನ್ನು ಕೆರಳಿಸಿತ್ತು.

ಹಳ್ಳಿಯಲ್ಲಿ ಒಂದು ಪುಟ್ಟ ಸಮುದಾಯ ಭವನವಿದ್ದರೂ ಬುರಡಿಕಟ್ಟಿ ಕುಟುಂಬದ ಮನೆಯ ಮುಂದೆಯೇ ರಸ್ತೆಗೆ ಬಣ್ಣಬಣ್ಣದ ಶಾಮಿಯಾನ ಹಾಕಿಸಲಾಗಿತ್ತು. ಒಂದು ಕಡೆ ಚಿಕ್ಕ ವೇದಿಕೆ ಇದ್ದರೆ ಇನ್ನೊಂದು ಕಡೆ ಕುರ್ಚಿಗಳನ್ನು ಹಾಕಲಾಗಿತ್ತು. ಹಿಂದಿನ ದಿನವೇ ಮಳೆ ಬಿದ್ದಿದ್ದರಿಂದ ಬಹಳಷ್ಟು ರೈತರಿಗೆ ಬಿತ್ತನೆ ಕೆಲಸ ಕಾದಿತ್ತು. ಆದರೂ ಅವರೆಲ್ಲ ಬೆಳಗ್ಗೆಯೂ ಹೋಗಿ ಹೊಲದಲ್ಲಿ ಆದಷ್ಟು ಕೆಲಸ ಮುಗಿಸಿ ಮದುವೆ ನೋಡಲು ಬಂದಿದ್ದರು. ಮಹಿಳೆಯರಂತೂ ತಮ್ಮ ಕುರ್ಚಿಗಳಲ್ಲಿ ಮನೆ ಜಗುಲಿಯ ಮೇಲೆ ಕಿಕ್ಕಿರಿದಿದ್ದರು.

ರಾಜೇಂದ್ರ ಬುರಡಿಕಟ್ಟಿ ಈ ಸರಳ ಮದುವೆಯ ಬಗ್ಗೆ ತುಂಬಾ ಸರಳವಾಗಿ ಎಲ್ಲರಿಗೂ ಅರ್ಥವಾಗುವಂತೆ ವಿವರಿಸಿದರು. ಈ ಸಮಾರಂಭಕ್ಕೆಂದು ಬಂದಿದ್ದ ಹಿರಿಯ ಸಾಹಿತಿ ಕುಂ.ವೀರಭದ್ರಪ್ಪನವರು ಚಾಲನೆ ನೀಡಿದರು. ಮೂವತ್ತು ವರ್ಷಗಳ ಹಿಂದೆ ತಾವು ಉದ್ದೇಶಪೂರ್ವಕವಾಗಿಯೇ ರಾಹುಕಾಲದಲ್ಲಿ ಸರಳ ಮದುವೆ ಆದಾಗ ಪುರೋಹಿತರು ತಮಗೆ ಮಕ್ಕಳಾಗುವುದಿಲ್ಲ ಎಂದು ಹೆದರಿಸಲು ಪ್ರಯತ್ನಿಸಿದರು ಎಂದೂ, ಆದರೂ ತಾವೀಗ ಮೂವರು "ಅದ್ಭುತ" ಮಕ್ಕಳಿಗೆ ತಂದೆಯೆಂದೂ, ಮಡದಿ-ಮಕ್ಕಳೊಂದಿಗೆ ನೆಮ್ಮದಿಯಾಗಿ ಬದುಕುತ್ತಿದ್ದೇವೆ ಎಂದು ಹೇಳುವ ಮೂಲಕ ವೀರಭದ್ರಪ್ಪನವರು ಮುಹೂರ್ತ, ಒಳ್ಳೆ ಗಳಿಗೆ ಎಂಬಂತಹ ಮೂಢನಂಬಿಕೆಗಳ ವಿರುದ್ಧ ಎಚ್ಚರಿಕೆ ಮೂಡಿಸಿದರು. ಶಿವಸುಂದರ್, ಡಾ.ವಿ.ಎಸ್.ಶ್ರೀಧರ, ಪಾರ್ವತೀಶ ಮತ್ತು ನಾನು ಎಲ್ಲರೂ ಸರಳ ಮದುವೆಗಳ ಅವಶ್ಯಕತೆ, ಇತ್ಯಾದಿಗಳ ಬಗ್ಗೆ ಮಾತನಾಡಿದೆವು. ಇಂತಹ ಸಮಾರಂಭಕ್ಕೆ ಒಪ್ಪಿದ ಚೆನ್ನಬಸಪ್ಪ, ಅವರ ಪತ್ನಿ ಲಲಿತಮ್ಮ ಮತ್ತು ಮಗಳು ಗೀತಾಳಿಗೆ ನಮ್ಮ ಅಭಿನಂದನೆಗಳನ್ನು ಹೇಳುವುದನ್ನು ಮರೆಯಲಿಲ್ಲ.

ಕುಮಾರ್ ಮತ್ತು ಗೀತಾ ಮಂತ್ರಮಾಂಗಲ್ಯವನ್ನು ಓದುವ ಮೂಲಕ ದಾಂಪತ್ಯ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಪರಸ್ಪರ ಹಾರಗಳನ್ನು ಹಾಕಿಕೊಂಡ ನಂತರ ಗೀತಾಳ ಕೊರಳಿಗೆ ಕುಮಾರ ತಾಳಿ ಕಟ್ಟಿದ. ಕುಮಾರನ ಕೈಬೆರಳಿಗೆ ಗೀತಾ ಉಂಗುರ ತೊಡಿಸಿದಳು. ಅಲ್ಲಿದ್ದ ಜನರೆಲ್ಲ ಚಪ್ಪಾಳೆ ತಟ್ಟುವ ಮೂಲಕ ನವ ದಂಪತಿಗಳಿಗೆ ಆಶೀರ್ವಾದ ಮಾಡಿದರು. ಎಲ್ಲರ ಭಾಷಣಗಳನ್ನು, ಸರಳ ಮದುವೆಯ ಕ್ರಿಯೆಗಳನ್ನು ಅಲ್ಲಿದ್ದ ಜನರೆಲ್ಲ ತದೇಕಚಿತ್ತರಾಗಿ ಕೇಳಿಸಿಕೊಳ್ಳುತ್ತಿದ್ದರು, ನೋಡುತ್ತಿದ್ದರು. ಜನ ಎಷ್ಟು ಆಸಕ್ತಿಯಿಂದ ಕೇಳುತ್ತಿದ್ದರೆಂದರೆ ಜನರ ಮಧ್ಯೆ ಎಲ್ಲೋ ಒಂದು ಮಗು ಅಳುವುದಕ್ಕೆ ಶುರು ಮಾಡಿದಾಗ ಹತ್ತರಲ್ಲಿದ್ದ ಒಬ್ಬರು "ಏ, ಅದನ್ನು ಆ ಕಡಿ ಕರಕೊಂಡು ಹೋಗು. ನನಗೆ ಕೇಳಿಸ್ತಿಲ್ಲ" ಎಂದು ಕಿಡಿಕಾರಿದರು.


ಮದುವೆ ಸಮಾರಂಭ ಮುಗಿದನಂತರ ರಾಜೇಂದ್ರ ಅವರು "ಈಗ ನಿಮಗೆಲ್ಲ ಒಂದು ಚೀಟಿಯನ್ನು ಹಂಚುತ್ತೇವೆ. ಅದರಲ್ಲಿ ನಿಮಗೆ ಈ ಸಮಾರಂಭದ ಬಗ್ಗೆ ಏನನ್ನಿಸಿತು ಎಂದು ಬರೆದುಕೊಡಿ. ಮೆಚ್ಚಿಗೆ ಇದ್ದರೆ ಅದನ್ನೇ ಹೇಳಿ, ಬೈಯುವುದಿದ್ದರೆ ಅದನ್ನೂ ಬರೆಯಿರಿ" ಎಂದರು. ಎಲ್ಲರೂ ಆ ಚೀಟಿಗಳನ್ನು ಪಡೆದು ಬರೆಯಲು ಉತ್ಸುಕರಾದರು. ಅಲ್ಲಿದ್ದ ಎಲ್ಲರಿಗೂ ತಮ್ಮ ಅನಿಸಿಕೆಗಳನ್ನು ಬರೆಯುವತವಕ ಆದರೆ ಹೆಚ್ಚಿನ ಜನರ ಬಳಿ ಪೆನ್‌ಗಳು ಇರಲಿಲ್ಲವಾದ್ದರಿಂದ ಪೆನ್‌ಗಳಿಗೆ ಬೇಡಿಕೆಯೋ ಬೇಡಿಕೆ!

ವಿವಿಧ ವಯೋಮಾನದವರಾದ 77 ಜನ ತಮ್ಮ ಅಭಿಪ್ರಾಯಗಳನ್ನು ಬರೆದು ಕೊಟ್ಟರು. ಅವುಗಳನ್ನು ಮೊನ್ನೆ ಕುಮಾರ ನನಗೆ ತಂದು ಕೊಟ್ಟ. ಅವುಗಳನ್ನು ಓದಿದಾಗ ನಮ್ಮೆಲ್ಲರಿಗೂ ತುಂಬಾ ಖುಷಿಯಾಯಿತು. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ನೀಡಿದ್ದೇನೆ.

* ಶ್ರೀ ಸರಸ್ವತಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘ: ನಮ್ಮ ಸಂಘದ 20 ಸದಸ್ಯೆಯರು ಈ ಮದುವೆಗೆ ಶುಭ ಹಾರೈಸಿದ್ದೇವೆ. ಈ ರೀತಿ ಎಲ್ಲರೂ ಸರಳವಾಗಿ ಮದುವೆ ಆಗಬೇಕೆಂಬ ನಮ್ಮ ಅಭಿಪ್ರಾಯವನ್ನು ಎಲ್ಲರಿಗೂ ತಿಳಿಸುತ್ತೇವೆ.
* ಬಸವರಾಜು, 25: ಇಂತಹ ಮದುವೆ ಹೊಸ ಪೀಳಿಗೆಗೆ ಹೊಸ ದಾರಿಯನ್ನು ತೋರುತ್ತದೆ. ಕಡೇನಂದಿಹಳ್ಳಿಯಲ್ಲಿ ಇದು ನಡೆದದ್ದು ಸಂತೋಷ ತಂದಿದೆ.
* ಮಲ್ಲಿಕಾರ್ಜುನ, 24: ನಮ್ಮೂರ ಮಟ್ಟಿಗೆ ಇದು ಹೊಸತು. ಆದರೆ ತುಂಬಾ ಚೆನ್ನಾಗಿತ್ತು, ನಮ್ಮ ಗೆಳೆಯರೆಲ್ಲಾ ಹೀಗೆ ಮದುವೆ ಆಗಬೇಕೆಂದು ತಿಳಿಸುತ್ತೇನೆ.
* ಶಾರದಾ ಎ.ಎಸ್., 24: ಇದರಿಂದ ತಂದೆಯ ಹೊರೆ ತಪ್ಪಿ ಎಲ್ಲರೂ ಸಂತೋಷದಿಂದ ಬಾಳಲು ಅನುಕೂಲವಾಗುತ್ತದೆ.
* ಸರಳಾ ಬಿ.ಸಿ, 40: ಈ ಸರಳ ಮದುವೆ ತುಂಬಾ ಚೆನ್ನಾಗಿತ್ತು, ನನ್ನ ಮಕ್ಕಳಿಗೆ ಈ ರೀತಿ ಮದುವೆ ಮಾಡಲು ಪ್ರಯತ್ನಿಸುವೆ.
* ನೇತ್ರಾವತಿ ಚಂದ್ರಶೇಖರ್, 28: ಈ ಮದುವೆ ತುಂಬಾ ಚೆನ್ನಾಗಿತ್ತು, ನಮ್ಮ ಸಾಂಪ್ರದಾಯಿಕ ಮದುವೆಗಳಲ್ಲಿ ಬದಲಾವಣೆ ಆಗಬೇಕು ಅಂತಾ ನಾನು ಅಂದುಕೊಂಡಿದ್ದೆ. ಆದರೆ ಹಳ್ಳಿಗಾಡಿನಲ್ಲಿ ಅದೆಲ್ಲ ನಡೆಯುವುದಿಲ್ಲ ಎಂದು ಅಂದುಕೊಂಡಿದ್ದೆ. ಇಲ್ಲಿ ಇಂತಹ ಮದುವೆ ನಡೆದದ್ದು ಸಂತೋಷ ತಂದಿದೆ.
* ಎ. ಕಲ್ಲಪ್ಪ, 80: ಇದು ಹೊಸ ಪದ್ಧತಿ. ನಮ್ಮ ಮನಸ್ಸಿಗೆ ಸಂತೋಷ ತಂದಿದೆ.
* ಎ. ಬಸವರಾಜಪ್ಪ ಮಲ್ಲಾಪುರ, 65: ಈ ಸರಳ ಮದುವೆ ನಮಗೆ ಬಹಳ ಸಂತೋಷ ತಂದಿದೆ. ಆಡಂಬರದ ಮದುವೆಗಿಂತ ಈ ಮದುವೆ ಇಷ್ಟವಾಯಿತು. ಇದನ್ನು ಒಪ್ಪುತ್ತೇವೆ.
* ಗದಿಗೆಪ್ಪ, 42: ಈ ಸರಳ ಮದುವೆಗೆ ಶಾಮಿಯಾನ ಬೇಕಿತ್ತಾ? ಯಾವುದೋ ಒಂದು ಮರದ ಅಡಿ ಅಥವಾ ಗುಡಿಯಲ್ಲಿ ಮಾಡಬಹುದಿತ್ತು.
* ಗಜೇಂದ್ರ, 45: ಆಡಂಬರದ ಮದುವೆ ಮಾಡಿ ಸಾಲದ ಸುಳಿಯಲ್ಲಿ ಸಿಲುಕುತ್ತಿರುವಂತಹ ಕುಟುಂಬಗಳಿಗೆ ಇದು ಮಾದರಿಯಾಗಿದೆ. ಇಂತಹ ಸರಳ ಮದುವೆ ನಡೆಯುವುದರಿಂದ ನಮ್ಮ ಸಮಾಜದ ಹೆಚ್ಚಿನ ಸಮಸ್ಯೆಗಳು ಬಗೆಹರಿಯುತ್ತವೆ.
* ಶಿಲ್ಪಾ ಬಿ.ಜಿ. 21: ಸಂಪ್ರದಾಯದ ಕಟ್ಟುಪಾಡುಗಳಿಲ್ಲದ ಈ ಮದುವೆ ನನಗೆ ಇಷ್ಟವಾಯಿತು.
* ಚನ್ನಯ್ಯ ಬಿ. ಮಾರವಳ್ಳಿ, 37: ಎಲ್ಲಾ ಮದುವೆಗಳೂ ಹೀಗೆಯೇ ನಡೆಯಬೇಕು.
* ಅನ್ವರ್ ದಿವಾನಖಾನ, 39: ಮುಂದಿನ ಜನ್ಮ ಎಂಬುದಿದ್ದರೆ ನಾನು ಹೀಗೇ ಮದುವೆ ಆಗುತ್ತೇನೆ.
* ಸಾವಿತ್ರಿ ಸಂ, 23: ನಾನು ಇದೇ ಮೊದಲನೆಯ ಬಾರಿ ಇಂತಹ ಮದುವೆಯನ್ನು ನೋಡಿದ್ದು. ಮೊದಲು ನನಗೆ ಇದೆಂತಹ ಮದುವೆ ಅನ್ನಿಸಿತು. ಈ ಸರಳ ಮದುವೆ ಸಮಾರಂಭವನ್ನು ನೋಡಿದ ಮೇಲೆ ನನಗೆ ಇದಕ್ಕಿಂತಲೂ ಸರಳವಾಗಿ ಮದುವೆ ಆಗಬೇಕು ಅನ್ನಿಸಿತು.
* ರಾಘವೇಂದ್ರ ಟಿ.ಎಂ. 20: ನಾನು ಕಂಡ ಅತ್ಯಂತ ಸರಳ ಮತ್ತು ಅದ್ಭುತ ಮದುವೆ ಇದು.
* ಹೂವಪ್ಪ ಶಿರಗಂಬಿ, 53: ಈ ತರಹದ ಹೊಸ ರೀತಿಯ ಮದುವೆ ನಮಗೆ ಅಚ್ಚರಿ ಆಯಿತು. ಆದರೆ ಭಾಷಣಕಾರರು ಇದರ ಬಗ್ಗೆ ವಿವರ ಮಾಹಿತಿ ನೀಡಿದ ನಂತರ ನಮಗೆ ತುಂಬಾ ಇಷ್ಟವಾಯಿತು.
* ಕೆ.ಬಿ.ಶಿವಕುಮಾರ್, 20: ಸರಳ ಮತ್ತು ಸೂಪರ್ ಮದುವೆ ಸಾರ್!

ಇವರೆಲ್ಲರಿಗಿಂತ ಇವತ್ತು ಹೆಚ್ಚು ಸಂತೋಷ ಪಡುತ್ತಿರುವುದು ಮದುಮಗಳು ಗೀತಾ ಮತ್ತು ಆಕೆಯ ಹೆತ್ತವರು. ಗೀತಾಳ ಸ್ನೇಹಿತರೂ ಆಕೆಯಂತೆ ಮದುವೆಯಾಗಬೇಕು ಎಂದು ಆಕೆಗೆ ಹೇಳಿದ್ದಾರೆ. ಹಾಗೆ ನೋಡಿದರೆ ಇದು ಅಂತರಜಾತಿ ಮದುವೆಯಲ್ಲ, ತೀರಾ ಸರಳವಾದ ಮದುವೆಯೂ ಅಲ್ಲ, ಕ್ರಾಂತಿಕಾರಕ ಮದುವೆಯಂತೂ ಅಲ್ಲವೇ ಅಲ್ಲ. ಆದರೆ ಕುಮಾರ್ ಮತ್ತು ಆತನ ಸಹೋದರರ ಉದ್ದೇಶ ಸಂಪ್ರದಾಯಿಕ ಶಾಸ್ತ್ರಗಳು ಇರದಂತಹ, ಆದಷ್ಟು ಸಿಂಪಲ್ ಆದ ಮದುವೆ ಸಮಾರಂಭವನ್ನು ತಮ್ಮ ಕುಗ್ರಾಮವಾದ ಕಡೇನಂದಿಹಳ್ಳಿಯಲ್ಲಿ ಮಾಡಬೇಕೆನ್ನುವುದೇ ಆಗಿತ್ತು. ಮತ್ತು ಆ ಮೂಲಕ ಹಲವರಾದರೂ ಸ್ಫೂರ್ತಿ ಪಡೆದು ತಮ್ಮ ಮಕ್ಕಳಿಗೆ ಇಂತಹ ಮದುವೆ ಮಾಡಿದರೆ ಅದೇ ತಾವು ತಮ್ಮ ಹಳ್ಳಿಗೆ ಪರಿಚಯಿಸಿದ ಪ್ರಗತಿಪರ ದೃಷ್ಟಿ ಎಂಬುದಾಗಿತ್ತು.

ಅದರಲ್ಲಿ ಅವರು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಯಶಸ್ಸು ಕಂಡಿದ್ದಾರೆ ಎನ್ನಬಹುದು.





# ಸುವರ್ಣ ಟಿವಿ ರಿಯಾಲಿಟಿ ಶೋ 'ಕೊಳಕು ಬೆಳಕು' ಪೂರ್ವಗ್ರಹ

ಸುವರ್ಣ ನ್ಯೂಸ್ ಚಾನೆಲ್‌ನಲ್ಲಿ ಈ ವಾರದಿಂದ 'ಕೊಳಕು ಬೆಳಕು' ಎನ್ನುವ ಹೊಸ ರಿಯಾಲಿಟಿ ಶೋ ಒಂದು ಶುರುವಾಗಿದೆ.

ಬೆಂಗಳೂರಿನ ಸ್ಲಂಗಳಲ್ಲಿ ವಾಸವಾಗಿರುವ ಮಕ್ಕಳ ಪೈಕಿ ನೃತ್ಯ, ಸಂಗೀತ, ಹಾಡು, ಮಿಮಿಕ್ರಿ, ಯಕ್ಷಗಾನ, ಏಕಪಾತ್ರಾಭಿನಯ ಮುಂತಾದ ಸೃಜನಶೀಲ ಪ್ರತಿಭೆಯಿರುವ ನೂರು ಮಕ್ಕಳನ್ನು ಆರಿಸಿ ಅವರಿಂದಲೇ ಈ ಟಿವಿ ಕಾರ್ಯಕ್ರಮ ನಡೆಸಲಾಗುತ್ತಿದೆ.

ಸುವರ್ಣ ಟಿವಿ ಹಾಗೂ ಸಿನಿಮಾ ನಟ ಮದನ್ ಪಟೇಲ್ ಈ 'ಕೊಳಕು ಬೆಳಕು' ಕಾರ್ಯಕ್ರಮ ನಿರ್ಮಿಸುತ್ತಿದ್ದಾರೆ.

ಈಗಿನ ನಮ್ಮ ಟಿವಿ ಚಾನಲ್ಲುಗಳಲ್ಲಿ ಬರೀ ಶ್ರೀಮಂತರ, ಮೇಲ್ವರ್ಗದವರ ಗೋಳುಗಳನ್ನೇ ಧಾರಾವಾಹಿಗಳಾಗಿಸಿ ವೀಕ್ಷಕರಿಗೆ ಉಣಬಡಿಸಲಾಗುತ್ತಿದೆ. ಹಾಗಿರುವಾಗ ಸುವರ್ಣ ಟಿವಿಯು ಬಡ ಪ್ರತಿಭಾವಂತ ಮಕ್ಕಳಿಗೂ ಟಿವಿ ಪ್ರೋಗ್ರಾಂ ಮಾಡಲು ಹೊರಟಿರುವುದೇನೊ ಸ್ವಾಗತಾರ್ಹ.



ಆದರೆ,

ಈ ಕಾರ್ಯಕ್ರಮಕ್ಕೆ 'ಕೊಳಕು ಬೆಳಕು' ಎಂದು ಹೆಸರಿಟ್ಟಿರುವುದು ಅವಹೇಳನಕಾರಿಯಾಗಿ ಕಾಣುವುದಿಲ್ಲವೇ? ಕನ್ನಡದ ಅನೇಕ ಟಿವಿ ಚಾನೆಲ್‌ಗಳಲ್ಲಿ ರಿಯಾಲಿಟಿ ಶೋಗಳು ಪ್ರಸಾರವಾಗುತ್ತಿವೆ. ಯಾರಿಗುಂಟು ಯಾರಿಗಿಲ್ಲ, ಬದುಕು ಜಟಕಾ ಬಂಡಿ, ನೀನಾ-ನಾನಾ?, ರಾಜ-ರಾಣಿ-ರಮೇಶ್, ಕನ್ನಡದ ಕೋಟ್ಯಾಧಿಪತಿ... ಹೀಗೆ ಯಾವುದೇ ರಿಯಾಲಿಟಿಶೋಗಳಿರಲಿ- ಅದರಲ್ಲಿ ಭಾಗಿಯಾಗಿರುವ ಜನರ ಆರ್ಥಿಕ ಅಥವಾ ಸಾಮಾಜಿಕ ಸ್ಥಾನಮಾನಗಳ ಪ್ರಸ್ತಾಪ ಇಲ್ಲ. ಹಾಗಿರುವಾಗ ಕೊಳಗೇರಿಯ ಮಕ್ಕಳ ಕಾರ್ಯಕ್ರಮ ಎನ್ನುವ ಒಂದೇ ಕಾರಣಕ್ಕೆ ಅದನ್ನು 'ಕೊಳಕು ಬೆಳಕು' ಎಂದು ಹೆಸರಿಡುವುದು ಸರಿಯೇ?

ಇದು ಕಸದಿಂದ ರಸ ಎಂಬ ಆಡುಮಾತಿನಷ್ಟು ಸರಳ ವ್ಯಾಖ್ಯಾನಕ್ಕೆ ಸಿಗುವಂತಹದ್ದಲ್ಲ. ಅದರ ಬದಲಾಗಿ ಕೊಳಕಿನಲ್ಲಿ ಬೆಳಕಿದೆ, ಕೊಳಗೇರಿಯಲ್ಲೂ ಪ್ರತಿಭೆಯ ಬೆಳಕಿದೆ ಎಂಬ ರೀತಿಯಲ್ಲೇನೋ ನಿರ್ಮಾಪಕರು ಬಿಂಬಿಸಲು ಹೊರಟಂತಿದೆ.

ಕೊನೆಗದು ಪ್ರತಿಭೆ ಎನ್ನುವುದು ಕೇವಲ ಮೇಲ್ಜಾತಿ-ಮೇಲ್ವರ್ಗದವರಿಗೆ ಮಾತ್ರ ಸಾಧ್ಯ, ಆಕಸ್ಮಾತ್ತಾಗಿ ಬಡವರ-ಕೊಳಗೇರಿ ವಾಸಿಗಳಲ್ಲೂ ಪ್ರತಿಭೆ ಇರಬಹುದು ಎನ್ನುವ ಅರ್ಥ ನೀಡುವಂತಿದೆ.

ಬಹಳ ಮುಖ್ಯವಾಗಿ ಕೊಳಕು ಬೆಳಕು ಎಂಬ ಟೈಟಲ್ಲೇ ಮೇಲ್ಜಾತಿ ಮತ್ತು ವರ್ಗಗಳಲ್ಲಿರುವ ಬಡವರ ಬಗೆಗಿನ ಪೂರ್ವಗ್ರಹವನ್ನು ವ್ಯಕ್ತಪಡಿಸುತ್ತಿದೆ.

ಸುವರ್ಣ ಚಾನೆಲ್‌ನ ಮುಖ್ಯಸ್ಥ ವಿಶ್ವೇಶ್ವರ ಭಟ್ ಹಾಗೂ ನಟ ಮದನ್ ಮಲ್ಲು ಈ ಬಗ್ಗೆ ಯೋಚಿಸಲಿ ಹಾಗೂ ಈ ಅಪರೂಪದ ಕಾರ್ಯಕ್ರಮಕ್ಕೆ ಯಾವುದೇ ಪೂರ್ವಗ್ರಹ ವ್ಯಕ್ತವಾಗದ ಅನರ್ಥ ನೀಡದ ಬೇರೊಂದು ಹೆಸರನ್ನು ಇಡಲಿ.

• ಈಶ

# ಪೇಜಾವರರ ಮಾನಸಿಕ ರೋಗ

ಪೇಜಾವರ ಮಠಾಧೀಶ ವಿಶ್ವೇಶ ತೀರ್ಥ ಸ್ವಾಮಿಯ ಭಂಡತನಕ್ಕೆ ಕೊನೆ ಮೊದಲೇ ಇರುವಂತೆ ಕಾಣುತ್ತಿಲ್ಲ.

ಕಳೆದ ಶನಿವಾರ ಶಿವಮೊಗ್ಗದಲ್ಲಿ ನಡೆದ ಬ್ರಾಹ್ಮಣರ ಸಮಾವೇಶದಲ್ಲಿ ಈ ಪೇಜಾವರ ಮಾಂಸಾಹಾರಿಗಳ ಬಗ್ಗೆ, ಅಂತರ್ಜಾತಿ ಮದುವೆಗಳ ಬಗ್ಗೆ ಹಾಗೂ ಸಹಪಂಕ್ತಿ ಭೋಜನದ ಬಗ್ಗೆ ತಮ್ಮ ಅಮೋಘ ಚಿಂತನೆಗಳನ್ನು ಪ್ರಕಟಿಸಿದ್ದಾರೆ.

ಇವೆಲ್ಲವೂ ಬ್ರಾಹ್ಮಣ ಶ್ರೇಷ್ಠತೆಯ, ಜಾತಿ ತಾರತಮ್ಯದ ಗಲೀಜು ಚಿಂತನೆಗಳೇ ಆಗಿವೆ. ಹಾಗೆ ನೋಡಿದರೆ ಪೇಜಾವರರ ಈ ಮಾತುಗಳು ಹೊಸದೇನಲ್ಲ. ಆದರೆ ವೈರುಧ್ಯ ಏನೆಂದರೆ ಅವರಿಗೆ ಅಕ್ಕಿಯ ಮೇಲೆ ಆಸೆ, ಆದರೆ ನೆಂಟರ ಮೇಲೆ ಪ್ರೀತಿ ತರದ ಪೀಕಲಾಟ. ಅಂದರೆ ಅವರ ಕನಸಿನ ಹಿಂದೂ ಸಮಾಜ ಕಟ್ಟಲು ಅವರಿಗೆ ಬ್ರಾಹ್ಮಣರೂ ಸೇರಿದಂತೆ ಸಮಸ್ತ ಶೂದ್ರ ಸಂಕುಲವೆಲ್ಲಾ ಬೇಕು. ಆದರೆ ಅದೇ ವೇಳೆಯಲ್ಲಿ ಅವರ ಬ್ರಾಹ್ಮಣಿಕೆಯ ಶ್ರೇಷ್ಠತೆಯೂ ಉಳಿಯಬೇಕು, ಶೂದ್ರರು ಅಥವಾ ಬ್ರಾಹ್ಮಣೇತರರು ಬ್ರಾಹ್ಮಣಿಕೆಯ ನಾಯಕತ್ವದಡಿ ತಮ್ಮ ಪಾಲಿಗೆ ಬಂದದ್ದನ್ನು ಪಂಚಾಮೃತವೆಂದು ಒಪ್ಪಿಕೊಂಡು ತೆಪ್ಪಗಿರಬೇಕು ಎಂಬುದೇ ಆಗಿದೆ.

ಇದೇ ವೇಳೆಯಲ್ಲಿ ಕನ್ನಡ ಪ್ರಭ ದಿನಪತ್ರಿಕೆಯು ಪೇಜಾವರರ ಈ ಬ್ರಾಹ್ಮಣ ಜಾತಿ ಅಹಂಕಾರವನ್ನು ಖಂಡಿಸಿ ದೀರ್ಘ ಲೇಖನಗಳನ್ನು ಪ್ರಕಟಿಸುತ್ತಿದೆ. ಹಿಂದೂ ಬಾಲಕ ಪ್ರತಾಪ ಸಿಮ್ಮನ ಬರಹಗಳು ಅದರಲ್ಲಿ ಪ್ರಮುಖವಾಗಿವೆ. ಆದರೆ ಈ ಸಿಮ್ಮ ಪೇಜಾವರರ ಬ್ರಾಹ್ಮಣವಾದಿ ನಿಲುವನ್ನು ಖಂಡಿಸಿದೆಯಾದರೂ ಕೋಮುವಾದಿ ಹಿಂದೂ ಐಕ್ಯತೆಯ ಬಗ್ಗೆ ಚೀರಿಕೊಳ್ಳುತ್ತಿದೆ.

ಇದು ಇನ್ನೊಂದು ತರದ ಮಾನಸಿಕ ರೋಗ!

## ಸಹಪಂಕ್ತಿ ಭೋಜನ, ಅದೇ ರಾಗ-ಅದೇ ಗೋಳು

ಶಿವಮೊಗ್ಗದಲ್ಲಿ ಸಹಪಂಕ್ತಿ ಭೋಜನದ ಬಗ್ಗೆ ಪೇಜಾವರ ಹೇಳಿದ ಮಾತುಗಳು ಹೀಗಿವೆ:


"ಬ್ರಾಹ್ಮಣರು ಮದ್ಯ-ಮಾಂಸಾಹಾರದ ಅಭ್ಯಾಸವಿರುವ ಅನ್ಯಜಾತಿಗಳವರೊಂದಿಗೆ ಒಟ್ಟಿಗೆ ಕುಳಿತು ಊಟ ಮಾಡಬಾರದು, ಹಾಗೆ ಮಾಡಿದರೆ ಬ್ರಾಹ್ಮಣರೂ ಅದೇ ಗುಣ ಕಲಿತುಬಿಡುತ್ತಾರೆ, ನಾನಂತೂ ಶೂದ್ರರಿರಲಿ, ಬ್ರಾಹ್ಮಣರೊಂದಿಗೂ ಒಟ್ಟಿಗೆ ಊಟ ಮಾಡುವುದಿಲ್ಲ..." ಎಂದು ತಮಗಿರುವ ಮಾನಸಿಕ ರೋಗದ ಬಗ್ಗೆ ಸುಳಿವು ನೀಡಿದ್ದಾರೆ.

ಆದರೆ, ಆಕಸ್ಮಾತ್ ಪೇಜಾವರರೇ 'ಜೊತೇಲಿ ಊಟ ಮಾಡೋಣ' ಅಂತ ಬಂದರೂ ಬಹುತೇಕ ಶೂದ್ರರು 'ಬೇಡ, ಮುಂದಕ್ಕೆ ಹೋಗಪ್ಪ' ಅನ್ನುವ ಛಾನ್ಸೂ ಒಂದಿದೆ. ಅನ್ನ ತಿನ್ನುವ ಯಾರೇ ಆಗಲಿ ತಮ್ಮ ಸುತ್ತ ಗಲೀಜು ಹರಡಿಕೊಂಡು ಊಟಕ್ಕೆ ಕೂರಲಾರರು ಅಲ್ಲವೇ?

ಅದಿರಲಿ,

ಈ ಪೇಜಾವರರ ಅಹಂಕಾರದ ಮಾತುಗಳನ್ನು ಕೇಳಿದರೆ ಬಹುಶಃ ಆತ ಸಾಕ್ಷಾತ್ ದೇವರಿಗಿಂತಲೂ ಒಂದು ಲೆವೆಲ್ ಮೇಲೇ ತಾನಿದ್ದೇನೆ ಎಂದು ನಂಬಿಸಿಕೊಂಡಂತಿದೆ.

ಪೇಜಾವರರು 'ನಾನೊಬ್ಬನೇ ಸೀಕ್ರೆಟ್ಟಾಗಿ ಕೂತು ಊಟ ಮಾಡುತ್ತೇನೆ' ಎನ್ನುತ್ತಿದ್ದಾರೇನೋ ಸರಿ. ಆದರೆ ಅನೇಕ ಹಿಂದೂ ದೇವರುಗಳು ತಾವೇ ಭಕ್ತರ ಬಳಿಗೆ ಬಂದು ಜೊತೆಗೆ ಕುಳಿತು ಊಟ ಮಾಡಿ ಹೋದ ಪ್ರಸಂಗಗಳು ಹಿಂದೂ ಪುರಾಣಗಳಲ್ಲೇ ಇವೆಯಲ್ಲ?



ಭಕ್ತ ಕುಂಬಾರ, ಭಕ್ತ ಸಿರಿಯಾಳನ ಕತೆ, ವಿಷ್ಣು ಶಿವ ಪಾರ್ವತಿ ಮುಂತಾದ ದೇವರುಗಳು ತಮ್ಮ ಭಕ್ತರನ್ನು ಪರೀಕ್ಷಿಸಲು ಇವೆಲ್ಲಾ ಆಟ ಆಡಿದ್ದಾರೆ. ಇನ್ನು ಇಂದ್ರನಂತೂ ವೇಷ ಮರೆಸಿಕೊಂಡು ಋಷಿ-ಮುನಿಗಳ ಹೆಂಡಿರನ್ನು ವಂಚಿಸಿ ಸೆಕ್ಸ್ ಅನ್ನು ನಡೆಸಿರುವ ಘಟನೆಗಳನ್ನೂ ಹಿಂದೂ ಪುರಾಣಗಳು ಹೆಮ್ಮೆಯಿಂದ ನಿರೂಪಿಸಿವೆ.

ವಸ್ತುಸ್ಥಿತಿ ಹೀಗಿರುವಾಗ ಇವರಿಬ್ಬರಲ್ಲಿ ಎಡಬಿಡಂಗಿ ಯಾರು?

ಈಗ್ಗೆ ಎರಡು ವರ್ಷಗಳ ಹಿಂದೆ ಜಾತಿವಿನಾಶ ವೇದಿಕೆಯ ವತಿಯಿಂದ 'ದಲಿತರೊಂದಿಗೆ ಸಹಪಂಕ್ತಿ ಭೋಜನ'ದಲ್ಲಿ ಪಾಲ್ಗೊಳ್ಳುವಂತೆ ಪೇಜಾವರಗೆ ಬಹಿರಂಗ ಆಹ್ವಾನ ನೀಡಲಾಗಿತ್ತು. ಆದರೆ ಆವತ್ತು ಪೇಜಾವರ ಬರಲಿಲ್ಲ, ಅಷ್ಟೇ ಅಲ್ಲ 'ಸಹಪಂಕ್ತಿ ಭೋಜನ ಎಲ್ಲಿ ನಡೆಯುತ್ತಿದೆ ಅಂತ ಅಡ್ರೆಸ್ ಹೇಳಲಿಲ್ಲ, ಹಾಗಾಗಿ ನಾನು ಬರಲಿಕ್ಕಾಗಲಿಲ್ಲ' ಎಂದು ನೆಪ ಹೇಳಿದ್ದರು. ಅವರ ಲಿಖಿತ ಹೇಳಿಕೆ ಈಗಲೂ 'ಲಂಕೇಶ್' ಕಚೇರಿಯಲ್ಲಿದೆ. ಸಹಪಂಕ್ತಿ ಭೋಜನಕ್ಕೆ ಪೇಜಾವರಗೆ ವಿರೋಧವಿರುವುದು ಹಳೆಯ ವಿಚಾರ. ಉಡುಪಿ ಕೃಷ್ಣ ದೇವಸ್ಥಾನದಲ್ಲಿ ಬ್ರಾಹ್ಮಣ ಮತ್ತು ಶೂದ್ರರಿಗೆ ಇವತ್ತಿಗೂ ಪಂಕ್ತಿ ಭೇದ ಮಾಡಿಯೇ ಊಟಬಡಿಸುತ್ತಿದ್ದಾರೆ.

## ಪೇಜಾವರ ಎಷ್ಟು ಸಾಚಾ?

ಯತಿ ಎನಿಸಿಕೊಂಡವರಿಗೆ ವ್ಯಕ್ತಿತ್ವ ಮತ್ತು ಯೋಗ್ಯತೆ ಎಷ್ಟು ಬೇಕೆಂಬ ಮಾನದಂಡಗಳು ಜನರಿಗೆ ತಿಳಿದಿದೆ. ತಾನೊಬ್ಬ ಯತಿಶ್ರೇಷ್ಠನೆಂದು ಸದಾ ಬೀಗುವ, ಬೇರೆಯವರಿಗೂ ಬೋಧಿಸುವ ಇದೇ ಪೇಜಾವರರ ಮೇಲೆ ಕರ್ನಾಟಕದ ಇನ್ಯಾವುದೇ ಮಠಾಧೀಶರ ವಿರುದ್ಧ ಇರುವುದಕ್ಕಿಂತ ಜಾಸ್ತಿ ಕೋರ್ಟ್ ಕೇಸುಗಳಿವೆ. ಇನ್ನು ಆಸ್ತಿ ತಗಾದೆಗಳು, ಬಡ್ಡಿ ದಂಧೆ, ಕಳ್ಳ ಹಣವನ್ನು ದಾನವಾಗಿ ಪಡೆದಿರುವ ಪ್ರಕರಣಗಳೂ ಇವೆ. ಬೆಂಗಳೂರಿನ ಲೆಕ್ಚರರ್ ವೆಂಕಟೇಶ್‌ನ ಜೊತೆ ಪೇಜಾವರ ನಡೆಸಿದ ಸಾಲ-ಬಡ್ಡಿಯ ವ್ಯವಹಾರ ಪೊಲೀಸ್ ಕೇಸೇ ಆಯಿತು. ನೀರಾ ರಾಡಿಯಾ ಎಂಬ ದಲ್ಲಾಳಿ ಹೆಂಗಸು 2ಜಿ ಸ್ಪೆಕ್ಟ್ರಂ ಡೀಲ್‌ನಲ್ಲಿ ಸಿಕ್ಕಿಬಿದ್ದಿದ್ದಾಳಲ್ಲವಾ? ಆ ಮೋಸಗಾತಿಯಿಂದಲೂ ಪೇಜಾವರ ಎರಡು ಕೋಟಿ ರೂಪಾಯಿಗಳನ್ನು ಕಾಣಿಕೆ ರೂಪದಲ್ಲಿ ಎಣಿಸಿಕೊಂಡಿದ್ದು ಈಗ ಪ್ರಪಂಚಕ್ಕೆಲ್ಲಾ ಗೊತ್ತಾಗಿದೆ.

ದುಡ್ಡಿನ ವಿಚಾರಕ್ಕೆ ಬಂದರೆ ಪೇಜಾವರರಂತ[ಹ] ಪೇಜಾವರರೇ ಕ್ಷಣಕಾಲ ತಮ್ಮ ಬ್ರಾಹ್ಮಣಿಕೆಯ ಶ್ರೇಷ್ಠತೆಯನ[್ನು] ಬದಿಗಿಟ್ಟು ಬಿಡುತ್ತಾರೆ.

ಶೂದ್ರರನ್ನು ಹತ್ತಿರ ಸೇರಿಸಬಾರದೆನ್ನುವ ಪೇಜಾವ[ರ] ಉಡುಪಿ ದೇವಸ್ಥಾನಕ್ಕೆ ಬಂದು ಕಾಣಿ[ಕೆ] ಹಾಕುವ ಶೂದ್ರರ ಹಣವನ್ನು ಮಾ[ತ್ರ] ಬೇಡ ಎನ್ನುವುದಿಲ್ಲ, ಅಷ್ಟೇ ಅ[ಲ್ಲ] ಮದ್ಯ-ಮಾಂಸ ಸೇವಿಸುವ ಬ್ರಾಹ್ಮಣ[ರ] ಕಾಣಿಕೆ ಹಣವನ್ನು 'ಬೇಡ' ಎನ್ನುವುದಿಲ್ಲ.

ಇದಲ್ಲವಾ ತಮಾಷೆ!

ಈ ಪೇಜಾವರರ ಜೊತೆ ರಾಘವೇಶ್ವರ ಸ್ವಾಮಿಯ[ೂ] ಸೇರಿಕೊಂಡು ಬ್ರಾಹ್ಮಣ್ಯವನ್ನು ಎಲ[್ಲಾ] ಜಾತಿಜನಾಂಗಗಳ ಮೇಲೆ ಹೇರಲು ಹೊರಟಿದ್ದಾರೆ. ಮತ್ತೊಂದೆಡೆ ವೈಯಾ[ರದ] ಜಗದ್ಗುರು ರವಿಶಂಕರ ಗುರೂ[ಜಿ] ಎನ್ನುವ ವಂಚಕ 'ಸರ್ಕಾರಿ ಶಾಲೆಗಳ[ಲ್ಲಿ] ಓದಿದವರು ನಕ್ಸಲೈಟಾಗುತ್ತಾರೆ' ಎಂದು ಅಸಂಬದ್ಧ ವ್ಯಾಖ್ಯಾ[ನ] ನೀಡುತ್ತಾನೆ.

ಇದೇ ಉದ್ಧಟರ ಗುಂಪು ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿ[ಗೆ] ಮೊಟ್ಟೆ ನೀಡಬಾರದೆಂದು ಗದ್ದಲ ಎಬ್ಬಿಸುತ್ತದೆ. ಬಿಟ್ಟೂಬಿಡ[ದೆ] ಮಾಂಸಾಹಾರದ ವಿರುದ್ಧ ದುಷ್ಟ ಪ್ರಚಾರ ನಡೆಸುತ್ತಿದ್ದಾರೆ. ಅಂತರ್ಜಾತಿ ಮದುವೆ ಎನ್ನುವುದೇ ಮಹಾಪಾಪ ಎನ್ನುವಂ[ತೆ] ಚೀರಿಕೊಳ್ಳುತ್ತಿರುತ್ತಾರೆ.

ಈ ಪೇಜಾವರ ಸ್ವಾಮಿಯ ನಯವಂಚಕ ಬುದ್ಧಿ ಹೇಗಿದೆಯೆಂದರೆ ಈತ ನಡೆಸುತ್ತಿರುವ ಸಂಸ್ಕೃತ ಕಾಲೇಜು[ಗ]ಗಳಿಗೆ ಸರ್ಕಾರಿ ಅನುದಾನ ಪಡೆಯುತ್ತಿದ್ದಾರೆ. ಆದರೆ ಅ[ದೇ] ಕಾಲೇಜುಗಳಲ್ಲಿ ಬ್ರಾಹ್ಮಣರನ್ನು ಬಿಟ್ಟರೆ, ಅದರಲ್ಲೂ ಮಾಧ್ವ ಬ್ರಾಹ್ಮಣರನ್ನು ಹೊರತುಪಡಿಸಿ ಬೇರೆ ಯಾರಿಗೂ ಪ್ರವೇಶವನ್ನಾಗಲಿ ಅಥವಾ ಕೆಲಸವನ್ನಾಗಲಿ ಕೊಡುವುದಿಲ್ಲ.

ಒಟ್ಟಿನಲ್ಲಿ ಪೇಜಾವರರ ಈ ಮಾನಸಿಕ ಜಾತಿರೋಗವು ಬ್ರಾಹ್ಮಣೇತರರನ್ನು ಹೀಯಾಳಿಸುವುದನ್ನೇ ಕೆಲಸ ಮಾಡಿಕೊಂಡಿದೆ. ಕೆಟ್ಟ ಜಾತಿವಾದಿಗಳಂತಿರದ ಬ್ರಾಹ್ಮಣ ಸಮುದಾಯದ ಅನೇಕರಿಗೆ ಪೇಜಾವರರ ಈ ಜಾತಿ ಅಹಂಕಾರವು ಕಿರಿಕಿರಿ ಉಂಟು ಮಾಡಿದರೂ ಅಚ್ಚರಿಯಿಲ್ಲ.

ಸಹಪಂಕ್ತಿ ಭೋಜನ ಹಾಗೂ ಅಂತರ್ಜಾತಿ ಮದುವೆಗಳ ಬಗ್ಗೆಯ ಹೇಳಿಕೆಗಳು ಈಗ ವಿವಾದ ಎಬ್ಬಿಸಿರುವುದರಿಂದ ಪೇಜಾವರ 'ನಾನು ಹೇಳಿದ್ದು ಹಾಗಲ್ಲ' ಎಂದು ತಿಪ್ಪೆ ಸಾರಿಸಲು ಈಗ ಹೊರಟಿದ್ದಾರೆ.

ಇದು ಪೇಜಾವರರ ಇನ್ನೊಂದು ಹೊಸ ನಾಟಕ ಅಷ್ಟೆ.

• ಪಾರ್ವತೀಶ

# ಕಾಗೇರಿಯ ಖಾಸಗಿ ಮಂತ್ರ: ಭಾವಿ ಶಿಕ್ಷಕರು ಅತಂತ್ರ

ರಾಜ್ಯ ಸರ್ಕಾರದ ಹೊಣೆಗೇಡಿತನ ವಿಪರೀತವಾಗಿದೆ ಎನ್ನುವುದಕ್ಕೆ ಅತಂತ್ರ ಸ್ಥಿತಿಯಲ್ಲಿರುವ ಡಿ.ಎಡ್, ಬಿ.ಎಡ್ ಪದವೀಧರರ ಬದುಕೇ ಸಾಕ್ಷಿ. ಸದ್ಯ ರಾಜ್ಯದಲ್ಲಿ ಏನಿಲ್ಲವೆಂದರೂ ಸುಮಾರು 5 ರಿಂದ 6 ಲಕ್ಷ ಶಿಕ್ಷಕ ಆಕಾಂಕ್ಷಿ ನಿರುದ್ಯೋಗಿಗಳಿದ್ದಾರೆ. ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೊಮ್ಮೆ ಹೀಗೊಮ್ಮೆ ಪತ್ರಿಕೆಯಲ್ಲಿ ಉದುರಿಸುವ ಭರವಸೆಯನ್ನೇ ನಂಬಿಕೊಂಡು ಸರ್ಕಾರಿ ಶಿಕ್ಷಕರಾಗುವ ಕನಸಿನಲ್ಲಿರುವ ಇವರನ್ನು ನಡುನೀರಿನಲ್ಲಿ ಕೈಬಿಡುವ ಸಕಲ ಸಿದ್ಧತೆಯನ್ನು ಸರ್ಕಾರ ಮಾಡಿಟ್ಟುಕೊಂಡಿದೆ.

ಅಸಲಿಗೆ ಕರ್ನಾಟಕದಲ್ಲಿ ಇತ್ತೀಚಿನ ಶಿಕ್ಷಕರ ನೇಮಕಾತಿ ಅಂತ ಆದದ್ದು 2009 ರಲ್ಲಿ, 'ಪ್ರತಿ ಮಗುವಿನೂ ಗುಣಮಟ್ಟದ ಶಿಕ್ಷಣ' ಅಂತ ಬೊಬ್ಬಿಡುವ ಸರ್ಕಾರ ಅಲ್ಲಿಂದೀಚೆಗೆ ಶಿಕ್ಷಕರ ಭರ್ತಿಗೆ ಮನಸ್ಸೇ ಮಾಡಿರಲಿಲ್ಲ. ತೀರಾ ಇತ್ತೀಚೆಗೆ ಮೂರು ಸಾವಿರ ಪ್ರೌಢಶಾಲಾ ಶಿಕ್ಷಕರ ನೇಮಕಾತಿಗೆ ಚಾಲನೆ ನೀಡಿದೆಯಾದರೂ ಅದು ಯಾವುದಕ್ಕೂ ಸಾಲದು. ನೇಮಕಾತಿ ವಿಚಾರದಲ್ಲಿ ದಿವ್ಯ ನಿರ್ಲಕ್ಷ್ಯ ಹೊಂದಿರುವ ಸಚಿವರ ಇಲಾಖೆಯಲ್ಲೇನು ಶಿಕ್ಷಕರ ಸಂಖ್ಯೆ ಸಂತೃಪ್ತವಾಗಿಲ್ಲ. ಸರ್ಕಾರವೇ ಹೇಳಿಕೊಂಡಂತೆ ಕಳೆದ ನವೆಂಬರ್ ವೇಳೆಗೆ 14,321 ಹುದ್ದೆಗಳು ಖಾಲಿ ಇದ್ದು ಡಿಸೆಂಬರ್ ವೇಳೆಗೆ 12 ಸಾವಿರ ಶಿಕ್ಷಕರು ನಿವೃತ್ತರಾಗಲಿದ್ದರು. ಅಂದರೆ ಇವತ್ತಿನ ಮಟ್ಟಿಗೆ ಸರ್ಕಾರದ ಬಾಬ್ತಿಗೆ ಬರೋಬ್ಬರಿ 26 ಸಾವಿರಕ್ಕೂ ಹೆಚ್ಚು ಶಿಕ್ಷಕರ ಅಗತ್ಯವಿದೆ. ಖಾಸಗಿ ಶಾಲೆಗಳ ಪರ ಲಾಬಿ ಮಾಡುವುದು ಬಿಟ್ಟು ಕಾಗೇರಿ ಸಾಹೇಬರು ಮನಸ್ಸು ಮಾಡಿದರೆ ನೇಮಕಾತಿಗೆ ಚಾಲನೆ ನೀಡಿ ಡಿ.ಎಡ್, ಬಿ.ಎಡ್ ನಿರುದ್ಯೋಗಿಗಳ ಬೇಗುದಿಯನ್ನು ಕಿತ್ತೆಸೆಯಬಹುದು, ಸರ್ಕಾರಿ ಶಾಲೆಗಳ ಗುಣಮಟ್ಟವನ್ನೂ ಸುಧಾರಿಸಬಹುದು.



ಆದರೆ ಸರ್ಕಾರಕ್ಕಾಗಲಿ, ಸಚಿವರಿಗಾಗಲಿ ಇದರ ಬಗ್ಗೆ ಮತ್ತು ಸರ್ಕಾರಿ ಶಾಲೆಗಳ ಬಗ್ಗೆ ಇಷ್ಟೆಲ್ಲ ಮುತುವರ್ಜಿ ಇದ್ದಂತಿಲ್ಲ. ವಿಚಿತ್ರ ಶೈಕ್ಷಣಿಕ ಪಾಲಿಸಿಗಳ ಮೂಲಕ ಗಾಯದ ಮೇಲೆ ಬರೆ ಎಳೆಯುವ ಕೆಲಸ ಮಾಡುತ್ತಿದೆ. ದಾಖಲಾತಿಯ ನೆಪವೊಡ್ಡಿ ಮೂರು ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾದಾಗಲೇ ಕಾಗೇರಿಯ ಟೀಮು ಡಿ.ಎಡ್. ಬಿ.ಎಡ್ ಪದವೀಧರರಿಗೆ ಕೈಕೊಡುವ ಸೂಚನೆ ಸಿಕ್ಕಿತ್ತು. ಅದಾದ ನಂತರ ಆದರ್ಶ ಶಾಲಾ ಶಿಕ್ಷಕರ 3000 ಹುದ್ದೆಗಳನ್ನು ಸದ್ದಿಲ್ಲದಂತೆ ಆಸ್ಟ್ರಿಕ್ಸ್ ಟೆಕ್ನಾಲಜಿ ಎನ್ನುವ ಖಾಸಗಿ ಕಂಪನಿಗೆ ಹೊರಗುತ್ತಿಗೆ ನೀಡಿದಾಗಲಂತೂ ಸರ್ಕಾರದ ಖಾಸಗೀಕರಣದ ಮಸಲತ್ತು ಸ್ಪಷ್ಟವಾಗಿತ್ತು. ಈಗ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೊಳಿಸಿ 25% ಮೀಸಲಾತಿಯ ಮರೆಯಲ್ಲಿ ಖಾಸಗಿ ಶಾಲೆಗಳಿಗೆ ಅಧಿಕೃತ ಮಾನ್ಯತೆ ನೀಡಲು ಮುಂದಾಗಿರುವುದು ಹೈಡ್ರಾಮಾದ ಮುಂದುವರೆದ ಭಾಗವಷ್ಟೆ. ಕಾಯ್ದೆ ಪ್ರಕಾರ ಖಾಸಗಿ ಶಾಲೆಗಳೂ ಆರ್ಥಿಕವಾಗಿ ಹಿಂದುಳಿದವರಿಗೆ ಶೇ. 25 ಸೀಟುಗಳನ್ನು ಮೀಸಲಿಡಬೇಕು. ಅಷ್ಟೂ ವಿದ್ಯಾರ್ಥಿಗಳ ಶೈಕ್ಷಣಿಕ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ಅರ್ಥಾತ್ ಖಾಸಗಿ ಶಾಲೆಯಲ್ಲಿ ಸರ್ಕಾರವೇ ಪುಕ್ಕಟೆಯಾಗಿ ಓದಿಸುವುದಾದರೆ ಗುಣಮಟ್ಟ ಇಲ್ಲದಿರುವ ಸರ್ಕಾರಿ ಶಾಲೆಯಲ್ಲಿ ಯಾರು ತಾನೆ ಓದಿಯಾರು. ಆಗ ಮತ್ತಷ್ಟೂ ದಾಖಲಾತಿ ಕುಸಿಯಲಿದ್ದು, ಇನ್ನಷ್ಟು ಶಾಲೆಗಳನ್ನು ಮುಚ್ಚಲು ಹಾದಿ ಸುಗಮವಾಗುತ್ತದೆ. ಶಾಲೆಗಳೇ ಇಲ್ಲವೆಂದ ಮೇಲೆ ಶಿಕ್ಷಕರ ನೇಮಕಾತಿಯ ಉಸಾಬರಿಯೇ ಬರುವುದಿಲ್ಲ, ಅಲ್ಲಿಗೆ ಆಕಾಂಕ್ಷಿಗಳ ಬದುಕು ಅಧೋಗತಿ. ಹೀಗಿದೆ ಸರ್ಕಾರದ ಪುಸಕ್ತ ಪಾಲಿಸಿ.

ಅಷ್ಟೂ ಜನರ ಭವಿಷ್ಯ ಅತಂತ್ರ ಸ್ಥಿತಿ ತಲುಪಿರುವುದಕ್ಕೆ ಸರ್ಕಾರದ ದ್ವಂದ್ವ ನೀತಿಯೇ ನೇರ ಕಾರಣ. ಒಂದು ಕಡೆ ನೇಮಕಾತಿಯನ್ನು ಬೇಕುಬೇಕಂತಲೇ ವಿಳಂಬ ಮಾಡಿಕೊಂಡು ಬರುತ್ತಿದ್ದರೆ ಮತ್ತೊಂದು ಕಡೆ ಬೇಕಾಬಿಟ್ಟಿಯಾಗಿ ಡಿ.ಎಡ್, ಬಿ.ಎಡ್ ಕಾಲೇಜುಗಳನ್ನು ತೆರೆಯಲು ಅನುಮತಿ ನೀಡಲಾಗುತ್ತಿದೆ. ಅಲ್ಲೂ ಸಹ ಖಾಸಗಿಯವರ ಲಾಭಕ್ಕೋಸ್ಕರ ಅವೈಜ್ಞಾನಿಕವಾಗಿ ಅನುಮತಿ ನೀಡಿ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟ ಆಡುತ್ತಿದೆ. 2003ರಲ್ಲಿ ಕೇವಲ 140 ಸಂಖ್ಯೆಯಲ್ಲಿದ್ದ ಶಿಕ್ಷಕ ತರಬೇತಿ ಸಂಸ್ಥೆಗಳು ಇಂದು ಒಂದೂವರೆ ಸಾವಿರವನ್ನೂ ದಾಟಿವೆ. ವರ್ಷಕ್ಕೆ ಏನಿಲ್ಲವೆಂದರೂ 60 ಸಾವಿರದಷ್ಟು ವಿದ್ಯಾರ್ಥಿಗಳು ಡಿ.ಎಡ್, ಬಿ.ಎಡ್ ಪೂರೈಸಿ ಹೊರಬರುತ್ತಿದ್ದಾರೆ.

ಸರ್ಕಾರದ ಈ ತಂತ್ರಗಾರಿಕೆಯ ವಾಸನೆ ಬಡಿಯುತ್ತಿದ್ದಂತೆ ಒಗ್ಗಟ್ಟಾಗಿ ಹೋರಾಟಕ್ಕಿಳಿದಿದ್ದಾರೆ. ಕರ್ನಾಟಕ ರಾಜ್ಯ ಡಿ.ಎಡ್-ಬಿ.ಎಡ್ ಪದವೀಧರರ ಸಂಘವನ್ನು ಸ್ಥಾಪಿಸಿಕೊಂಡು, ನಿಯಮಿತವಾಗಿ ಸರ್ಕಾರಿ ಶಿಕ್ಷಕರ ನೇಮಕಾತಿ ನಡೆಯಬೇಕೆಂಬ ಒತ್ತಾಯ ಮಾಡುತ್ತಿದ್ದಾರೆ. ಇದರ ಸಂಚಾಲಕ ಮುತ್ತುರಾಜ್ ರಾಜ್ಯಾದ್ಯಂತ ಸಂಚರಿಸಿ ಸಂಘಟಿಸುವ ಕಾಯಕದಲ್ಲಿದ್ದಾರೆ. ಆಸಕ್ತರು ಅವರ ದೂರವಾಣಿ ಸಂಖ್ಯೆ (7353770202)ಯನ್ನು ಸಂಪರ್ಕಿಸಬಹುದು. ಈಗಾಗಲೇ ಬೆಂಗಳೂರು ಸೇರಿದಂತೆ ಬಾಗಲಕೋಟೆ, ರಾಯಚೂರು, ಸುರಪುರ, ಹರಿಹರ, ದಾವಣಗೆರೆ, ಯಾದಗಿರಿ, ಅಂಕೋಲ, ಗೌರಿಬಿದನೂರು ಮುಂತಾದ ಕಡೆ ಪ್ರತಿಭಟನೆ, ಸಭೆ ನಡೆಸಿ ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಿದ್ದಾರೆ. ಮತ್ತದೇ ಭರವಸೆಯ ವರಸೆಗಳು ಮುಂದುವರೆಯಬಹುದಾದರೂ ಒಗ್ಗಟ್ಟಿನ ಸಂಘಟನೆಗಿಳಿದಿರುವುದು ಸ್ವಾಗತಾರ್ಹ ಬೆಳವಣಿಗೆ. ಈ ಸಂಘಟನೆ ಬಲವಾದಷ್ಟೂ ಅವರ ಬೇಡಿಕೆ ಕೂಗಿಗೆ ಗಟ್ಟಿತನ ಬರುತ್ತದೆ. ಇವರೊಳಗಿನ ಹತಾಶೆ ಆಕ್ರೋಶವಾಗುವ ಮುನ್ನ ಸರ್ಕಾರ ಮತ್ತು ವಿಶ್ವೇಶ್ವರ ಹೆಗಡೆ ಕಾಗೇರಿ ಶಿಕ್ಷಣದ ಖಾಸಗೀಕರಣದಿಂದ ಹೊರಬಂದು ಸೂಕ್ತ ನಿರ್ಧಾರ ಕೈಗೊಳ್ಳಬೇಕಿದೆ.

• ಗಿರೀಶ್ ತಾಳಿಕಟ್ಟೆ

# ಯಡ್ಡಿ ಗೆಲ್ಲಲ್ಲ ಹೈಕಮಾಂಡ್ ಜಗ್ಗಲ್ಲ

ಯಡಿಯೂರಪ್ಪ ಗಾಯಗೊಂಡ ಹೆಬ್ಬುಲಿಯಂತಾಗಿ ...ದ್ದಾರೆ. ಆ ಕಾರಣಕ್ಕೆ ಅವರು ದಿನಕ್ಕೊಮ್ಮೆ ಬಿಜೆಪಿಯ ...ಕಮಾಂಡ್ ವಿರುದ್ಧ ಗಂಟೆಗೊಮ್ಮೆ ರಾಜ್ಯಮಟ್ಟದ ಬಿಜೆಪಿ ...ಯಕರ ವಿರುದ್ಧ ಆರ್ಭಟಿಸುವುದನ್ನು ಅಭ್ಯಾಸ ...ಡಿಕೊಂಡಿದ್ದಾರೆ. ಹೀಗೆ ಯಡ್ಡಿ ಬಿಜೆಪಿ ಪಕ್ಷದ ಎಲ್ಲಾ ...ತಿನಿಯಮಗಳನ್ನು ಉಲ್ಲಂಘಿಸುತ್ತಿದ್ದರೂ ಆತನ ವಿರುದ್ಧ ...ವುದೇ ಶಿಸ್ತು ಕ್ರಮ ಕೈಗೊಳ್ಳಲಾಗದ ಸ್ಥಿತಿಯಲ್ಲಿರುವ ...ಜೆಪಿಯ 'ಹೈಕಮಾಂಡ್' ಒಂದರ್ಥದಲ್ಲಿ 'ಲೋ ...ಮಾಂಡ್' ಆಗಿದೆ!

...ರಾಜ್ಯವೊಂದರ ತುಂಡು ಮಾಂಡಲೀಕನ ವಿರುದ್ಧ ...ಜೆಪಿಯ ದಂಡನಾಯಕರು ಇಷ್ಟೊಂದು ನಿಶ್ಯಕ್ತರಾಗಿ ...ಣಿಸಿಕೊಳ್ಳುತ್ತಿರುವುದು ಬಹಳಷ್ಟು ಮಂದಿಯಲ್ಲಿ ಅಚ್ಚರಿ ...ಟ್ಟಿಸಿದೆ. ತಮ್ಮ ಪಕ್ಷದಲ್ಲಿ ಶಿಸ್ತು ಮತ್ತು ದಕ್ಷತೆಗೆ ಮಾತ್ರ ...ನ್ಯತೆ ಎಂದು ಬೀಗುತ್ತಿದ್ದ ಬಿಜೆಪಿಯಲ್ಲೀಗ ಯಡ್ಡಿಯ ...ಯಿಂದ ಅಶಿಸ್ತು ತಾಂಡವವಾಡುತ್ತಿದೆ. ರಾಜ್ಯ ಬಿಜೆಪಿ ...ತ್ತು ರಾಷ್ಟ್ರ ಬಿಜೆಪಿ ನಡುವಿನ ಯುದ್ಧದಲ್ಲಿ ಸದ್ಯಕ್ಕೆ ಇತ್ತ ...ಡ್ಡಿ ಗೆಲ್ಲುವ ಸಾಧ್ಯತೆಯೂ ಕಾಣಿಸುತ್ತಿಲ್ಲ, ಅತ್ತ ದೆಹಲಿ ...ಗ್ಗುವ ಸೂಚನೆಗಳೂ ಸಿಗುತ್ತಿಲ್ಲ. ಈ ವಿಪರ್ಯಾಸ ಇನ್ನೆಷ್ಟು ...ತ ಎಂದು ಚೆಡ್ಡಿಗಳು ತಲೆತಲೆ ಚಚ್ಚಿಕೊಳ್ಳುತ್ತಿದ್ದಾರೆ.

ಒಂದು ಕಾಲದಲ್ಲಿ ರಾಜ್ಯ ಬಿಜೆಪಿಯ ಪ್ರಶ್ನಾತೀತ ...ಯಕರಾಗಿ ಮೆರೆದಿದ್ದ ಯಡ್ಡಿ ಈಗ ಅದೇ ಬಿಜೆಪಿಯ ...ರುದ್ಧ ತಿರುಗಿ ಬಿದ್ದು ಬಿಜೆಪಿ ನಾಯಕರನ್ನು ಅವಹೇಳನ ...ಮಾಡುವಂತಹ ಹೇಳಿಕೆಗಳನ್ನು ಕೊಡುತ್ತಿರುವುದಕ್ಕೆ ...ರಣವೂ ಇದೆ.

ಅದು ಬಿಜೆಪಿಯಿಂದ ಉಚ್ಚಾಟನೆಗೊಳ್ಳುವ ತಂತ್ರ!

ಈಗಾಗಲೇ ಮಾನಸಿಕವಾಗಿ ಬಿಜೆಪಿ ಪಕ್ಷವನ್ನು ...ರೆದಿರುವ ಯಡಿಯೂರಪ್ಪನ ಮುಂದೆ ಈಗ ಒಂದು ...ಖ್ಯ ಆಯ್ಕೆ ಇದೆ. ಅದು ಒಂದು ಹೊಸ ಪಕ್ಷವನ್ನು ...ಟ್ಟುವುದು. ಅದಕ್ಕೆ ಬೇಕಾದಷ್ಟು ಹಣವನ್ನು ಯಡ್ಡಿ ...ರ್ನಾಟಕವನ್ನು ದೋಚುವ ಮೂಲಕ ಮಾಡಿಕೊಂಡು ...ದೆ. ಯಡ್ಡಿಗೀಗ 69 ವರ್ಷ ವಯಸ್ಸಾಗಿದ್ದರೂ ಹೊಸ ...ಕ್ಷವನ್ನು ಕಟ್ಟಿ ಬೆಳೆಸುವ ಹುಮ್ಮಸ್ಸೂ ಅವರಲ್ಲಿದೆ. ಇದೆಲ್ಲದ ...ಜೊತೆಗೆ ಹಲವಾರು ಲಿಂಗಾಯತ ಶಾಸಕರ, ಕೆಲವು ...ಮಠಾಧೀಶರ ಮತ್ತು ಭ್ರಷ್ಟ ಅಧಿಕಾರಿಗಳ ಕುಮ್ಮಕ್ಕೂ ...ದೆ. ಆದರೆ ಹೊಸ ಪಕ್ಷವನ್ನು ಕಟ್ಟಲು ಅಗತ್ಯವಾದ ...ಒಂದು ಕೊರತೆ ಮಾತ್ರ ಯಡ್ಡಿಯಲ್ಲಿದೆ.

ಅದು ವರ್ಚಸ್ಸಿನ ಕೊರತೆ!

ಹಲವಾರು ಭ್ರಷ್ಟಾಚಾರ ಆರೋಪಗಳನ್ನು ಹೊತ್ತಿರುವ, ...ಜೈಲಿಗೆ ಹೋಗಿ ಬಂದಿರುವ ಕರ್ನಾಟಕದ ಪ್ರಥಮ ಮಾಜಿ ...ಮುಖ್ಯಮಂತ್ರಿ ಎಂಬ ಕುಖ್ಯಾತಿಯನ್ನು ಗಳಿಸಿರುವ, ಸದ್ಯ ...ಸಿಬಿಐ ತನಿಖೆ ಎದುರಿಸುತ್ತಿರುವ, ಯಾವ ಕ್ಷಣದಲ್ಲಾದರೂ ...ಮತ್ತೆ ಜೈಲಿನ ಕಂಬಿ ಎಣಿಸಲಿರುವ ಯಡ್ಡಿಯ ಸಾರ್ವಜನಿಕ ...ಇಮೇಜ್ ಎಕ್ಕುಟ್ಟಿಹೋಗಿದೆ.

ಇಂತಹ ಸಂದಿಗ್ಧತೆಯನ್ನು ಎದುರಿಸುತ್ತಿರುವ ಯಡ್ಡಿಗೆ ...ಒಂದು ನೆಪ ಬೇಕಾಗಿದೆ. ಬಿಜೆಪಿ ಪಕ್ಷ ಆತನನ್ನು ...ಉಚ್ಚಾಟಿಸಿದರೆ "ನನಗೆ ಅನ್ಯಾಯವಾಗಿದೆ. ನಾನು ನಿರ್ದೋಷಿ, ...ವಿರುದ್ಧ ಯಾವ ಆರೋಪಗಳೂ ಇನ್ನೂ ಸಾಬೀತಾಗಿಲ್ಲ, ...ನು 40 ವರ್ಷಗಳ ಕಾಲ ಕಟ್ಟಿಬೆಳೆಸಿದ, ಅಧಿಕಾರಕ್ಕೆ ...ದ ಪಕ್ಷ ನನ್ನನ್ನು ಅವಮಾನಿಸಿದೆ, ರಾಜ್ಯದ ಲಿಂಗಾಯತರಿಗೆ ...ನ್ಯಾಯ ಮಾಡಿದೆ. ಆರು ಕೋಟಿ ಕನ್ನಡಿಗರ ಆಯ್ಕೆಯನ್ನು ...ಸ್ಕರಿಸಿದೆ" ಎಂದು ಬೊಬ್ಬೆಹೊಡೆಯಬಹುದು. ಆ ...ಮೂಲಕ ಜನರ ಸಿಂಪಥಿಯನ್ನು ಗಳಿಸಬಹುದು.

ಈ ಹಿಂದೆ "ದೇವೇಗೌಡ ಮತ್ತು ಅವರ ಮಗ ...ಗೆ ಮೋಸ ಮಾಡಿದರು. ದ್ರೋಹವೆಸಗಿದರು. ನಾನೇನು ...ಪ್ಪು ಮಾಡಿದ್ದೆ ಈ ಶಿಕ್ಷೆ ಅನುಭವಿಸಲು. ಲಿಂಗಾಯತರಿಗೆ ...ನ್ಯಾಯವಾಗಿದೆ" ಎಂದೆಲ್ಲ ಬೊಬ್ಬೆ ಹಾಕಿ ಮುಖ್ಯಮಂತ್ರಿ ...ಪಟ್ಟಗೆಯನ್ನು ಪಡೆದಿದ್ದ ತಂತ್ರವನ್ನೇ ಅನುಸರಿಸಿ ಮತ್ತೆ ...ಅಧಿಕಾರಕ್ಕೆ ಬರಬಹುದು ಎಂಬುದು ಯಡ್ಡಿಯ ಲೆಕ್ಕಾಚಾರ.

ಹೇಗಿದ್ದರೂ ಬಿಜೆಪಿಯಲ್ಲಿ ತನಗೆ ಮತ್ತೆ ಹಿಂದಿದ್ದ ...ಸ್ಥಾನವಾಗಲೀ, ಮಾನವಾಗಲೀ ಸಿಗುವುದಿಲ್ಲ ಎಂದು ಯಡ್ಡಿಗೆ ...ಮನವರಿಕೆಯಾಗಿದೆ. ಆದರೆ ಸುಮ್ಮನೆ ಕೂರುವಂತಿಲ್ಲ ...ದಲ್ಲಿ ಮೂಲೆಗುಂಪಾಗಿ ತೆಪ್ಪಗಿರುವಂತಿಲ್ಲ. ಇದನ್ನೆಲ್ಲ ...ಸಲಾಗದೇ ಆತನೇ ಪಕ್ಷದಿಂದ ಹೊರ ನಡೆದರೆ ...ಸ್ಥಿತಿಗೆ ದೂರಲು ಯಾರೂ ಇರುವುದಿಲ್ಲ, ...ಬೊಬ್ಬೆಹಾಕಲು ಕಾರಣವೂ ಸಿಗುವುದಿಲ್ಲ. ಆ ...ಕಾರಣಕ್ಕೇ ಈಗ ಯಡ್ಡಿಗೆ ತುರ್ತಾಗಿ ಬಿಜೆಪಿಯಿಂದ ...ಗೇಟ್‌ಪಾಸ್ ಪಡೆಯಬೇಕಿದೆ. ಅದನ್ನೇ ಬಂಡವಾಳ ...ಮಾಡಿಕೊಂಡು ರಾಜಕೀಯವಾಗಿ ತನ್ನ ಅಸ್ತಿತ್ವವನ್ನು ...ಉಳಿಸಿಕೊಳ್ಳಬೇಕಿದೆ.

ಅದೇ ಆತನ ಚೀರಾಟ, ಅರಚಾಟಗಳ ಹಿಂದಿ...ರುವ ಮಸಲತ್ತು.

ತಮಾಷೆಯ ಸಂಗತಿ ಯಾವುದೆಂದರೆ ಯಡ್ಡಿಯ ಈ ಮಸಲತ್ತು ಬಿಜೆಪಿಯ ಹೈಕಮಾಂಡಿಗೂ ಗೊತ್ತಿರುವುದು.

ಯಡ್ಡಿ ಅದೆಷ್ಟೇ ಚೀರಾಡಿದರೂ ಆತನನ್ನು ಪಕ್ಷದಲ್ಲೇ ...ಉಳಿಸಿಕೊಳ್ಳುವುದು, ಅದೇ ಹೊತ್ತಿಗೆ ಆತನಿಗೆ ಯಾವುದೇ ...ಅಧಿಕಾರ ನೀಡದೇ ಮೂಲೆಗುಂಪು ಮಾಡುವುದು, ಆ ...ಮೂಲಕ ಆತನನ್ನು ನಿಶ್ಶಕ್ತನನ್ನಾಗಿಸುವುದು, ಆನಂತರ ಆತನ ...ವಿರುದ್ಧ ಕ್ರಮಕೈಗೊಳ್ಳುವುದು... ಇದು ಬಿಜೆಪಿಯ ...ಹೈಕಮಾಂಡ್ ಈಗ ಅನುಸರಿಸುತ್ತಿರುವ ತಂತ್ರ.


ಆದರೆ ಯಡಿಯೂರಪ್ಪ ಈ ಹಂತದಲ್ಲಿ ಹೊಸ ಪಕ್ಷ ...ಕಟ್ಟಿದರೆ ಅದಕ್ಕೆ ಭವಿಷ್ಯವಿದೆಯೇ? ಈ ಪ್ರಶ್ನೆ ಯಾಕೆಂದರೆ ಇಲ್ಲಿಯತನಕ ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷವನ್ನು ಕಟ್ಟಲು ಯತ್ನಿಸಿರುವ ಯಾವ ರಾಜಕೀಯ ಧುರೀಣನೂ ಅದರಲ್ಲಿ ಯಶಸ್ವಿಯಾಗಿಲ್ಲ. ಉದಾಹರಣೆಗೆ ಒಮ್ಮೆ ರಾಜ್ಯದ ಮುಖ್ಯಮಂತ್ರಿಯಾಗಿದ್ದು ಹಲವಾರು ಕಾರಣಗಳಿಗೆ ಅಧಿಕಾರ ಕಳೆದುಕೊಂಡ ದೇವರಾಜ್ ಅರಸ್, ರಾಮಕೃಷ್ಣ ಹೆಗಡೆ, ಬಂಗಾರಪ್ಪ ಮತ್ತು ಗುಂಡೂರಾವ್ ಇವರೆಲ್ಲರೂ ಪ್ರಾದೇಶಿಕ ಪಕ್ಷ ಕಟ್ಟಲು ಯತ್ನಿಸಿ ಕೈ ಮತ್ತು ಕಿಸೆ ಸುಟ್ಟುಕೊಂಡರೇ ವಿನಃ ಅವರ್‍ಯಾರಿಂದಲೂ ಪ್ರಮುಖ ರಾಜಕೀಯ ಪಕ್ಷಗಳಿಗೆ ಪರ್ಯಾಯವಾಗಿ ರಾಜ್ಯದಲ್ಲಿ ಒಂದು ರಾಜಕೀಯ ಶಕ್ತಿಯನ್ನು ಬೆಳೆಸಲಾಗಲಿಲ್ಲ. ವಾಸ್ತವ ಹೀಗಿರುವಾಗ ಇಂತಹ ಪ್ರಯತ್ನದಲ್ಲಿ ಯಡ್ಡಿ ಯಶಸ್ಸು ಕಾಣುವ ಸಾಧ್ಯತೆಗಳಿವೆಯೇ?

ಅರಸ್, ಹೆಗಡೆ, 'ಬಂ' ಮತ್ತು 'ಗುಂ'ಗಳಿಗಿಂತ ಯಡ್ಡಿ ವಿಭಿನ್ನ. ಮೇಲೆ ಹೆಸರಿಸಿರುವ ಯಾರಿಗೂ ಒಂದು ಪ್ರಬಲ ಜಾತಿಯ ಮತ್ತು ಆ ಜಾತಿಯ ಮಠಾಧೀಶರ ಬೆಂಬಲ ಇರಲಿಲ್ಲ. ಅದಕ್ಕಿಂತ ಮುಖ್ಯವಾಗಿ ಅವರ್‍ಯಾರಲ್ಲೂ ಯಡ್ಡಿಗೆ ಇರುವಷ್ಟು ಆರ್ಥಿಕ ಸಾಮರ್ಥ್ಯವಿರಲಿಲ್ಲ. ಜಾತಿ ಮತ್ತು ಹಣಬಲ, ಈ ಎರಡರ ಮೇಲೆ ಯಡ್ಡಿ ಇತರರಿಗಿಂತಲೂ ಸ್ವಲ್ಪಮಟ್ಟಿಗೆ ಯಶಸ್ಸನ್ನು ಸಾಧಿಸುವ ಸಾಧ್ಯತೆಗಳಿವೆ. ಯಡ್ಡಿಯ ಹೊಸ ಪಕ್ಷಕ್ಕೆ ಸ್ವತಂತ್ರವಾಗಿ ಅಧಿಕಾರ ಪಡೆಯುವ ಸಾಮರ್ಥ್ಯ ಸಿಗದಿದ್ದರೂ ಅಧಿಕಾರದಲ್ಲಿರುವವರ ಜುಟ್ಟನ್ನು ತನ್ನ ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳುವಷ್ಟು ಶಕ್ತಿ ಸಿಕ್ಕರೂ ಸಿಗಬಹುದು.

ಅದು ಸಿಗಬೇಕೆಂದರೆ ಯಡ್ಡಿಗೆ ಜನರ ಸಿಂಪಥಿ ಅತ್ಯಗತ್ಯವಾಗಿ ಬೇಕು. ಅದು ಸಿಗುವುದು ಬಿಜೆಪಿಯಿಂದ ಹೊರ ದಬ್ಬಿಸಿಕೊಂಡರೆ ಮಾತ್ರ! ಹಾಗೆ ದಬ್ಬಿಸಿಕೊಳ್ಳುವ ಪರಿಸ್ಥಿತಿಯನ್ನು ನಿರ್ಮಿಸಿ, ತನ್ನ ಪರವಾಗಿ ರಾಜ್ಯಾದ್ಯಂತ ಸಿಂಪಥಿಯ ಅಲೆಯನ್ನೇ ಹುಟ್ಟುಹಾಕುವುದು ಯಡ್ಡಿಯ ಲೆಕ್ಕಾಚಾರ.

ಕಳೆದ ಹಲವಾರು ತಿಂಗಳುಗಳಿಂದ ಯಡ್ಡಿ ಮಾಡಿರುವ ತಕರಾರುಗಳು ಒಂದೇ ಎರಡೇ. ಸಂಸದರಾಗಿ ಮುಖ್ಯಮಂತ್ರಿ ಸದಾನಂದ ಗೌಡರು ಪ್ರತಿನಿಧಿಸುತ್ತಿದ್ದ ಉಡುಪಿ-ಚಿಕ್ಕಮಗಳೂರು ಲೋಕಸಭೆ ಕ್ಷೇತ್ರದಲ್ಲಿ ಉಪ ಚುನಾವಣೆಗಳು ನಡೆದಾಗ ಯಡ್ಡಿ ಪಕ್ಷದ ಪರವಾಗಿ ಪ್ರಚಾರದಲ್ಲಿ ಭಾಗವಹಿಸದೇ ಬಂಡಾಯದ ಬಾವುಟವನ್ನು ಹಾರಿಸಿದರು. ಆ ಮೂಲಕ ಪಕ್ಷದ ಅಭ್ಯರ್ಥಿ ಸುನೀಲ್ ಕುಮಾರ್ ಸೋಲುವಂತೆ, ಸದಾನಂದ ಗೌಡರಿಗೆ ಅವಮಾನವಾಗುವಂತೆ ನೋಡಿಕೊಂಡರು.

ಕಳೆದ ಬಜೆಟ್ ಅಧಿವೇಶನಕ್ಕೂ ಮುನ್ನ ಹುಬ್ಬಳ್ಳಿಯಲ್ಲಿ ಭಾರೀ ಸಭೆಯನ್ನು ಏರ್ಪಡಿಸಿ, ತನ್ನ ಹಿಂಬಾಲಕರಿಂದ ಸನ್ಮಾನ ಮಾಡಿಸಿಕೊಂಡ, ಭೋಪರಾಕ್ ಕೂಗಿಸಿಕೊಂಡ ಯಡ್ಡಿ ಸದಾನಂದ ಗೌಡ ಮುಖ್ಯಮಂತ್ರಿಯಾಗಿದ್ದರೂ ತಾನೇ




ರಾಜ್ಯದ ಡಿಫ್ಯಾಕ್ಟೋ ಮುಖ್ಯಮಂತ್ರಿ ಎಂಬಂತೆ ವಿಜೃಂಭಿಸಲು ಯತ್ನಿಸಿದರು. ತನಗೆ ಮುಖ್ಯಮಂತ್ರಿ ಸ್ಥಾನವನ್ನು ವಾಪಸ್ ಕೊಡದಿದ್ದರೆ ರಾಜ್ಯದ ಲಿಂಗಾಯತರು ದಂಗೆ ಏಳುತ್ತಾರೆ ಎಂಬ ಬೆದರಿಕೆಯನ್ನು ಹಾಕಿದರು. ಇದ್ಯಾವುದಕ್ಕೂ ಬಿಜೆಪಿಯ ಹೈಕಮಾಂಡ್ ಸೊಪ್ಪು ಹಾಕಲಿಲ್ಲ.

ಇಷ್ಟಾಗಿಯೂ ಸದಾನಂದ ಗೌಡರು ಬಜೆಟ್ ಮಂಡನೆ ಮಾಡಲೇಬಾರದು ಎಂದು ಹಟ ಹಿಡಿದರು. ತನ್ನ ಹಿಂಬಾಲಕರು ಬಜೆಟ್ ಅಧಿವೇಶನದಲ್ಲಿ ಭಾಗವಹಿಸಬಾರದೆಂದು ಅವರನ್ನೆಲ್ಲ ಕಟ್ಟಿಕೊಂಡು ರೆಸಾರ್ಟಿಗೆ ಹಾರಿಹೋದರು. ತಾನು ಏನೇ ಮಾಡಿದರೂ ಸದಾನಂದ ಗೌಡರ ಬದಲಾಗಿ ತಾನೇ ಬಜೆಟ್ ಮಂಡಿಸುವ ಸಾಧ್ಯತೆಗಳು ಕ್ಷೀಣಿಸಿದಾಗ "ಡಿವಿ ಬದಲು ಲಿಂಗಾಯತ ಸಮುದಾಯದ ಜಗದೀಶ್ ಶೆಟ್ಟರಿಗೆ ಬಜೆಟ್ ಮಂಡಿಸಲು ಅವಕಾಶ ನೀಡಬೇಕು" ಎಂದು ಹೈಕಮಾಂಡನ್ನು ಪರಿಪರಿಯಾಗಿ ಬೇಡಿಕೊಂಡರು.

ಇದಾದನಂತರ ಎದುರಾಗಿದ್ದೆ ರಾಜ್ಯಸಭಾ ಚುನಾವಣೆ. ಆಗಲೂ ಯಡ್ಡಿ ಪಕ್ಷದ ಅಧಿಕೃತ ಅಭ್ಯರ್ಥಿಯ ವಿರುದ್ಧ ತನ್ನ ಹಿಂಬಾಲಕನೊಬ್ಬನನ್ನು ಬಂಡಾಯ ಅಭ್ಯರ್ಥಿಯಾಗಿ ಚುನಾವಣಾ ಅಖಾಡಕ್ಕೆ ಇಳಿಸುವ ಧೈರ್ಯ ತೋರಿದರು. ಆಗಲೂ ಹೈಕಮಾಂಡ್ ಯಡಿಯೂರಪ್ಪನ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲೇ ಇಲ್ಲ.

ಸಮಯ ಸಿಕ್ಕಾಗಲೆಲ್ಲ ಬಿಜೆಪಿಯ ವಿರುದ್ಧ ಮತ್ತು ಸದಾನಂದ ಗೌಡರ ವಿರುದ್ಧ ಕಿಡಿಕಾರುತ್ತಲೇ ಬಂದಿರುವ



ಯಡ್ಡಿ ಮೊನ್ನೆ ಮೊನ್ನೆ ಮತ್ತೆ ಮುಖ್ಯಮಂತ್ರಿ ವಿರುದ್ಧ ಅವರ ಸಮ್ಮುಖದಲ್ಲೇ ಸಾರ್ವಜನಿಕ ಸಭೆಯೊಂದರಲ್ಲಿ ಗುಡುಗಿದರು. ಇಂತಹ ಸನ್ನಿವೇಶದಲ್ಲೂ ತಮ್ಮ ತಾಳ್ಮೆಯನ್ನು ಕಳೆದುಕೊಳ್ಳದ ಸದಾನಂದ ಗೌಡ ಯಡ್ಡಿಯ ಆರ್ಭಟಕ್ಕೆ ಮಾರ್ಮಿಕವಾಗಿ ಉತ್ತರಿಸುವ ಮೂಲಕ ತಮ್ಮ ರಾಜಕೀಯ ಮುತ್ಸದ್ದಿತನವನ್ನು ಪ್ರದರ್ಶಿಸಿ ಆ ಬಿಸಿ ವಾತಾವರಣವನ್ನು ತಿಳಿಗೊಳಿಸಿದರು.

ಈಗ ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಸಿಬಿಐ ತನಿಖೆಯನ್ನು ಎದುರಿಸುತ್ತಿರುವ ಯಡ್ಡಿ ಇಂತಹ ಪರಿಸ್ಥಿತಿಯಲ್ಲೂ ಬಿಜೆಪಿ ವಿರುದ್ಧದ ತನ್ನ ಬಂಡಾಯ ಚಟುವಟಿಕೆಗಳನ್ನು ಕಡಿಮೆಗೊಳಿಸದಿರುವುದು ಅಚ್ಚರಿಯಾಗಿದೆ. ಅಷ್ಟೇ ಅಲ್ಲ, ತಾನು ಬಿಜೆಪಿಯ ರಾಜ್ಯ ಮತ್ತು ರಾಷ್ಟ್ರ ನಾಯಕರನ್ನು ಅದೆಷ್ಟೇ ನಿಂದಿಸಿದರೂ ಹೈಕಮಾಂಡ್ ಜಪ್ಪೆನ್ನಲಿಲ್ಲದ್ದನ್ನು ಕಂಡ ಯಡಿಯೂರಪ್ಪ ಹೊಸ ತಂತ್ರವನ್ನು ಕೈಗೆತ್ತಿಕೊಂಡರು. ಅದೇನೆಂದರೆ ಅವರ ಜೀವನದಲ್ಲೇ ಮೊದಲ ಬಾರಿಗೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರನ್ನು ಹೊಗಳಿದ್ದು. ಮಾತ್ರವಲ್ಲ, ಹಾಗೆ ಮಾಡುವ ಮೂಲಕ ತನ್ನನ್ನು ನಿರ್ಲಕ್ಷಿಸಿದರೆ ತಾನು ಕಾಂಗ್ರೆಸ್ ಪಕ್ಷಕ್ಕೆ ಹೋಗುತ್ತೇನೆನ್ನುವ ಬೆದರಿಕೆಯನ್ನು ಹಾಕಿದ್ದು.

ಇದರ ಹಿಂದೆಯೂ ಒಂದು ತರ್ಕ ಅಡಗಿತ್ತು. ಒಂದೋ, ತನಗೆ ಹೆದರಿದ ಹೈಕಮಾಂಡ್ ತನ್ನ ಎಲ್ಲ ಬೇಡಿಕೆಗಳಿಗೆ ಅಸ್ತು ಅನ್ನುತ್ತದೆ, ಇಲ್ಲವಾದರೆ ತನ್ನ ಪ್ರಮುಖ ವಿರೋಧಿ ಸೋನಿಯಾ ಗಾಂಧಿಯನ್ನು ಹೊಗಳಿದ್ದಕ್ಕೆ ತನ್ನನ್ನು ಪಕ್ಷದಿಂದಲೇ ಹೊರಹಾಕುತ್ತದೆ ಎಂಬ ಲೆಕ್ಕಾಚಾರ ಯಡ್ಡಿಯದ್ದಾಗಿತ್ತು. ಆದರೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಯನ್ನು ಹೊಗಳಿದ ಯಡಿಯೂರಪ್ಪನವರ ಭಾಷಣವನ್ನು ಕೇಳಿದ ದೆಹಲಿ ನಾಯಕರು ಸುಮ್ಮನೆ ನಕ್ಕರೇ ವಿನಃ ಅದನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ.

ಮಾತಿನಲ್ಲಿ ಹೇಳಿದರೆ ಸಾಕಾಗುವುದಿಲ್ಲವೇ. ನಡೆಯಲ್ಲೂ ತೋರುತ್ತೇನೆ ಎಂಬ ಜಿದ್ದಿಗೆ ಬಿದ್ದ ಯಡಿಯೂರಪ್ಪ ಕಳೆದ ವಾರ ತಮ್ಮ ಹೊಸ ಕಚೇರಿಯನ್ನು ಉದ್ಘಾಟಿಸುವಾಗ ಬಿಜೆಪಿಯ ಹಿರಿಯ ನಾಯಕರಾದ ಮಾಜಿ ಪ್ರಧಾನಿ ವಾಜಪೇಯಿ, ಈಗಲೂ ಪ್ರಧಾನಿ ಆಗುವ ಆಕಾಂಕ್ಷೆಯನ್ನು ಹೊಂದಿರುವ ಎಲ್.ಕೆ.ಅಡ್ವಾನಿಯ ಫೋಟೋಗಳ ಬದಲಿಗೆ ಸೋನಿಯಾ ಗಾಂಧಿ ಅವರ ಫೋಟೋ ರಾರಾಜಿಸುವಂತೆ ನೋಡಿಕೊಂಡರು. ಇದರ ಬಗ್ಗೆಯೂ ದೆಹಲಿ ನಾಯಕರು ಜಾಣ ಕುರುಡನ್ನು ಪ್ರದರ್ಶಿಸಿದರು. ಅಂದರೆ ಪಕ್ಷದಿಂದ ತನ್ನನ್ನು ಹೈಕಮಾಂಡ್ ಉಚ್ಚಾಟಿಸಲೇಬೇಕಾದಂತಹ ಅನಿವಾರ್ಯ ಪರಿಸ್ಥಿತಿಗಳನ್ನು ಯಡ್ಡಿ ಸಾಲುಸಾಲಾಗಿ ನಿರ್ಮಿಸುತ್ತಾ ಬಂದಿದ್ದರೂ ಅದ್ಯಾವುದನ್ನೂ ಹೈಕಮಾಂಡ್ ಗಂಭೀರವಾಗಿ ಪರಿಗಣಿಸುತ್ತಲೇ ಇಲ್ಲ.

ಹೀಗೆ ದಿನಕ್ಕೊಮ್ಮೆ ಬಿಜೆಪಿ ವಿರುದ್ಧ ಬಂಡಾಯದ ಬಾವುಟ ಹಾರಿಸುತ್ತಿರುವ ಯಡಿಯೂರಪ್ಪ ಈಗ ರಾಜ್ಯದ ಜನರ ಕಣ್ಣಲ್ಲಿ ಒಂದು ರೀತಿಯಲ್ಲಿ ಜೋಕರ್ ಆಗಿಯೂ, ಇನ್ನೊಂದು ರೀತಿಯಲ್ಲಿ ದುರಂತ ನಾಯಕರಾಗಿಯೂ ಕಾಣಿಸುತ್ತಿದ್ದಾರೆ. ಯಡ್ಡಿಯ ಬಂಡಾಯ ಮತ್ತು ಹೇಳಿಕೆಗಳು ಪತ್ರಿಕಾ ಹೇಳಿಕೆಗಳಿಗಷ್ಟೇ ಸೀಮಿತವಾಗುತ್ತಿದೆ.

ಕಳೆದ ಹಲವಾರು ತಿಂಗಳುಗಳಿಂದ ತನ್ನ ಪಕ್ಷದ ವಿರುದ್ಧವೇ ತನ್ನ ಬತ್ತಳಿಕೆಯಿಂದ ಅನೇಕ ಬಾಣಗಳನ್ನು ಬಿಡುತ್ತ ಬಂದಿರುವ ಯಡಿಯೂರಪ್ಪ ಮೊನ್ನೆ 'ಬ್ರಹ್ಮಾಸ್ತ್ರ' ವೊಂದನ್ನು ದೆಹಲಿಯತ್ತ ಎಸೆದರು. ಮಲ್ಲೇಶ್ವರಂನಲ್ಲಿ ತಮ್ಮ ಹೊಸ ಕಚೇರಿಯನ್ನು ಪ್ರಾರಂಭಿಸಿರುವ ಯಡ್ಡಿ ಅಲ್ಲಿ ಮುಖ್ಯಮಂತ್ರಿಯ ರೀತಿಯಲ್ಲೇ 'ಜನತಾದರ್ಶ'ನಗಳನ್ನು ನೀಡ ಲಾರಂಭಿಸಿದ್ದಾರೆ. ಅಷ್ಟೇ ಅಲ್ಲ, ರಾಜ್ಯದ ಮುಖ್ಯಮಂತ್ರಿಯ ಅಧಿಕೃತ ಕಚೇರಿಯಾದ 'ಕೃಷ್ಣ' ಮತ್ತು ಅಧಿಕೃತ ನಿವಾಸವಾದ 'ಅನುಗ್ರಹ'ದಲ್ಲಿ ಆಗದ ಕೆಲಸಗಳನ್ನು ತಾನು ತನ್ನ ಈ ಹೊಸ ಕಚೇರಿಯಿಂದ ಮಾಡಿಸುತ್ತೇನೆ ಎಂದು ಯಡಿಯೂರಪ್ಪ ತನ್ನ ಪಕ್ಷದ ಶಾಸಕರಿಗೆ ಮಾತ್ರವಲ್ಲ, ವಿರೋಧ ಪಕ್ಷದ ಶಾಸಕರ ಮುಂದೆಯೂ ಕೊಚ್ಚಿಕೊಂಡಿದ್ದಾರೆ. ಹಾಗೆ ಮಾಡುವ ಮೂಲಕ ಮುಖ್ಯಮಂತ್ರಿ ಸದಾನಂದ ಗೌಡರಿಗೆ ತಾನು ಪರ್ಯಾಯವಾಗಿ ವಿಧಾನ ಸೌಧದ ಹೊರಗೆ ಒಂದು ಶಕ್ತಿ ಕೇಂದ್ರವನ್ನು ಹುಟ್ಟುಹಾಕುತ್ತಿರುವೆ ಎಂಬ ಸಂದೇಶವನ್ನು ರವಾನಿಸಿದ್ದಾರೆ.

ತಾನು ಹೀಗೆ ಪರ್ಯಾಯವಾಗಿ ಇಡುತ್ತಿರುವ ಹೆಜ್ಜೆಗಳನ್ನು ಗಮನಿಸಿಯಾದರೂ ದೆಹಲಿ ನಾಯಕರು ಸಿಟ್ಟುಗೊಳ್ಳುತ್ತಾರೆ ಎಂದು ಯಡ್ಡಿ ಭಾವಿಸಿದ್ದರು. ಆದರೆ ಯಡ್ಡಿಯನ್ನು ಈಗ ಕಾಡುತ್ತಿರುವ ದುರಾದೃಷ್ಟ ಯಾವ ಮಟ್ಟದ್ದೆಂದರೆ ಇದನ್ನು ಗಮನಿಸಿಯೂ ದೆಹಲಿ ನಾಯಕರು ಯಾವ ರೀತಿಯಲ್ಲೂ ಸ್ಪಂದಿಸದೇ ತಣ್ಣಗೆ ಕುಳಿತಿದ್ದಾರೆ.

ಯಡ್ಡಿ ಇವತ್ತಿಗೂ ತನ್ನ ಭಿನ್ನಮತೀಯ ಚಟುವಟಿಕೆಗಳ ತೀವ್ರತೆಯನ್ನು ದಿನದಿಂದ ದಿನಕ್ಕೆ ಹೆಚ್ಚಿಸುತ್ತಲೇ ಹೋಗುತ್ತಿದ್ದಾರೆ. ಅದರ ಪರಾಕಾಷ್ಠೆಯೆಂಬಂತೆ 'ಈ ಬಾರಿಯ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಗೆ ಸೋಲು ಖಂಡಿತ' ಎಂದು ಭವಿಷ್ಯವನ್ನು ಯಡಿಯೂರಪ್ಪ ನುಡಿದಿದ್ದಾರೆ. ಇದಕ್ಕೂ ದೆಹಲಿ ನಾಯಕರು ಮೌನದಿಂದಲೇ ಉತ್ತರಿಸಿದ್ದಾರೆ. ಯಡ್ಡಿಯ ಇಂತಹ ಎಲ್ಲಾ ಭಿನ್ನಮತೀಯ ಹೇಳಿಕೆಗಳು ಮತ್ತು ಚಟುವಟಿಕೆಗಳಿಗಾಗಿ ಆತನನ್ನು ಪಕ್ಷದಿಂದ ಉಚ್ಚಾಟಿಸಿದರೆ ಆತನ ಪರವಾಗಿ ಕರ್ನಾಟಕದಲ್ಲಿ ಅನುಕಂಪದ ಅಲೆ ಏಳುತ್ತದೆ, ಅದರಲ್ಲೂ ಮುಖ್ಯವಾಗಿ ಲಿಂಗಾಯತ ಸಮುದಾಯದ ಬಹಳಷ್ಟು ಜನರು ಇದು ಲಿಂಗಾಯತ ನಾಯಕನೊಬ್ಬನಿಗಾದ ಅವಮಾನ ಎಂದು ಭಾವಿಸುತ್ತಾರೆ, ಆಗ ಬಿಜೆಪಿಗೆ ಜನ ಬೆಂಬಲ ಕಡಿಮೆ ಆಗುತ್ತದೆ ಎಂಬ ರಾಜಕೀಯ ಅರಿವು ಹೈಕಮಾಂಡಿಗೆ ಇದೆ. ಹೀಗಾಗಿ ಯಡಿಯೂರಪ್ಪ ಏನೇ ಹೇಳಲಿ, ಏನೇ ಮಾಡಲಿ ಅವರನ್ನು ಯಾವ ಕಾರಣಕ್ಕೂ ಪಕ್ಷದಿಂದ ಉಚ್ಚಾಟಿಸಲೇಬಾರದು ಎಂಬುದು ಹೈಕಮಾಂಡ್ ರಣತಂತ್ರವಾಗಿದೆ. ಜನಸಾಮಾನ್ಯರು ತಮ್ಮನ್ನು ನಿಶ್ಯಕ್ತ ನಾಯಕರೆಂದು ಭಾವಿಸಿದರೂ ಪರವಾಗಿಲ್ಲ, ಯಾವ ಕಾರಣಕ್ಕೂ ಯಡ್ಡಿಯನ್ನು ಉಚ್ಚಾಟಿಸುವ ಮೂಲಕ ಆತ ಹಂಬಲಿಸುತ್ತಿರುವ ಸಿಂಪಥಿಗೆ, ವರ್ಚಸ್ಸಿಗೆ ಅನುಕೂಲತೆ ಮಾಡಿಕೊಡಬಾರದೆಂದು ಬಿಜೆಪಿ ಹೈಕಮಾಂಡ್ ಗಟ್ಟಿ ಮನಸ್ಸು ಮಾಡಿರುವಂತಿದೆ.

ಆದರೆ ಯಡಿಯೂರಪ್ಪನ ಲೆಕ್ಕಾಚಾರವೇ ಬೇರೆ. ದಿನಕ್ಕೊಂದು ಬೆದರಿಕೆ ಹಾಕುತ್ತ, ದಿನಕ್ಕೊಂದು ಭಿನ್ನಮತೀಯ ಚಟುವಟಿಕೆ ನಡೆಸುತ್ತ, ಹೈಕಮಾಂಡಿನ ವಿರುದ್ಧ ಕೂಗುತ್ತಾ ಬಿಜೆಪಿ ನಾಯಕರಿಗೆ ಮುಜುಗರ ಆಗುವಂತೆ ಕಾಂಗ್ರೆಸ್ ನಾಯಕಿಯನ್ನು ಹೊಗಳುತ್ತ ಬಿಜೆಪಿಯಿಂದ ಉಚ್ಚಾಟಿಸಿಕೊಳ್ಳಬೇಕೆಂಬ ಯಡ್ಡಿಯ ಯತ್ನಗಳು ಮುಂದುವರೆಯುತ್ತಲೇ ಇವೆ. ದೆಹಲಿಯಲ್ಲಿರುವ ಬಿಜೆಪಿ ನಾಯಕರು ಯಡ್ಡಿಯನ್ನು ಪಕ್ಷದಿಂದ ಉಚ್ಚಾಟಿಸುವುದಿಲ್ಲ, ಯಡ್ಡಿ ಹೈಕಮಾಂಡನ್ನು ಅವಹೇಳನ ಮಾಡುವುದನ್ನು ನಿಲ್ಲಿಸುವುದಿಲ್ಲ. ಈ ಹಗ್ಗ ಜಗ್ಗಾಟದಲ್ಲಿ ಮಾಧ್ಯಮದವರಿಗೆ ದಿನಕ್ಕೊಂದು ಬಾರಿ ಯಡ್ಡಿಯ ದರ್ಶನವೂ, ರಾಜ್ಯದ ಜನರಿಗೆ ದಿನಕ್ಕೊಂದು ಜೋಕು ಉಚಿತವಾಗಿ ಸಿಗುತ್ತಿದೆ!

ನಿಜ ಏನೆಂದರೆ, ಬಿಜೆಪಿ ಹೈಕಮಾಂಡ್ ಮತ್ತು ಯಡ್ಡಿಯ ನಡುವಿನ ಈ ಕೋಳಿ ಜಗಳವನ್ನು ಪ್ರತಿನಿತ್ಯ ನೋಡುತ್ತಿರುವ ರಾಜ್ಯದ ಜನತೆ ಮತ್ತೊಮ್ಮೆ ಯಾವುದೇ ಕಾರಣಕ್ಕೂ ಬಿಜೆಪಿಯನ್ನು ಅಧಿಕಾರಕ್ಕೆ ತರಲೇಬಾರದೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಈ ಸತ್ಯದ ಅರಿವು ಇಲ್ಲದ ಚೆಡ್ಡಿಗಳು ದಿನದಿಂದ ದಿನಕ್ಕೆ ಜನಮಾನಸದಿಂದ ದೂರವಾಗುತ್ತಿದ್ದಾರೆ.

ಇತ್ತ ಯಡ್ಡಿ ಗೆಲ್ಲಲ್ಲ, ಅತ್ತ ಬಿಜೆಪಿಯ ಹೈಕಮಾಂಡ್ ಕೂಡ ಸೋಲಲ್ಲ. ಈ ರಂಗಿನ ಆಟ ಇನ್ನೆಷ್ಟು ದಿನ ಹೀಗೇ ಸಾಗುವ ದುರ್ದೈವ ಕರ್ನಾಟಕಕ್ಕೆ...

• ತ್ರೆನ್ಸ್

## ಕಾರವಾರದಲ್ಲಿ ಹುಸಿ ಗುಂಡು ಗದ್ದಲ!!

# ಬನ್ನಂಜೆ ರಾಜನ ಬೆದರಿಕೆಯಾ? ಸೈಲನ ಸಿಂಪಥಿ ಸಿನೆಮಾನಾ?

• ನಹುಷ

**ಈ** ಸಮುದ್ರನಗರಿಯಲ್ಲಿ ಮತ್ತೊಮ್ಮೆ ಗುಂಡಿನ ಮೊರೆತ ಕೇಳಿಸಿದೆ; ಸಿಜರೀನ್ ಸಚಿವ ಆನಂದ ಅಸ್ನೋಟಿಕರ್ ಅಪ್ಪ ವಸಂತ ಅಸ್ನೋಟಿಕರ್ ಶಾಸಕನಾಗಿದ್ದಾಗ ಆತನನ್ನು ಭೂಗತ ಪಾತಕಿ ದಿಲೀಪ್ ನಾಯ್ಕ ಗುಂಡಿಟ್ಟು ಕೊಲ್ಲಿಸಿದ್ದ. ಆ ನಂತರ ದಿಲೀಪನೂ ಹತನಾಗಿಹೋದ. ಆಗ ಆನಂದ್ ಅಸ್ನೋಟಿಕರ್ ತನ್ನ ತಂದೆಯ ಹತ್ಯೆಯ ಸೇಡು ತೀರಿಸಿಕೊಂಡನೆಂದೇ ಜನ ಮಾತಾಡಿಕೊಂಡಿದ್ದರು. ಈಗ ಇದೇ ಆನಂದ ಅಸ್ನೋಟಿಕರ್‌ನ ರಾಜಕೀಯ ಮತ್ತು ವ್ಯಾವಹಾರಿಕ ಎದುರಾಳಿ ಸತೀಶ ಸೈಲ್ ಎಂಬ ಆಕ್ರಮ ಅದಿರು ದಂಧೆ ದೊರೆಯ ಮನೆಯಂಗಳದಲ್ಲಿ ಒಂದಲ್ಲ ಎರಡೆರಡು ಹುಸಿ ಗುಂಡು 'ಢಂ...!...ಢಂ...!!' ಎಂದಬ್ಬರಿಸಿ ದಂಗುಬಡಿಸಿದೆ! ಈ ಭೀಭತ್ಸ ಸದ್ದಿನ ಸುತ್ತ ಲೋಕಲ್ ರಾಜಕಾರಣದ ಜಿದ್ದಾಜಿದ್ದಿ, ಭೂಗತ ಲೋಕದ ಹಫ್ತಾ ವಸೂಲಿ ಹಿಕಮತ್ತು ಮತ್ತು ಅದಿರು ದಂಧೆಯ ದೋಖಾಗಳೆಲ್ಲ ಒಟ್ಟೊಟ್ಟಿಗೆ ಗಿರಕಿ ಹೊಡೆಯುತ್ತಿದೆ.

### ಗುಂಡಿನ ಗಮ್ಮತ್ತು

ಅಂದು ರವಿವಾರ (13-5-2012). ರಾತ್ರಿ ಸುಮಾರು 10 ಗಂಟೆಯ ಕತ್ತಲು. ಕಬ್ಬಿಣದ ಅದಿರು ವಿದೇಶಕ್ಕೆ ಹಡಗುಗಟ್ಟಲೆ ರಫ್ತು ಮಾಡುವ ಬ್ಲಾಕ್ ಬಿಸಿನೆಸ್‌ದಾರ ಕಂ ಕೆಪಿಸಿಸಿ ಸದಸ್ಯ ಸತೀಶ್ ಸೈಲ್‌ನ ಕಾರವಾರದ ಹೊರವಲಯದಲ್ಲಿರುವ ಸದಾಶಿವಗಡದ ಮನೆ ಎದುರು ಒಂದು ಬೈಕ್ ಬಂದು ನಿಲ್ಲುತ್ತದೆ. ಹೆಲ್ಮೆಟ್ ಧರಿಸಿದ್ದ ಉದ್ದನೆಯ ಆಕೃತಿಯೊಂದು ಬೈಕಿನಿಂದ ಇಳಿದು ಸೀದಾ ಸತೀಶ್ ಸೈಲನ ಮನೆ ಗೇಟಿನ ಬಳಿ ಹೋಗುತ್ತದೆ. ಅಲ್ಲಿದ್ದ ಸೆಕ್ಯೂರಿಟಿಗಾರ್ಡ್‌ಗೆ "ನಿನ್ನ ಸಾಹುಕಾರ ಎಲ್ಲಿ?" ಎಂದು ಹಿಂದಿಯಲ್ಲಿ ಕೇಳುತ್ತದೆ ಆ ಮನುಷ್ಯಾಕಾರ.

**ಕಾರವಾರ ಕಂಗಾಲಾಗಿದೆ!**

ಕಾವಲುಗಾರ "ಸಾಬ್ ಮನೇಲಿಲ್ಲ..." ಎಂದುತ್ತರಿಸುತ್ತಾನೆ.

"ಸರಿ ... ಈ ಪತ್ರ ನಿನ್ನ ಸಾಹೇಬನಿಗೆ ಕೊಡು" ಎಂದ್ಹೇಳಿ ಒಂದು ಪತ್ರ ಆ ವ್ಯಕ್ತಿ ಸೆಕ್ಯೂರಿಟಿ ಕೈಗಿಡುತ್ತಾನೆ. ನೋಡುನೋಡುತ್ತಿದ್ದಂತೆಯೇ ಕೈಲಿದ್ದ ಪ್ಲಾಸ್ಟಿಕ್‌ನ ಕ್ಯಾರಿಬ್ಯಾಗ್‌ನಿಂದ ಪಿಸ್ತೂಲ್ ಒಂದನ್ನು ಹೊರತೆಗೆದು ಸೈಲನ ಮನೆಯತ್ತ ಎರಡು ಗುಂಡು ಹಾರಿಸಿ ಕತ್ತಲಲ್ಲಿ ಕರಗಿಹೋಗುತ್ತಾನೆ. ಒಂದು ಗುಂಡು ಸೈಲನ ಮನೆಯ ಹೆಬ್ಬಾಗಿಲಿಗೆ ಬಡಿದರೆ, ಇನ್ನೊಂದು ಅಂಗಳದಲ್ಲಿ ಬೀಳುತ್ತದೆ. ಆ ಹೊತ್ತಲ್ಲಿ ಸೈಲ್ ಮನೇಲಿ ಇರುವುದಿಲ್ಲ, ಮುಂದಿನ ಅಸೆಂಬ್ಲಿ ಎಲೆಕ್ಷನ್ ತಯಾರಿ ನಡೆಸಿರುವ ಆತ ಪಕ್ಕದ ಅಂಕೋಲೆಯ ಕಾಂಗ್ರೆಸ್ ಪುಢಾರಿಯೊಬ್ಬರ ಮನೆಗೆ 'ಬಂಡಿ ಹಬ್ಬ'ದ ಕೋಳಿ ಆಸೆ-ಕೊಟ್ಟೆ ರೊಟ್ಟಿ ಮೆಲ್ಲಲು ಹೋಗಿರುತ್ತಾನೆ. ಸೈಲ್ ಬರುವಷ್ಟರಲ್ಲಿ ಆತನ ಮನೆ ಮುಂದೆ ಹಿಂಬಾಲಕರ ದಂಡು ಜಮಾಯಿಸಿರುತ್ತದೆ. ಈ ಗುಂಡಿನ ದಾಳಿ ಸುದ್ದಿ ಕ್ಷಣಾರ್ಧದಲ್ಲಿ ಕಾರವಾರದಾದ್ಯಂತ ಹಬ್ಬಿ ಏನೋ ಒಂಥರಾ ಆತಂಕ-ಅನುಮಾನ ಹೆಪ್ಪುಗಟ್ಟುತ್ತದೆ!


### ಸೈಲ್ ಸ್ಟೋರಿ

ಸಾಮಾನ್ಯ ಪಿಡಬ್ಲ್ಯೂಡಿ ನೌಕರನ ಮಗನಾದ ಸತೀಶ್ ಸೈಲ್ ಕಳ್ಳಕಬ್ಬಿಣದ ಅದಿರು ವ್ಯವಹಾರ ಉಚ್ಛ್ರಾಯ ಸ್ಥಿತಿಗೇರುವ ಮುಂಚೆ ಕಾರವಾರದಲ್ಲಷ್ಟೇ ಅಲ್ಲ, ಅಕ್ಕ-ಪಕ್ಕದ ಮನೆಯವರಿಗೂ ಅಪರಿಚಿತ ಅಬ್ಬೇಪಾರಿಯಂತಿದ್ದ. ಪಕ್ಕದ ಗೋವಾ ರಾಜ್ಯದ ಮಡಗಾಂವ್ ಬಂದರಿನಲ್ಲಿ ಸಣ್ಣ-ಪುಟ್ಟ ಶಿಪ್ಪಿಂಗ್ ದಂಧೆ ನಡೆಸುತ್ತಿದ್ದ. ಸೈಲ್ ಅದ್ಹೇಗೋ ಅದಿರು ವಿದೇಶಕ್ಕೆ ರಫ್ತು ಮಾಡುವುದು ಶುರುಹಚ್ಚಿಕೊಂಡಿದ್ದ. ಜುಜುಬಿ ಗಣಿ ಉದ್ಯಮಿಗಳಿಂದ ಹಿಡಿದು ಅದಿರು ಮಾಫಿಯಾದ ಕಿಂಗ್‌ಪಿನ್ ಜನಾರ್ದನ ರೆಡ್ಡಿವರೆಗಿನವರ ಸಖ್ಯ ಸಹಜವಾಗೇ ಸೈಲ್‌ಗೆ ಕುದುರಿತ್ತು. ಗಣಿ ಗೂಂಡಾಗಳು ಕದ್ದ ಕೋಟ್ಯಾಂತರ ಬೆಲೆಯ ಅದಿರನ್ನು ಹಗಲೂ-ಇರುಳು ಹಡಗಿಗೆ ತುಂಬಿ-ತುಂಬಿ ವಿದೇಶಕ್ಕೆ ಕಳುಹಿಸತೊಡಗಿದ ಸೈಲ್-ಜರೆಡ್ಡಿ ದೋಸ್ತಿ ಗಾಢವಾಗಿಹೋಯ್ತು! ಈ ಅನೈತಿಕ ಸ್ನೇಹ-ಸಂಬಂಧ ಎಲ್ಲಿಗೆ ಹೋಯ್ತೆಂದರೆ ಬಿಜೆಪಿ ಸರ್ಕಾರದಲ್ಲಿ ಪವರ್‌ಫುಲ್ ಆಗಿದ್ದ ರೆಡ್ಡಿ ತನ್ನ ಬಲ ಬಳಸಿ ಬೇಲೇಕೇರಿಯಲ್ಲಿ ಶಿಪ್ಪಿಂಗ್ ನಡೆಸಲು ಸೈಲ್‌ಗೆ ಅವಕಾಶ ಮಾಡಿಕೊಡುತ್ತಾನೆ.

ಆ ನಂತರ ಗೋವಾ ಮತ್ತು ಬೇಲೇಕೇರಿ ಬಂದರಿನಲ್ಲಿ ಅದಿರು ಎಕ್ಸ್‌ಪೋರ್ಟ್‌ನ 'ಡಾನ್' ಆಗಿ ಅವತರಿಸಿದ ಸೈಲ್ ಹಿಂತಿರುಗಿ ನೋಡಿದ್ದೇ ಇಲ್ಲ! ಕೋಟಿಕೋಟಿಗಳ ಲೆಕ್ಕದಲ್ಲೇ ಕಪ್ಪು ಹಣ ಕೂಡಿಸುತ್ತ ಹೋದ!! ಹಡಬೆ ಹಣ ಮತ್ತು ಬಿಜೆಪಿಯ ತಿಜೋರಿಯಂತಿದ್ದ ಜನಾರ್ದನ ರೆಡ್ಡಿಯ ನಂಟು ಸೈಲ್‌ಗೆ ರಾಜಕಾರಣದ ರುಚಿಯೂ ಹತ್ತಿಸಿತು. 2008ರ ಅಸೆಂಬ್ಲಿ ಎಲೆಕ್ಷನ್ ವೇಳೆ ಆತನಿಗೆ ರೆಡ್ಡಿ ಕಾರವಾರದಿಂದ ಬಿಜೆಪಿ ಟಿಕೆಟ್‌ನಲ್ಲಿ ಸ್ಪರ್ಧಿಸುವಂತೆ ಪರಿಪರಿಯಾಗಿ ವಿನಂತಿಸಿದ್ದ. ಆದರೆ ಲೋಕಸಭೆ ಸದಸ್ಯನಾಗುವ ಒಳ ಆಸೆಯಲ್ಲಿದ್ದ ಮಹತ್ವಾಕಾಂಕ್ಷಿ ಸೈಲ್ ಅಸೆಂಬ್ಲಿ ಟಿಕೆಟ್ ಬೇಡವೆಂದು ಬಿಸಾಡಿದ್ದ. ಎಂಪಿ ಟಿಕೆಟ್‌ಗೆ ತನ್ನೆಲ್ಲ ದೋಸಂಬರ್ ಅದಿರು ಲಾಬಿ ಮೂಲಕ ಪ್ರಯತ್ನವೇನೋ ಮಾಡಿದ. ಆದರೆ ಆರೆಸ್ಸೆಸ್ ಮತ್ತು ಹಿಂದೂ ಸಂಘಟನೆಗಳು ಚೆಂಕಿ ನವಾಬ ಅನಂತಕುಮಾರ್ ಹೆಗಡೆ ಪರ ವಕಾಲತ್ತು ಬಲವಾಗಿ ಮಾಡಿದ್ದರಿಂದ ಸೈಲ್‌ಗೆ ಬಿಜೆಪಿಯಲ್ಲಿ ಕಿಮ್ಮತ್ತೇ ಸಿಗಲಿಲ್ಲ!


ಯಾವಾಗ ತನ್ನಾಪ್ತ ಮಿತ್ರ ಜರೆಡ್ಡಿ ಕಾಂಗ್ರೆಸ್ ಶಾಸಕನಾಗಿದ್ದ ಆನಂದ ಅಸ್ನೋಟಿಕರ್‌ಗೆ ಆಪರೇಷನ್ (ಕ-ಮಲ) ಮಾಡಿ ಬಿಜೆಪಿ ದೀಕ್ಷೆ ಕೊಡಿಸಿದನೊ ಆಗ ಸೈಲ್ ಸೆಟೆದು ನಿಂತು ನೇರಾನೇರ ರಾಜಕಾರಣ ಮಾಡತೊಡಗಿದ. ಅಸ್ನೋಟಿಕರ್ ಬಿಜೆಪಿಗೆ ರಾತ್ರೋರಾತ್ರಿ ಹಾರಿದಾಗ ಕಾಂಗ್ರೆಸ್ ದೇಶಪಾಂಡೆಗೆ ಮುದ್ದಿನ ಗಿಣಿ ಹದ್ದಾಗಿ ಕಚ್ಚಿದಂತಾಗಿತ್ತು, ಅಸ್ನೋಟಿಕರ್ ವಿರುದ್ಧ ಹಣವಂತನೊಬ್ಬನ ಜರೂರು ದೇಶಪಾಂಡೆಗಿತ್ತು, ಅಸ್ನೋಟಿಕರ್‌ಗಿಂತ ಹೆಚ್ಚು ದುಡ್ಡು ಇದ್ದ ಸತೀಶ ಸೈಲ್‌ಗೆ ದೇಶಪಾಂಡೆ ವಶೀಕರಣ ಮಾಡಿ ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡಿದ್ದರು. ಜನ ಬಳಕೆಯಿಲ್ಲದ ಈ ರೆಡಿಮೇಡ್ ರಾಜಕಾರಣಿಯ ದೌಲತ್ತು ಮತದಾರರಿಗೆ ಸಹ್ಯವಾಗಲಿಲ್ಲ, ಸೈಲ್ ದೊಡ್ಡ ಅಂತರದಲ್ಲಿ ಸೋತುಹೋದ. ಆದರೆ ಹಾಳೂರಿಗೆ ಉಳಿದೋನೇ ಗೌಡ ಎಂಬಂತೆ ಅಳಿದುಳಿದಿದ್ದ ಕಾರವಾರ-ಅಂಕೋಲೆಯ ಕಾಂಗ್ರೆಸ್‌ಗೆ ಈ ದುಡ್ಡಿನ ಶೋಮ್ಯಾನ್‌ನೇ ಯಜಮಾನನಂತಾಗಿಹೋದ!

ಕಾರವಾರ ಕ್ಷೇತ್ರದ ರಾಜಕೀಯ, ಸಾಮಾಜಿಕ, ಧಾರ್ಮಿಕ ವಲಯದಲ್ಲಿ ಮಂತ್ರಿ ಅಸ್ನೋಟಿಕರ್ ಮತ್ತು ಸೈಲ್ ಜಿದ್ದಾಜಿದ್ದಿಗೆ ಬಿದ್ದರು. ಮದುವೆ-ಬೊಜ್ಜದೂಟ-ಪುಸ್ಥದಲ್ಲೂ ಪೈಪೋಟಿಗೆ ಬಿದ್ದಂತೆ ಠಳಾಯಿಸತೊಡಗಿದರು. ಮಂತ್ರಿ ಅಸ್ನೋಟಿಕರ್ ಅಧಿಕಾರ ಬಲದಿಂದ ಸೈಲನ ಹುಟ್ಟಡಗಿಸಲು ಹವಣಿಸಿದ. ಆತನ ಅದಿರು ಉದ್ಯಮಕ್ಕೆ ಕೈಹಾಕಿ ಅಲುಗಾಡಿಸಿದ. ಬೇಲೇಕೇರಿಯಲ್ಲಿದ್ದ ಸೈಲನ ಅದಿರು ರಫ್ತು ಮಾಡುವ ಜೆಟ್ಟಿ (ಹಡಗು ನಿಲ್ದಾಣ) ಅಕ್ರಮವೆಂದು ಕಾಡಿದ. ಸೈಲ್ ಕರೂರು ಮೈದಾನದಲ್ಲಿ ರೆಸಾರ್ಟ್ ಮಾಡಲು ನೋಡಿದರೆ ಅದಕ್ಕೂ ಕಲ್ಲುಹಾಕಿದ. ತಾನೂ ಬೇಲೇಕೇರಿಯಲ್ಲಿ ರಾಜಮಹಲ್ ಸಿಲ್ಕ್ಸ್ ಕಂಪನಿ ಜತೆಗೂಡಿ ಅದಿರು ರಫ್ತು ದಂಧೆ ಆರಂಭಿಸಿ ಸೈಲ್‌ಗೆ ಸೆಡ್ಡು ಹೊಡೆದ. ಇತ್ತ ಸೈಲನೂ ತಿರುಗಿ ನಿಂತು ಕತ್ತಿ ವರಸೆಗಿಳಿದ. ಅಸ್ನೋಟಿಕರ್‌ನ 'ಲೋಟಸ್ ಹೋಟೆಲ್, ಬೇಲೇಕೇರಿ ಜೆಟ್ಟಿ ಅಕ್ರಮವೆಂದು ಬೊಬ್ಬೆ ಹೊಡೆದ; ಮಾಲ್ಡೀವ್ಸ್‌ಗೆ ಮರಳು ಕದ್ದು ಸಾಗಿಸುತ್ತಿದ್ದಾಗ ಅಸ್ನೋಟಿಕರ್‌ಗೆ ಅಡ್ಡಗಾಲು ಹಾಕಿದ. ಕಾರವಾರದ ಮರಳು-ಜಲ್ಲಿಕಲ್ಲಿನ ಮಾಫಿಯಾದ ಮೂಲ ಪುರುಷನೇ ಅಸ್ನೋಟಿಕರ್ ಎಂದು ಬಿಂಬಿಸಿದ. ಜಿಲ್ಲಾ ಪಂಚಾಯತ್-ತಾಲ್ಲೂಕು ಪಂಚಾಯತ್ ಎಲೆಕ್ಷನ್ ಹೊತ್ತಲ್ಲಿ ಶಾಸಕತ್ವದಿಂದ ಅನರ್ಹನಾಗಿ ಒದ್ದಾಡುತ್ತಿದ್ದ ಅಸ್ನೋಟಿಕರ್‌ಗೆ ಸೈಲ್ ಸಹಚರರು ಮುಖಭಂಗ ಮಾಡಿದರು. ಕಾರವಾರದ ರಾಜಕಾರಣ ಕಳ್ಳ ದುಡ್ಡಿನ ಗೂಳಿಗಳ ಕಾಳಗದಿಂದ ಆತಂಕ-ಅನಾಹುತ-ಅನಾಚಾರದ ಮಡುವಂತಾಗಿಹೋಯ್ತು!





### ಬನ್ನಂಜೆ ಬಡಿವಾರ

ಮಂತ್ರಿ ಅಸ್ನೋಟಿಕರ್‌ಗಿದ್ದ ಭೂಗತ ದೊರೆಗಳ ದೋಸ್ತಿ ಕಂತ್ರಿ-ಖತರ್‌ನಾಕ್ ರಾಜಕಾರಣದ ತಂತ್ರಗಾರಿಕೆಯೆಲ್ಲ ಗೊತ್ತಿದ್ದ ಪುಕ್ಕಲು ಸ್ವಭಾವದ ಸೈಲ್ ಒಳಗೊಳಗೆ ಬೆವರುತ್ತಿದ್ದ. ಯಾಕಾದರೂ ರಾಜಕಾರಣ ಖೆಡ್ಡಾಕ್ಕೆ ಬಿದ್ದೆನೆಂದು ಪರಿತಪಿಸುತ್ತಲೂ ಇದ್ದ. ಒಣ ಪ್ರತಿಷ್ಠೆ ಆತನನ್ನು ರಾಜಕಾರಣ ಬಿಟ್ಟುಹೋಗಲಿಕ್ಕೂ ಬಿಡುತ್ತಿಲ್ಲ. ಜತೆಗೆ ಅದಿರು ಕಳ್ಳ ಸಾಗಾಣಿಕೆಯಿಂದ ಕೂಡಿಸಿರುವ ಕಪ್ಪು ಹಣ, ಕಾರವಾರ-ಅಂಕೋಲಾ-ಕುಮಟಾ-ಹೊನ್ನಾವರ ಮುಂತಾದೆಡೆ ಖರೀದಿಸಿರುವ ಜಮೀನುಗಳೇ ಈಗ ಆತನಿಗೆ ಜೀವಭಯವಾಗಿ ಕಾಡುತ್ತಿದೆ. ಭೂಗತ ದೊರೆ ಬನ್ನಂಜೆ ರಾಜನ ಕಣ್ಣು ಸೈಲ್ ಮೇಲೆ ಬಿದ್ದು ಅದ್ಯಾವುದೋ ಕಾಲವಾಗಿ ಹೋಗಿದೆ. ದುಬೈನಲ್ಲಿ ಅಡಗಿಕುಳಿತಿರುವ ಉಡುಪಿ ಮೂಲದ ಭೂಗತ ಪಾತಕಿ ಬನ್ನಂಜೆ ರಾಜನ ಕೈಯಲ್ಲಿ ಕರಾವಳಿಯ ಹಣವಂತ ಉದ್ಯಮಿಗಳ ಲಿಸ್ಟ್ ಇರುವುದು ಹಳೆಯ ಕತೆ.





ಸೈಲನ ಕಳ್ಳ ಕಾಸಿನಲ್ಲಿ ದೊಡ್ಡದೊಂದು ಪಾಲು ಹೊಡೆಯಲು ಬನ್ನಂಜೆ ರಾಜಾ ಸ್ಕೆಚ್ ಹಾಕಿರುವಂತಿದೆ. ಕಳೆದ ನವೆಂಬರ್ 4, 2011ರಂದು ಸತೀಶ್ ಸೈಲನ ಹತ್ತಿರದ ಸಂಬಂಧಿಯೂ, ಆತನ ಕಪ್ಪು-ಬಿಳುಪಿನ ವ್ಯವಹಾರ ಬಲ್ಲವನೂ ಆಗಿರುವ ಶ್ರೀಕಾಂತ ಸೈಲ್ ಎಂಬಾತನಿಗೆ ರಾಜ ಹಫ್ತಾ ಫೋನ್ ಕಾಲ್ ಮಾಡಿದ್ದನಂತೆ. ಆದಷ್ಟು ಬೇಗ ಬರೋಬ್ಬರಿ 450 ಕೋಟಿ ರೂ. ಕೊಡಬೇಕೆಂದು ಹೆದರಿಸಿದ್ದನಂತೆ. ಹಾಗಂತ ಸೈಲ್‌ನೇ ಪೊಲೀಸ್ ಕಂಪ್ಲೇಂಟು ಕೊಟ್ಟಿದ್ದ. ಆದರೆ ಉತ್ತರ ಕನ್ನಡದ ಹೇತ್ಲಾಂಡಿ ಪೊಲೀಸರು ಇದನ್ನ ಯಾಕೋ ಅಷ್ಟು ಸೀರಿಯಸ್ಸಾಗಿ ಪರಿಗಣಿಸಿಯೇ ಇಲ್ಲ.




ಅದಾಗಿ ಆರು ತಿಂಗಳುಗಳೇ ಕಳೆದುಹೋಗಿದೆ. ಈಗ ಮತ್ತೆ ರೌಡಿ ರಾಜನ ಹೆಸರಲ್ಲಿ ಸತೀಶ್ ಸೈಲ್‌ಗೆ ಬೆದರಿಕೆ ಬಂದಿದೆ. ಮೊನ್ನೆ ಮೇ 13ರಂದು ಕತ್ತಲಲ್ಲಿ ಸೈಲ್ ಮನೆ ಗೇಟಿಗೆ ಬಂದಿದ್ದ ಆಗಂತುಕ ಕಾವಲುಗಾರನ ಕೈಗೊಂದು ಹಿಂದಿಯಲ್ಲಿ ಬರೆದ ಪತ್ರ ಕೊಟ್ಟಿದ್ದನಲ್ಲವಾ? ಆ ಪತ್ರ ನೇರ ಸತೀಶ್ ಸೈಲನಿಗೇ ಬರೆಯಲಾಗಿದೆ. "... ಹಿಂದೆ ನೀನು ಕೊಟ್ಟ ಮಾತು ಉಳಿಸಿಕೊಂಡಿಲ್ಲ; ನೀನು ಮಾತಿನಂತೆ ನಡೆಯದಿದ್ದರೆ ನಿನ್ನ ಎರಡು ಮಕ್ಕಳ ಸಮೇತ ಇಡೀ ವಂಶವನ್ನೇ ನಾಶಮಾಡಿಬಿಡುತ್ತೇನೆ..." ಎಂಬಿತ್ಯಾದಿ ಜೀವಭಯ ಮೂಡಿಸುವ ಒಕ್ಕಣೆ ಆ ಓಲೆಯಲ್ಲಿದೆ. ಹೋಗುವಾಗ ಆ 'ಆದ್ಮಿ' ಸೈಲನ ಮನೆಯಂಗಳಕ್ಕೆ ಎರಡು ಗುಂಡು ಹಾರಿಸಿ ಹೋಗಿದ್ದಾನೆ.

ಇದ್ಯಾಕೋ ಮಕ್ಕಳಾಟಿಕೆಯಂತೆ ಅನ್ನಿಸುತ್ತದೆ. ಭೂಗತ ಪಾತಕಿ ಬನ್ನಂಜೆ ರಾಜನ ದೂತರೇ ಬಂದಿದ್ದರೆ, ಇಷ್ಟು ಬಾಲಿಶವಾಗಿ ವರ್ತಿಸುತ್ತಿದ್ದರಾ? ರಾಜನಿಗೆ ಸೈಲನ ಕೊಂದರೆ ಲಾಭವಾದರೂ ಏನು? ಜೀವಂತವಿದ್ದರಷ್ಟೇ ಅಲ್ಲವಾ ಹಫ್ತಾ ಸಿಗುವುದು? ಹಾಗಿರುವಾಗ ಆತ ಸೈಲನಿಗೇ ನೇರ ಹೆದರಿಸುತ್ತಿರಲಿಲ್ಲವಾ? ಆತ ಮನೆಯಲ್ಲಿರುವ ಸಮಯ ಕರಾರುವಾಕ್ಕಾಗಿ ಲೆಕ್ಕಹಾಕಿಯೇ ಬಂಟರ ಕಳಿಸುತ್ತಿರಲಿಲ್ಲವಾ? ಹೀಗೆ ಹುಚ್ಚುಚ್ಚಾಗಿ ಆ ಪಾತಕಿಗಳು ಗುಂಡುಹಾರಿಸಿ ಪರಾರಿಯಾಗುತ್ತಿದ್ದರಾ? ಎಂತೆಂಥ ಉದ್ಯಮಿಗಳನ್ನು ಬೆದರಿಸಿ, ಕೊಲೆ ಮಾಡಿ ಹಫ್ತಾ ವಸೂಲಿ ಮಾಡಿರುವ ಡಾನ್ ಬನ್ನಂಜೆ ರಾಜ ಇಷ್ಟು ಮೃದುವಾಗಿ ಆಟ ಆಡಲು ಸಾಧ್ಯವಾ? ಇಂಥ ಅನುಮಾನಗಳೀಗ ಕಾರವಾರದಲ್ಲಿ ಎಲ್ಲರಲ್ಲೂ ಮೂಡಿದೆ! ಒಟ್ಟಿನಲ್ಲಿ ಬಂದವರು ರಾಜನ ಸಹಚರರೇ ಎಂಬ ಬಗ್ಗೇ ಅನುಮಾನಗಳೆದ್ದಿವೆ.




### ಅಸ್ನೋಟಿಕರ್ ಆಟವಾ?

ಸೈಲನ ಮನೆ ಮೇಲೆ ನಡೆದಿರುವ ಅನುಮಾನಾಸ್ಪದ ಗುಂಡು ದಾಳಿಯನ್ನು ಆತನ ರಾಜಕೀಯ-ವ್ಯಾವಹಾರಿಕ ವೈರಿ-ಮಂತ್ರಿ, ಆನಂದ ಅಸ್ನೋಟಿಕರ್‌ನ ಬಾಗಿಲು ಬಡಿದು ಬೆಕ್ಕು ಓಡಿಸುವ ಆಟವೆಂದೇ ವಿಶ್ಲೇಷಿಸಲಾಗುತ್ತಿದೆ. ಅಸ್ನೋಟಿಕರ್‌ನ ಭುಗತ ನಂಟು-ಅಪಾಯಕಾರಿ ರಾಜಕಾರಣದ ಜಾತಕ ಬಲ್ಲವರಂತೂ ಈ ಗುಂಡು ಹಾರಾಟ ಪ್ರಕರಣವನ್ನು ಸೈಲನ ರಾಜಕಾರಣ ಬಟ್ಟೋಡಿಸುವ ತಂತ್ರಗಾರಿಕೆ ಎಂದೇ ವಾದಿಸುತ್ತಾರೆ. ಮುಂದಿನ ಚುನಾವಣೆ ವೇಳೆಗೆ ಕಾಂಗ್ರೆಸ್ ಸೇರುವ ಯೋಜನೆ ಹಾಕಿರುವ ಅಸ್ನೋಟಿಕರ್‌ಗೆ ದಿಲ್ಲಿ ಕಾಂಗ್ರೆಸ್ ಮಾಂಡಲೀಕರ ಬೆಂಬಲವೂ ಸಿಕ್ಕಿದೆ. ದೇಶಪಾಂಡೆ ಮಣಿಸಲು ಮಾರ್ಗರೇಟ್ ಆಳ್ವ ಈ ಅಸ್ನೋಟಿಕರ್‌ಗೆ ಕಾಂಗ್ರೆಸ್ ಟಿಕೆಟ್ ಕೊಡಿಸಲು ರೆಡಿಯಾಗಿದ್ದಾರಂತೆ. ಕಳೆದ ಬಾರಿ ಪಕ್ಷಾಗಿ ವಿರೋಧ ಲೆಕ್ಕಿಸದೇ ಇದೇ ಅಸ್ನೋಟಿಕರ್‌ಗೆ ದೇಶಪಾಂಡೆ ಕಾಂಗ್ರೆಸ್ ಅಭ್ಯರ್ಥಿ ಮಾಡಿದ್ದರು. ಈಗ ಉಲ್ಟಾ-ಪಲ್ಟಾ ಆಗುವ ಸೂಚನೆ ಗೋಚರಿಸುತ್ತಿದೆ. ಇಷ್ಟಾದರೂ ಅಸ್ನೋಟಿಕರ್ ಕಾಂಗ್ರೆಸ್ ಪ್ರವೇಶಕ್ಕೆ ಸತೀಶ್ ಸೈಲ್ ಕಾಲ್ತೊಡಕಾಗಿದ್ದಾರೆ.


ಈ ಸತೀಶ ಸೈಲ್‌ನ ನಿವಾರಿಸಿಕೊಳ್ಳಲು ಅಸ್ನೋಟಿಕರ್ ತರತರದ ತಂತ್ರ ಶುರುಮಾಡಿರುವುದು ಬಹಿರಂಗ ರಹಸ್ಯ. ಕಾಂಗ್ರೆಸ್ ಸೇರಬೇಕೆಂದರೆ, ಮುಂದಿನ ಎಲೆಕ್ಷನ್ ದಾರಿ ಸುಲಭ ಮಾಡಿಕೊಳ್ಳಬೇಕೆಂದರೆ ಸೈಲ್‌ನಿಗೆ ಜೀವಭಯ ಒಡ್ಡಿ ರಾಜಕೀಯದಿಂದಲೇ ನಿವೃತ್ತಿಗೊಳಿಸುವುದು ಅಸ್ನೋಟಿಕರ್‌ಗೆ ಅನಿವಾರ್ಯ! ಹೀಗಾಗಿ ಆತ ಭೂಗತ ರೌಡಿಗಳ ಹೆಸರಲ್ಲಿ ಮಸಲತ್ತು ಮಾಡಿರುವ ಸಾಧ್ಯತೆಯಿದೆ. ಕಳೆದ ನವೆಂಬರ್‌ನಲ್ಲಿ ಸತೀಶ ಸೈಲನ ನಂಬಿಗಸ್ಥ ಸಹಚರ-ರ ಸಂಬಂಧಿ ಶ್ರೀಕಾಂತ ಸೈಲನಿಗೆ ಬಂದ ಹಫ್ತಾ ಬೇಡಿಕೆಯ ಬೆದರಿಕೆಯ ಕರೆಯಿಂದ ಮೊನ್ನೆ ಆತನ ಮನೆಯಂಗಳದಲ್ಲಿ ನಡೆದ ಹುಸಿ ಗುಂಡು ಹಾರಾಟದವರೆಗಿನ ಘಟನಾವಳಿ ಗಮನಿಸಿದರೆ ಇದೆಲ್ಲ ಸ್ಥಳೀಯರೇ ಮಾಡಿರುವ ಸಂಶಯ ಎಂಥ ಗಾಂಪನಿಗೂ ಬರುತ್ತದೆ.

ದುಬೈ ಅಥವಾ ಮುಂಬೈನಲ್ಲಿ ಕುಳಿತು ಬರೀ ಹಣಕ್ಕಾಗಿ ಪೀಡಿಸುವ ಭೂಗತರು ತಮ್ಮ ಬೇಟೆಯ ಬಂಧು-ಬಾಂಧವರನ್ನೆಲ್ಲ ಜಾಲಾಡಲು ಹೋಗುವುದಿಲ್ಲ. ಅವರಿಗೆ ಹಣವಂತನೇ ಮೊದಲ ಗುರಿ ಆಗಿರುತ್ತಾನೆ. ಮೊನ್ನೆ ಸೈಲನ ಮನೆ ಮುಂದೆ ನಡೆದ ಪ್ರಹಸನವನ್ನೇ ತೆಗೆದುಕೊಳ್ಳಿ. ಅಂದು ಸೈಲ ಮನೆಯಲ್ಲಿ ಇರಲಿಲ್ಲ, ಅಷ್ಟೇ ಅಲ್ಲ, ಮನೆ ಕಾವಲುಗಾರನ ಕೈಲೂ ಗನ್ ಇರಲಿಲ್ಲ. ಅದು ಲೈಸೆನ್ಸ್ ರಿನಿವಲ್‌ಗೋ-ರಿಪೇರಿಗೋ ಕಳಿಸಲಾಗಿತ್ತು. ಹಾಗೆಯೇ ಸೈಲ್ ಮನೆ ಗೇಟಲ್ಲಿದ್ದ ಸಿಸಿ ಕ್ಯಾಮರಾ ಸರ್ವೀಸ್‌ಗೆ ಹಾಳಾಗಿತ್ತು, ಇಂಥ 'ಸುಸಂದರ್ಭ' ನೋಡಿಯೇ ಸೈಲ್‌ನ ಮನೆ ಮೇಲೆ ದಾಳಿ ನಾಟಕ ನಡೆಸಲಾಗಿದೆ. ಅಂದರೆ ಸೈಲನ ಚಲನವಲನ ಆತನ ಮನೆಯ ಸ್ಥಿತಿಗತಿ ಹಾಗೂ ನಿಕಟವರ್ತಿಗಳ ಲ್ಯಾಂಡ್, ಮೊಬೈಲ್ ಫೋನ್ ನಂಬರ್ ಬಲ್ಲ ಸ್ಥಳೀಯರೇ ಈ ಬ್ಲ್ಯಾಕ್‌ಮೇಲ್ ತಂತ್ರ ನಡೆಸಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಇಂಥ ಹಿಕಮತ್ತಿನಲ್ಲಿ ಮಂತ್ರಿ ಆನಂದ ಅಸ್ನೋಟಿಕರ್ ನಿಸ್ಸೀಮ! ಇದು ಆತನ ತಂದೆಯಿಂದ ಬಂದ ಬಳುವಳಿ!!

ಸೈಲ್ ಮನೆ ಮೇಲೆ ನಡೆದ ಹುಸಿಗುಂಡು ದಾಳಿಯ ರೂವಾರಿ ಮಂತ್ರಿ ಅಸ್ನೋಟಿಕರ್ ಇರಬಹುದೆಂಬ ಅನುಮಾನಕ್ಕೆ ಇನ್ನಷ್ಟು ಬಲಪಡಿಸುವಂತಿದೆ ಅಂದು ಆತ ಸತೀಶ್ ಸೈಲ್‌ಗೆ ಮಾಡಿದ ಸಾಂತ್ವನದ ಫೋನ್ ಕರೆ! ತನ್ನ ಮನೆ ಅಂಗಳದಲ್ಲಿ ಶೂಟ್‌ಔಟ್ ಆಗಿರುವುದು ಕೇಳಿ ಸತೀಶ್ ಸೈಲ್ ಕಾರವಾರ ಸೇರುವ ಮೊದಲೇ ಸಾಂಪ್ರದಾಯಿಕ ಎದುರಾಳಿ ಮಂತ್ರಿ ಆನಂದ ಅಸ್ನೋಟಿಕರ್ ಆತನಿಗೆ ಫೋನಾಯಿಸಿದ್ದಾನೆ. "... ನಿನ್ನ ಮನೆ ಮೇಲೆ ಗುಂಡು ಹಾರಿಸಿದ್ದು ಕೇಳಿದೆ...ನೀನೇನೂ ಹೆದರಬೇಡ... ಬೇಕಿದ್ದರೆ ಪೊಲೀಸರಿಗೆ ಫುಲ್ ಪ್ರೊಟೆಕ್ಷನ್ ಕೊಡಲು ಹೇಳ್ತೇನೆ... ಇನ್ನೇನಾದರೂ ಸಹಾಯ ಬೇಕಿದ್ದರೆ ಕೇಳು..." ಎಂದು ಸಂತೈಸಿದ್ದಾನೆ. ಆನಂದ್ ಅಸ್ನೋಟಿಕರ್. ಅಷ್ಟು ಲಗುಬಗೆಯಲ್ಲಿ ಅಸ್ನೋಟಿಕರ್ 'ಲವ್ ಫೋನ್' ಮಾಡಿದ್ದು ನೋಡಿದರೆ ಆತನಿಗಂದು 'ಗುಂಡಿನ ಗಡಿಬಿಡಿ' ಆಗುವುದು ಗೊತ್ತಿತ್ತೆನ್ನಿಸುತ್ತದೆ! ಎಂಥ ಚಾಣಾಕ್ಷ ಪಾತಕಿಯಾದರೂ ಸಣ್ಣ ಸಾಕ್ಷ್ಯಾಧಾರ ಬಿಟ್ಟು ಹೋಗುತ್ತಾನಲ್ಲವಾ? ಅಸ್ನೋಟಿಕರ್‌ಗೆ ಒಂದಂತೂ ಪಕ್ಕಾ ಗೊತ್ತಿದೆ. ಅದೆಂದರೆ ಈ ಸೈಲ್ ಸ್ವಭಾವತಃ ಪುಕ್ಕಲ. ಇಂಥ ಮಾರಣಾಂತಿಕ ಥ್ರೇಟ್‌ಗೆ ಆತ ಬೆದರಿ ರಾಜಕಾರಣದಿಂದ ಪಲಾಯನ ಮಾಡುತ್ತಾನೆಂಬುದು ಅಸ್ನೋಟಿಕರ್ ದೂ(ರು)ರಾಲೋಚನೆ. ಆಗ ತನ್ನ ಕಾಂಗ್ರೆಸ್ ಸೇರ್ಪಡೆ ನಿರಾತಂಕ ಎಂಬುದು ಅಸ್ನೋಟಿಕರ್ ಸ್ಟ್ರೆಟಜಿ!!

### ಸಿಂಪಥಿ ಸಾಹಸವಾ?


ಸತೀಶ್ ಸೈಲ್ ಮನೆ ಅಂಗಳದಲ್ಲಿ ಗಾಳಿಯಲ್ಲಿ ಗುಂಡು ಹಾರಿಸಿ ಹೋಗಿರುವ ಅನಾಮಿಕರಿಬ್ಬರು ಸೆಕ್ಯೂರಿಟಿ ಗಾರ್ಡ್‌ಗೆ ಕೊಟ್ಟುಹೋಗಿರುವ ಬೆದರಿಕೆ ಪತ್ರದ ಕೊನೆಯಲ್ಲಿ ರನ್ನಿಂಗ್ ಇಂಗ್ಲಿಷ್ ಅಕ್ಷರದಲ್ಲಿ 'ಬಿ.ಆರ್.' ಎಂದು ಸಹಿ ಮಾಡಲಾಗಿದೆ. ಈ 'ಬಿ.ಆರ್.' ಒರಿಜಿನಲ್ ಬನ್ನಂಜೆ ರಾಜನೋ ಅಥವಾ ನಕಲಿಯೋ? ಎಂಬ ಅನುಮಾನ ಬಂದಿರುವುದಕ್ಕೆ ಸತೀಶ್ ಸೈಲ್ ಮತ್ತವನ ರಾಜಕೀಯ-ಬಿಸಿನೆಸ್ ಶತ್ರು ಮಂತ್ರಿ ಆನಂದ್ ಅಸ್ನೋಟಿಕರ್‌ನ ಚೋರ ಚಹರೆಗಳೇ ಕಾರಣ. ಆನಂದ ಅಸ್ನೋಟಿಕರ್‌ಗೆ ಕಾಂಗ್ರೆಸ್ ಸೇರಲು 'ಬೆದರಿಕೆ ಭಾನ್ಗಡಿ' ಎಷ್ಟು ಅನಿವಾರ್ಯವೋ ಅಷ್ಟೇ 'ಸಿಂಪಥಿ ಪ್ರಹಸನ'ದ ಆವಶ್ಯಕತೆ ಸೈಲನಿಗಿದೆ. ರಾಜಕಾರಣದಲ್ಲಿ ಉಳಿಯಲು ಮತ್ತು ವ್ಯಾವಹಾರಿಕವಾಗಿ ಆಗಿರುವ ಡ್ಯಾಮೇಜ್ ಕಂಟ್ರೋಲ್ ಮಾಡಿಕೊಳ್ಳಲು



...ಜನಿಕ ಸಹಾನುಭೂತಿ ಗಿಟ್ಟಿಸಲು ಸೈಲನೇ ಈ ...ಟಾಟ' ಆಡಿದ್ದಾನೆಂದು ವಾದಿಸುವವರೂ ಇದ್ದಾರೆ. ...ಒಂದೆಡೆ ಅದಿರು ಉದ್ಯಮದಲ್ಲಿ ಅಕ್ರಮ ನಡೆಸಿ ...ದ್ದು ಹೈರಾಣಾಗಿರುವ ಸತೀಶ್ ಸೈಲ್ ಮತ್ತೊಂದೆಡೆ ...ಕೀಯವಾಗಿಯೂ ಪರ್ಯುರಿತರಾಗಿದ್ದಾರೆ. ...ಕಾಯುಕ್ತದವರು ಬೇಲೇಕೇರಿಯಲ್ಲಿ ಸೀಜ್ ಮಾಡಿದ್ದ ...ದ ಅದಿರಲ್ಲಿ 3.21 ಲಕ್ಷ ಮೆಟ್ರಿಕ್ ಟನ್‌ಗಳಷ್ಟನ್ನು ...ಶ್ ಸೈಲ್‌ನ 'ಮಲ್ಲಿಕಾರ್ಜುನಾ ಶಿಪ್ಪಿಂಗ್ ಕಂಪೆನಿ' ...ವಿದೇಶಕ್ಕೆ ರಫ್ತು ಮಾಡಿದೆ ಎಂದು ಸುಪ್ರೀಂಕೋರ್ಟ್ ...ಸಿದ್ದ ಉನ್ನತಾಧಿಕಾರ ಸಮಿತಿ ವರದಿಯಲ್ಲಿ ಸ್ಪಷ್ಟವಾಗಿ ...ಲಾಗಿದೆ. ಆಗಸ್ಟ್ 3ರ ನಂತರ ಸಿಬಿಐ ನಡೆಸುವ ... ವೇಳೆ ಸೈಲ್ ಜೈಲು ಪಾಲಾಗುವುದು ಗ್ಯಾರಂಟಿ. ...ಯೇ ಆತ ಕಾರವಾರಾದ್ಯಂತ ತನ್ನ ಕಳ್ಳ ಕಾಸಿಂದ ...ಬಟ್ಟಿಯಾಗಿ ಜಮೀನು ಖರೀದಿಸಿದ್ದು ಜನರಲ್ಲಿ ... ಬಗ್ಗೆ ಅಸಹ್ಯ ಮೂಡಿಸಿದೆ. ಗುಂಟೆಗೆ 1-2 ಲಕ್ಷ ...ಸಿಕಟ್ಟೆ ದರವಿದ್ದದ್ದು ಸೈಲನ ಭೂದಾಹದಿಂದ ಪ್ರತಿ ಗುಂಟೆಗೆ 16-18 ಲಕ್ಷಕ್ಕೇರಿದೆ. ಬಡವರಿಗೆ ನೆಲೆ ಮಾಡಿಕೊಳ್ಳಲಿಕ್ಕೂ, ಈಗ ಈ ಸೈಲನ ದುಡ್ಡಿನ ದುರಾಚಾರದಿಂದ ಅಂಗೈ ಅಗಲದ ಜಮೀನು ಸಿಗದಂತಾಗಿದೆ. ಕಾರವಾರದ ಶೇ.25 ರಷ್ಟು ಭೂಮಿ ಈ ಸೈಲನೇ ಖರೀದಿಸಿದ್ದಾನೆ. ಪಕ್ಕಾ ದಗಾಕೋರ ವ್ಯಾಪಾರಿ ಬುದ್ಧಿಯ ಸೈಲನಿಗೆ ಜನಸಾಮಾನ್ಯರ ಕಷ್ಟ-ಸುಖ ಅರ್ಥವಾಗುವುದಿಲ್ಲ. ಎಮ್ಮೆಲ್ಲೆ ಆಗುವ ತೆವಲಿನಿಂದ ಆಗಾಗ ಶೋ ಮಾಡುವ ಆತನ ಬಗ್ಗೆ ಜನರಿಗೆ ಬೇಸರ ಬಂದುಬಿಟ್ಟಿದೆ.

ಇದೆಲ್ಲ ಅರ್ಥವಾಗಿರುವ ಸೈಲ್‌ಗೆ ಕಾಂಗ್ರೆಸ್ ಪಾರ್ಟಿಯಲ್ಲೂ ಕಾಲೆಳೆವವರೇ ಹೆಚ್ಚಾಗಿದ್ದಾರೆ. ಮಾಜಿ ಶಾಸಕ ಉಮೇಶ್ ಭಟ್ಟನೆಂಬ ದಿಲ್ಲಿ ಲೆವಲ್‌ನಲ್ಲಿ ಲೇವಾದೇವಿ ನಡೆಸುವ ಬ್ರೋಕರ್‌ನಂಥವರು ಸೈಲ್‌ಗೆ ತಿರುಗಿ ಬಿದ್ದಿದ್ದಾರೆ. ದೇಶಪಾಂಡೆಗೂ ಸಿಇಸಿ ವರದಿಯಲ್ಲಿ ಸಿಕ್ಕಿಬಿದ್ದಿರುವ ಸೈಲ್‌ಗೆ ಕಾಂಗ್ರೆಸ್ ಟಿಕೆಟ್ ಕೊಡುವುದು ಕಷ್ಟವೆಂಬುದು ಮನವರಿಕೆಯಾಗಿದೆ. ಹೀಗಾಗಿ ಉಮೇಶ್ ಭಟ್ಟ-ದೇಶಪಾಂಡೆಗಳು ಕಾರವಾರ ಮತಕ್ಷೇತ್ರದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ 'ಕೋಮಾರಪಂಥ' ಜಾತಿಯ ಉದಯನಾಯ್ಕನನ್ನು ಕ್ಯಾಂಡಿಡೇಟಾಗಿ ಮಾಡುವ ತಯಾರಿಯಲ್ಲಿದ್ದಾರೆ. ಜಿ.ಪಂ ಉಪಾಧ್ಯಕ್ಷನಾಗಿರುವ ಈ ಉದಯನಾಯ್ಕ ಜನಪರ ಧೋರಣೆಯ ಕ್ರಿಯಾಶೀಲ ತರುಣ. ಈ ಸ್ವಪಕ್ಷದೊಳಗಿನ ರಾಜಕಾರಣ ಮತ್ತು ಹೊರಗೆ ಆಸ್ನೋಟಿಕರ್ ಮಾಡುತ್ತಿರುವ ಮಸಲತ್ತುಗಳಿಂದ ಸೈಲ್ ದಿಕ್ಕೆಟ್ಟು ಹೋಗಿರುವುದಂತೂ ಖರೆ.

ಸೈಲನಿಗೆ ಇದೆಲ್ಲಕ್ಕಿಂತ ದೊಡ್ಡ ಆತಂಕ ತಂದೊಡ್ಡಿರುವುದು ಸಿಇಸಿ ವರದಿ. ಅದಿರು ಕದ್ದು ಹಡಗು ತುಂಬಿ ಆತ ವಿದೇಶಕ್ಕೆ ಕಳಿಸಿರುವುದು ಖಾತ್ರಿಯಾಗಿ


ಬೆದರಿಕೆ ಪತ್ರ

ಹೋಗಿದೆ. ಇದು ಪುಂಡನಾದ ಆಸ್ನೋಟಿಕರ್‌ಗಿಂತ 'ಡಿಫರೆಂಟ್ ಅಂಡ್ ಬೆಟರ್' ಎಂದು ಸಂಭಾವಿತನಂತೆ ಪೋಸು ಕೊಡುತ್ತಿದ್ದ ಸೈಲನ ರಾಜಕೀಯ ಹಾಗೂ ಸಾಮಾಜಿಕ ಬದುಕಿಗೆ ಭರ್ಜರಿ ಡ್ಯಾಮೇಜ್ ಮಾಡುವುದು ನಿಸ್ಸಂಶಯ. ಗುಂಡಿನ ದಾಳಿಯಾದಾಗಲೂ ಆತ "ಇದು ಉದ್ಯಮಪ್ರೇರಿತ ಅಲ್ಲ...... ಹಿಂದೆಂದೂ ನನಗೆ ಹಫ್ತಾ ಬಗ್ಗೆ ನೇರವಾಗಿ ಭೂಗತರಿಂದ ಬೆದರಿಕೆ ಬಂದಿಲ್ಲ...... ಇದು ರಾಜಕೀಯವಾಗಿ ನನ್ನ ಮುಗಿಸಲು ಮಾಡಿರುವ ಸಂಚು......" ಎಂದು ಹಳಹಳಿಸಿದ್ದಾರೆ.

ಸೈಲನ ಔದ್ಯಮಿಕ-ರಾಜಕೀಯ ಅಧಃಪತನ ಆತನನ್ನು ಹುಸಿಗುಂಡಿನ ಪ್ರಹಸನಕ್ಕೆ ಪ್ರೇರೇಪಿಸಿತಾ? ಹಾಗಂತ ಜನ ಚರ್ಚೆ ಮಾಡುತ್ತಿದ್ದಾರೆ.

ಸೈಲನ ಮನೆಗೆ ಬಂದಿದ್ದ 'ಭಯೋತ್ಪಾದಕರು' ಯಾವ ಗಡಿಬಿಡಿಗೆ ಸಿಕ್ಕಿಬೀಳುವ ಆತಂಕದಲ್ಲಿ ಇರಲಿಲ್ಲ, ಆರಾಮಾಗಿ ತಮ್ಮ 'ಕೆಲಸ' ಮುಗಿಸಿಹೋಗಿದ್ದಾರೆ. ತುಂಬ ನಿಧಾನವಾಗಿ ನೆಂಟರು ಬಂದುಹೋಗುವಂತೆ ವರ್ತಿಸಿದ್ದಾರೆ. ಸೈಲನ ಮನೆ ಸಿಸಿ ಕ್ಯಾಮೆರಾ ಕೆಟ್ಟಿರುವುದು, ಸೆಕ್ಯೂರಿಟಿ ಕೈಲಿ ಗನ್ ಇಲ್ಲದಿರುವುದು, ಸೈಲ್ ಮನೆಯಲ್ಲಿ ಇಲ್ಲದೆಂಬುದು ಮತ್ತು ಹುಡುಗ್ಯಾರೂ ಏನೂ ಮಾಡಲಾರರೆಂಬ ಧೈರ್ಯ ಇದ್ದವರೇ ಈ ಕೆಲಸ ಮಾಡಿದ್ದಾರೆ. ಇಷ್ಟು ಆರಾಮಾಗಿ ಪಾತಕ ಕೆಲಸ ನಡೆಸಲು ಸ್ಥಳೀಯರಿಂದ ಮಾತ್ರ ಸಾಧ್ಯ ಅಥವಾ ಆಸ್ನೋಟಿಕರ್ ಇಲ್ಲವೇ ಸೈಲನ ಸಹಕಾರ ಇರುವಂಥವರಿಂದಷ್ಟೇ ಸಾಧ್ಯ. ಇದು ಸಿಂಪಲ್ ಲಾಜಿಕ್.

ಆದರೆ ಈ ಸರಳ ಸತ್ಯ ಮಾತ್ರ ಕಾರವಾರದ ಹೇಡ್ಡಿಂದಿ ಪೊಲೀಸರಿಗೆ ತಿಳಿಯುತ್ತಿಲ್ಲ! ಗುಂಡಿನ ಗಲಾಟೆ ನಡೆದನಂತರ ಪೊಲೀಸರು ಉದಾಸೀನದಿಂದ ವರ್ತಿಸಿದ್ದಾರೆ. ಆಗಂತುಕರು ಗುಂಡು ಹಾರಿಸಿ ಕಾರವಾರದತ್ತ ಹೋಗಿದ್ದಾರೆಂದು ತಕ್ಷಣ ತಿಳಿದರೂ ಈ ಜಿಲ್ಲಾ ಎಸ್ಪಿ ಬಾಲಕೃಷ್ಣ ಗೌಡರು ಕನಿಷ್ಠ ನಾಕಾಬಂಧಿಗೂ ಮನಸ್ಸು ಮಾಡಲಿಲ್ಲ. ನಾಕಾಬಂಧಿ ಮಾಡಿದ್ದರೆ ಗುಂಡಾಟದ ಪುಂಡರು ಖಂಡಿತ ಸಿಕ್ಕಿಬೀಳುತ್ತಿದ್ದರು. ಆಗ ಭಯೋತ್ಪಾದಕ ಪಾತಕಿಗಳು ಭೂಗತ ದೊರೆ ಬನ್ನಂಜೆ ರಾಜನ ಬಂಟರೋ? ಸೈಲನ ಸಹಚರರೋ? ಆಸ್ನೋಟಿಕರ್‌ನ ಅನುಯಾಯಿಗಳೋ? ಎಂಬುದು ಗೊತ್ತಾಗುತ್ತಿತ್ತು.

ಇದು ಕಾರವಾರದ ಪೊಲೀಸರಿಗೆ ಬೇಕಾಗಿಲ್ಲ, ಪೊಲೀಸ್ ಅಧಿಕಾರಿಗಳ ಜೊತೆ ನಂಟಿರುವ ಮಂತ್ರಿ ಆಸ್ನೋಟಿಕರ್- ಸತೀಶ್ ಸೈಲ್‌ಗೂ ಬೇಕಾಗಿಲ್ಲ, ಸದ್ಯಕ್ಕಂತೂ ಈ ಗುಂಡು ಹಾರಾಟ ಅಸಂಗತ ನಗೆನಾಟಕದಂತೆ ಕಾಣಿಸುತ್ತಿದೆ. ಉತ್ತರಕನ್ನಡದ ಎಸ್ಪಿ ಮತ್ತು ಜಿಲ್ಲಾಡಳಿತ ಹೀಗೇ ನಿದ್ದೆ ಮಾಡುತ್ತಿದ್ದರೆ ನಗೆನಾಟಕ ರಕ್ತದೋಕುಳಿಯ ಭೀಭತ್ಸ ದುರಂತ ಡ್ರಾಮಾ ಆಗುವುದರ ಬಗ್ಗೆ ಅನುಮಾನವಿಲ್ಲ.

❖

# ಭೂಸುರೋತ್ತಮರಾದ ತ್ರಿಮತಸ್ಥರು ಒಂದಾದರಂತಲ್ಲಾ!

ತ್ರಿಮತಸ್ಥ ಸ್ವಾಮಿಗಳೆಲ್ಲಾ ಒಟ್ಟಾಗಿ ಸೇರಿ, ತಮ್ಮ ಭೇದಾಚರಣೆಗಳನ್ನು ...ದಿಗಿಟ್ಟು, ರಕ್ತ ಸಂಬಂಧಗಳನ್ನ ನಡೆಸಿ, ಮಿಶ್ರತಳಿ ತಯಾರಿಸುವ ಕ್ರಾಂತಿಕಾರಿ ...ರ್ಮಾನ ತೆಗೆದುಕೊಂಡ ಸುದ್ದಿ ವಿಪ್ರಲೋಕದಲ್ಲಿ ವಿಪ್ಲವವನ್ನೆ ಉಂಟು ...ಮಾಡಿದೆಯಂತಲ್ಲಾ! ಈ ಬಗ್ಗೆ ತ್ರಿಮತಸ್ಥ ಮುಖಂಡರೂ, ಬಿ.ಜೆ.ಪಿ. ...ರ್ಯಕರ್ತರೂ, ಭಜರಂಗಿ ಬೆಂಬಲಿಗರೂ ಆದ ಪೇಜಾವರ ಶ್ರೀಗಳನ್ನ ...ಮಾತನಾಡಿಸಿದರೆ ಹೇಗೆ ಅನ್ನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಿದರೆ ...ಗಾಯ್ತು,

ರಿಂಗ್‌ಟೋನ್: ....... "ಪಿಳ್ಳಂಗೋವಿಯ ಚೆಲ್ವ ಕೃಷ್ಣನ ಎಲ್ಲಿ ನೋಡಿದಿರಿ ...ನ್ನಿರಿ........."

"ಹಲೋ ಯಾರು?"

"ನಮಸ್ತೆ ಸ್ವಾಮೀಜಿ ನಾನು, ಪತ್ರಕರ್ತ ಯಾಹೂ. ತಮಗೆ ಹೃತ್ಪೂರ್ವಕ ...ಭಿನಂದನೆ ಸ್ವಾಮಿ."

"ಅಭಿನಂದನೆ ಯಂತಕ್ಕೆ?"

"ಇಷ್ಟು ಶತಮಾನಗಳ ನಂತರ ತ್ರಿಮತಸ್ಥ ಬ್ರಾಹ್ಮಣರಲ್ಲಿ ಹೆಣ್ಣು ...ಡು ಕೊಳ್ಳುವಿಕೆಯ ಸಂಬಂಧ ಮಾಡಬಹುದು ಅಂತ ...ಳಿದಿರಂತೆ. ಅದಕ್ಕೆ ಸ್ವಾಮಿ."

"ಹೌದು ಇದು ಎಂದೋ ಆಗಬೇಕಾಗಿದ್ದ ಕಾರ್ಯ. ...ಗಲಾದರೂ ಆಯ್ತಲ್ಲಾ."

"ತುಂಬ ಕ್ರಾಂತಿಕಾರಿ ತೀರ್ಮಾನ ಸ್ವಾಮೀಜಿ. ಇಲ್ಲೇ ...ಮ್ಮ ಮನೆ ಹತ್ರ ದಾಸಾಚಾರಿ ಮಗಳು ಗೋದಾವರಿನ ...ಸುಗ್ರೀವಾಚಾರಿ ಮಗ ಲಂಬೋದರ ಲವ್ ಮಾಡಿದ್ದ ...ಮಿ. ಮತಭೇದದ ಕಾರಣಕ್ಕೆ ಅವರು ಹಾಗೇ ...ಳುದು ಬಿಟ್ಟು ಆಗ್ಲೆ ನೆರೆಕೂದ್ಲು ಬಂದಿದ್ದೊ. ...ಮ್ಮ ತೀರ್ಮಾನದಿಂದ ಆ ಮದುವೆ ...ಬಹುದು."

"ನಡೆಯುತ್ತೆ ಬಿಡಿ. ತ್ರಿಮತಸ್ಥರು ಮುಕ್ತ ...ನಸ್ಸಿನಿಂದ ಒಪ್ಪಿಕೊಂಡಿದ್ದಾರೆ."

"ತಾವು ಅಂತರಜಾತಿ ವಿವಾಹವನ್ನ ...ಪ್ಪಲ್ಲವಂತಲ್ಲಾ?"

"ಹೌದು. ಮಾಂಸಾಹಾರದ ಜಾತಿ ಹುಡುಗ, ...ಸ್ಯಾಹಾರದ ಜಾತಿ ಹುಡುಗಿಯನ್ನ ...ದುವೆಯಾದ್ರೆ, ಜಾತಿಜಗಳ ...ಗುವುದುಂಟು. ಆ ಜಗಳ ತಪ್ಪಬೇಕಾದರೆ ...ತರ್ಜಾತಿ ಮದುವೆ ತಪ್ಪಿಸಬೇಕು."

"ಅಂತರ್ಜಾತಿ ವಿವಾಹಿತರ ನಡುವೆ ...ಹಾರ ಎಂದೂ ಸಮಸ್ಯೆಯಾಗಲ್ಲ ಸ್ವಾಮಿ. ...ಕೆಗೆ ಅವರು ಹೊಂದಿಕಳದೋ, ಇಲ್ಲ ...ಕೆ ಹೊಂದಿಕಳದೋ ನಡೆದಿದೆ. ಮೂರು ಜಾತಿ ...ಬ್ರಾಹ್ಮಣರು ಒಂದಾಗಿ ಮದುವೆ ಸಂಬಂಧ ನಡಸೋದು ...ವಾದ ಅಂತರ್ಜಾತಿ ವಿವಾಹ ಆಗಲ್ವಾ?"

"ಹಾಗಲ್ಲ, ತ್ರಿಮತಸ್ಥರ ಆಚರಣೆಗಳು ಬೇರೆ ...ರಬಹುದು, ಆದರೆ ಅವರೆಲ್ಲ ಒಂದೇ ಮೂಲದವರು."

"ಮೂಲ ಒಂದೇ ನಾಮ ಬೇರೆ ಅನ್ನಿ."

"ಹಾಗೂ ಹೇಳಬಹುದು."

"ತ್ರಿಮತಸ್ಥರ ಊಟದಲ್ಲಿ ವ್ಯತ್ಯಾಸ ಇರಲ್ವ? ಕೆಲವರು ...ಕೆ ಪಾಯಸ ಮಾಡ್ತರೆ, ಕೆಲವರು ರವೇ ಪಾಯಸ ಮಾಡ್ತರೆ, ...ಳಿ, ಪಕೋಡ, ಬಜ್ಜಿ, ಬೊಂಡ, ಉದ್ದಿನ ವಡೆ ಇಂತ ...ಖ್ಯಾಹಾರದ ಭಿನ್ನ ರುಚಿ ಜಗಳ ಆಗಲ್ವಾ ...ದೊಂಬಹುದಲ್ಲ?"

"ಇದು ಪದಾರ್ಥ ರುಚಿಯಾಗಿದ್ದರೆ ಹೊಂದಿಕೊಳ್ಳಬಹುದು."

"ಹಾಗೇನೆ ಅಂತರ್ಜಾತಿ ವಿವಾಹದಲ್ಲಿ ಚಾಪ್ಸು, ಕಬಾಬು, ಬೋಟಿಪಲ್ಯ ಹುರಿದ ರಕ್ತ ಕರಿದ ಬಾಡು, ಬಿರಿಯಾನಿ...ಇಂತ ರುಚಿಗಳಿಂದ, ವಾಸನೆಗಳಿಂದ ಸಾಮರಸ್ಯ ವಿರ್ಪಡಬಹುದು ಸ್ವಾಮಿ. ಅದರಲ್ಲೂ ಕಿಡ್ನಿ, ಲಿವರ್, ಬೀಜದಿಂದ ಮಾಡಿದ ಗೊಜ್ಜಿನ ವಾಸನೆ ಎಂತಹ ಸಸ್ಯಾಹಾರಿಯ ಮೂಗನ್ನೂ ಅರಳಿಸಿಬಿಡುತ್ತೆ ಸ್ವಾಮಿ."

"ಅದಕ್ಕೆ ನಾವು ಮಾಂಸ ತಿನ್ನುವವರ ಜೊತೆ ಕುಳಿತು ಊಟ ಮಾಡುವುದಿಲ್ಲ ಅಂತ ಹೇಳಿದ್ದು."

"ಸ್ವಾಮೀಜಿ, ನಿಮ್ಮನ್ನ ಸಹಪಂಕ್ತಿ ಭೋಜನಕ್ಕೆ ಕರೆದ ಪ್ರಗತಿಪರರಲ್ಲಿ ಸುಮಾರು ಜನ ಮಾಂಸಾಹಾರ ಮದ್ಯ ಸೇವಿಸೋರಲ್ಲ."

"ಮಾಂಸ ಭಕ್ಷಣೆಯವರ ಜೊತೆ ಕುಳಿತು ನಾನು ಭೋಜನ ಸ್ವೀಕರಿಸುವುದಿಲ್ಲ ಅಂತ ಹೇಳಿಯಾಯ್ತಲ್ಲ."

ಥೂತ್ತೇರಿ

ಯಾಹೂ

"ಇಂತ ಬೂಟಾಟಿಕೆ ಮಾತು ಬಿಟ್ಟು ನೇರವಾಗಿ ಮಾತನಾಡಿ ಸ್ವಾಮೀಜಿ. ಒಟ್ಟಿನಲ್ಲಿ ನೀವು ಶೂದ್ರರ ಜೊತೆ ಕುಳಿತು ಊಟ ಮಾಡಲ್ಲ. ಮಾಂಸ ಮದ್ಯ ಅನ್ನೋದು ಒಂದು ನೆಪ ಅಲ್ಲವಾ."



"ನೆಪ ಅಲ್ಲ. ಮದ್ಯ ಮಾಂಸದವರ ಜೊತೆ ನಮ್ಮವರು ಕುಳಿತು ಊಟ ಮಾಡುವುದನ್ನು ನಾನು ಸುತರಾಂ ಒಪ್ಪುವುದಿಲ್ಲ. ಏಕೆಂದರೆ ನಮ್ಮವರು ಕ್ರಮೇಣ ಅವರಂತೆಯೇ ಆಗಿಬಿಡುತ್ತಾರೆ."

"ಸ್ವಾಮೀಜಿ, ನೀವು ತುಂಬಾ ಹಿಂದಿದ್ದೀರಿ. ನಿಮ್ಮವರು ಎಷ್ಟು ಮುಂದುವರಿದವ್ರುರೆ ಅಂದ್ರೆ, ಒಳ್ಳೆ ಮಾಂಸದ ಹೋಟೆಲು ಎಲ್ಲಿದೆ ಅಂತ ನಾವು ಅವರನ್ನ ಕೇಳಬೇಕಾಗಿದೆ. ಗೋ ಮಾಂಸದ ಹೋಟೆಲಿನಲ್ಲೂ ನಾನು ನಿಮ್ಮವರನ್ನ ನೋಡಿದ್ದಿನಿ. ನೀವು ನನ್ನ ಜೊತೆ ಮುದುಕಿ ವೇಷದಲ್ಲಿ ಬಂದ್ರೆ ನಾನೇ ತೋರುಸ್ತಿನಿ. ಅದಕಿಂತ್ಲೂ ನಮ್ಮವರ ಜೊತೆ ನಿಮ್ಮವರು ಬಾರು ರೆಸ್ಟೋರೆಂಟಲ್ಲಿ ಕುಳಿತಿದ್ದು ಉಡುಪಿಗೆ ಬಂದಾಗ ಮಠದಲ್ಲೂ ವಿಪ್ರ ಶ್ರೇಷ್ಠರ ಜೊತೆ ಕುಳಿತು ಊಟಮಾಡಿ ಬರ್ತಾರೆ. ಅವ್ರುರೆಲ್ಲಾ ನಿಮ್ಮ ನಾಟಕ ನೋಡಿ ನಗ್ತರೆ ಗೊತ್ತ."

"ಹಾಗಾದರೆ ನಾನು ನಾಟಕ ಆಡುತ್ತಿರುವುದಾ? ಯಂತ ಹೇಳುವುದು ನೀವು?"

"ಅಲ್ಲಾ ಸ್ವಾಮಿ ಅಂತರ್ಜಾತಿ ವಿವಾಹ ಒಪ್ಪದ ನೀವು ತ್ರಿಮತಸ್ಥರ ನಡುವೆ ಮದುವೆ ನಡೀಲಿ ಅಂತಿರಿ. ನಿಮ್ಮವರು ನಮ್ಮ ಜೊತೆ ಮಾಂಸ ಮದ್ಯ ತಿಂತಾ ಆರಾಮಾಗಿರುವಾಗ, ನೀವು ನಮ್ಮ ಜೊತೆ ಕೂರಲ್ಲ ಅಂತಿರಿ. ತ್ರಿಮತಸ್ಥರ ನಡುವೆ ನಾವೆಲ್ಲಾ ಒಟ್ಟಾಗಬೇಕು ಅಂತಿರಿ. ಹೊರಗಡೆ ಬಂದು ಹಿಂದೂಗಳೆಲ್ಲಾ ಒಟ್ಟಾಗಬೇಕು ಅಂತಿರಿ. ನಿಮ್ಮ ಬೌದ್ಧಿಕ ದಿವಾಳಿತನ ನೆನೆಸಿಕೊಂಡ್ರೆ ಕನಿಕರವಾಗುತ್ತೆ ಸ್ವಾಮಿ."

"ಕನಿಕರ ಪಡುವಂಥದ್ದು ನಾನೇನು ಮಾಡಿದ್ದೇನೆ?"

"ಆ ಹುಟ್ಟು ಭ್ರಷ್ಟ ಎಡೂರಪ್ಪನ್ನ ಸಿ.ಬಿ.ಐ. ತನಿಖೆ ಆರಂಭಿಸಿದ್ರೆ ಸಿ.ಬಿ.ಐ.ನೇ ಟೀಕೆ ಮಾಡ್ತಿರಿ. ಆ ಎಡೂರಪ್ಪ ಮೂರು ವರ್ಷದಲ್ಲಿ ಸಂಪಾದಿಸಿರೊ ಆಸ್ತಿನ ಲೆಕ್ಕ ಹಾಕಿದ್ರೆ ಮೂರು ಸಾವಿರ ಕೋಟಿ ಆಗುತ್ತೆ, ಅದರಲ್ಲಿ ನಿಮಗೆಷ್ಟು ಕೊಟ್ಟರು ಹೇಳಿ?"

"ನೀವು ಹಾಗೆ ಮಾತನಾಡುವುದು ಬೇಡ. ನಾನು ಲಂಚಕೋರನಾ?"

"ಅವನಿಗಿಂತ್ಲೂ ಕಡೆ ನೀವು. ಹೊಟ್ಟೆಗೆ ಅನ್ನ ತಿನ್ನೋ ನರಮನುಷ್ಯರಾರು ಈ ಸಂದರ್ಭದಲ್ಲಿ ಸಿ.ಬಿ.ಐ.ನ ಟೀಕೆ ಮಾಡಿ ಎಡೂರಪ್ಪನ ಪರ ವಹಿಸಲ್ಲ ಗೊತ್ತಾ, ತಪ್ಪು ಮಾಡಿದ್ರೆ ಶಿಕ್ಷೆಯಾಗ್ಲಿ ಅಂತಾರೆ."

"ನಾನು ಕೂಡ ಹಾಗೆ ಹೇಳಿದ್ದು."

"ಮಾತಿನ ಕೂದ್ಲು ಸೀಳೊದ್ರಲ್ಲಿ ತಾವು ನಿಸ್ಸೀಮರು ಸ್ವಾಮಿ. ಆದ್ರು ನಮ್ಮ ನಡುವೆ ನಿಂದನೆಗೆ ಯೋಗ್ಯವಾದ ಸಮಾಜವೊಂದಿದೆ. ಅದು ನಾವೇ ಅಂತ ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಿರಿ. ಥ್ಯಾಂಕ್ಸ್."

"ಒಪ್ಪಿಕೊಂಡಿದ್ದಲ್ಲ. ವಸ್ತುಸ್ಥಿತಿಯನ್ನು ಹೇಳಿದ್ದು. ನಮ್ಮನ್ನ ಸಮಾಜ ನಿಂದಿಸುತ್ತಿರುವಾಗ ನಾವು ತ್ರಿಮತಸ್ಥರು ಒಗ್ಗಟ್ಟಾಗಿ ಎದುರಿಸಬೇಕು ಅಂತ ಹೇಳಿದ್ದು."

"ನೀವು ಯಾಕೆ ಒಗ್ಗಟ್ಟಾಗಬೇಕು ಸ್ವಾಮಿ?"

"ಹಿಂದೂ ಧರ್ಮ ರಕ್ಷಿಸಲಿಕ್ಕೆ."

"ಹಿಂದೂ ಧರ್ಮದ ರಕ್ಷಣೆ ಗುತ್ತಿಗೆ ಹಿಡಿದಿದ್ದೀರಾ. ಅಲ್ಲ ಸ್ವಾಮೀ, ಲಿಂಗಾಯತರ ರಕ್ಷಣೆಗೆ ನೂರಾರು ಜಗದ್ಗುರುಗಳಿವೆ. ಒಕ್ಕಲಿಗರ ಕಾಪಾಡಕ್ಕೆ ಒಬ್ಬ ಬಾಲಗಂಗಾಧರ ಸಾಕು. ಕುರುಬರನ್ನ ಕಾಯಕ್ಕೆ ಅರ್ದ ಡಜನ್ ಸ್ವಾಮಿ ರಡಿಯಾಗ್ಯವ್ರುರೆ. ದಲಿತರ ತಲೆ ಕಾಯೊದಕ್ಕೆ ಅಂಬೇಡ್ಕರ್ ಇದಾರೆ. ಸಾಬರ ಕಾಯಕ್ಕೆ ಮುಲ್ಲಾಗಳವ್ರುರೆ. ಕ್ರಿಶ್ಚಿಯನ್ನರಿಗೆ ಫಾದರ್‌ಗಳಿದ್ದಾರೆ. ಎಲ್ಲಾ ಜನಾಂಗವೂ ತಮ್ಮ ತಮ್ಮ ರಕ್ಷಣೆಗೆ ತಯಾರಾಗ್ತಾ ಅವೆ. ಯಾಕೆ ಅಂದ್ರೆ ಎಲ್ಲಾ ಜನಾಂಗಕ್ಕೂ ರಕ್ಷಣೆ ಕೊಡೊ ನಾಯಕನಾಗ್ಲಿ, ಜಗದ್ಗುರುವಾಗ್ಲಿ ನಮ್ಮಲ್ಲಿ ಈಗಿಲ್ಲ, ಆದ್ರಿಂದ ತಾವು ಸುಳ್ಳು ಜವಾಬ್ದಾರಿಗಳನ್ನ ಹೇಳಿಕೊಂಡು ಜನಗಳನ್ನ ದಾರಿ ತಪ್ಪಿಸಬೇಡಿ. ಈಗ ನಿಮ್ಮ ಮುಂದಿರೊ ಕೆಲಸ ಏನು ಅಂದ್ರೆ, ತ್ರಿವೇಣಿ ಸಂಗಮದಂತೆ ಒಟ್ಟಾಗ್ತಾಯಿರೊ ತ್ರಿಮತಸ್ಥರ ಜಗಳ ಬಗೆಹರಿಸಿಗೊಂಡು, ತ್ರಿಲೋಕ ಸಂಚಾರಿಯಾಗಿ ತ್ರಿವೇಣಿ ಸಂಗಮದಿಂದ ಉದ್ಭವಿಸೊ ವಿಶಿಷ್ಟ ತಳಿಗಳಿಗೆ ಹೊಸ ಮಾರ್ಗ ತೋರ್‍ತ ಕಾಲಹಾಕೋದು ಅಷ್ಟೆ."

"ನೀವು ನನ್ನ ಜವಾಬ್ದಾರಿಯನ್ನ ಕಟಕಿ ಆಡುವುದು ಬೇಡ."

"ಕಟಕಿ ಅಲ್ಲ ಸ್ವಾಮಿ, ಬ್ರಾಹ್ಮಣ ಅಪರೂಪದ ತಳಿ, ಆ ತಳಿ ಕಲಬೆರಕೆ ಆಗದಂಗೆ ಕಾಪಾಡಬೇಕು ಅಂತ ನಿಮ್ಮ ರಾಘವೇಶ್ವರ ಸ್ವಾಮೀನೆ ಹೇಳಿದಾರೆ. ಇಂತ ಜವಾಬ್ದಾರಿ ಯಾರು ಹೊರಬೇಕು ಹೇಳಿ? ಅಂತರ್ಜಾತಿ ವಿವಾಹ ವಿರೋಧಿಸೊ, ಅನ್ಯಧರ್ಮದ ಅನ್ನ ಸಂಸ್ಕೃತಿ ವಿರೋಧಿಸೊ ನೀವೇ ತಾನೇ?"

"ನಾನು ಎಲ್ಲಾ ಧರ್ಮೀಯರನ್ನ ಪ್ರೀತಿಸ್ತೇನೆ. ಎಲ್ಲರೂ ಅವರವರ ಜವಾಬ್ದಾರಿಯಿಂದ ಸಂಘಟಿತರಾಗಿ ಸಮಾಜದ ಸಾಮರಸ್ಯ ಕಾಪಾಡಬೇಕು."

"ಸಮಾಜ ಸಾಮರಸ್ಯದಿಂದ್ಲೆ ಇದೆ ಸ್ವಾಮಿ. ಆದ್ರೆ ತಾವು ಬಾಯಿಬಟ್ರೆ ಮುಲ್ಲಾಗಳು ಎದ್ದುನಿಂತಗೊತ್ತರೆ, ಕ್ರಿಶ್ಚಿಯನ್ರು ಅಳುಕ್ತರೆ. ಚಡ್ಡಿಗಳಿಗೆ ತೋಳು ತಿಮಿರಾಯ್ತದಲ್ಲಾ ಇದೆಲ್ಲಾ ನಿಲ್ಲಬೇಕಾದ್ರೆ ತಾವು ಒಂದು ಕೆಲಸ ಮಾಡಬೇಕಲ್ಲಾ ಸ್ವಾಮೀಜಿ."

"ಅದೇನು ಹೇಳಿ ಮಾಡುವ."

"ಪಾಜಕಕ್ಕೆ ಹೋಗಿ ಧರ್ಮ ಅಂದ್ರೇನು ಅಂತ ಅಧ್ಯಯನ ಮಾಡಬೇಕಲ್ಲ ಸ್ವಾಮೀಜಿ."

"ಅಧ್ಯಯನದ ಅಗತ್ಯವಿಲ್ಲ, ನಾನು ದಿನನಿತ್ಯ ಪಾಲಿಸುತ್ತಿರುವುದೇ ಧರ್ಮ."

"ಬ್ರಾಹ್ಮಣ ಧರ್ಮ ಅನ್ನಿ."

"ಹೌದು."

"ಥೂತ್ತೇರಿ!!!"

❖

ಗೃಹಮಂತ್ರಿ ಸೆಲಗಳ್, ಮುಖ್ಯಮಂತ್ರಿ ಸಂಬಳಿಗಳ್- ಇಷ್ಟು ಸರ್ಕಾರದ ಬಗ್ಗೆ ಹೇಳಬೇಕೆಂದರೆ ಅದು ಗಣಿ ಮಾಫಿಯಾ ಮತ್ತು ರಿಯಲ್ ಎಸ್ಟೇಟ್ ಮಾಫಿಯಾಗಳ ರಣಾಮಿತ್ರನಾ. ಇಂಥವರ ಸರ್ಕಾರದಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆಗೆ ಶಿಕ್ಷೆಯಲ್ಲದೆ ಇನ್ನೆಂಥ ಬಹುಮಾನ ಸಾಧ್ಯ?


ಕರ್ತವ್ಯನಿಷ್ಠ ಕೆಎಎಸ್ ಅಧಿಕಾರಿ ಮಹಾಂತೇಶ್ ಹತ್ಯೆ ಕುರಿತಂತೆ ದಿನಕ್ಕೊಂದು ಕತೆ ಹೊಡೆಯುವ ಪೊಲೀಸರು, ಮೊಸಳೆ ಕಣ್ಣೀರಿಡುವ ಸದಾನಂದ ಗೌಡರು, ಪ್ರತಿನಿತ್ಯದ ಯಥಾವತ್ ಕೊಲೆ, ಗ್ಯಾಂಗ್‌ವಾರ್‌ಗೂ ಇದಕ್ಕೂ ವ್ಯತ್ಯಾಸವನ್ನೇ ಕಾಣದ ಗೃಹಮಂತ್ರಿ ಅಶೋಕ್ ಆಲಸ್ಯ ಮತ್ತು ಬೆಂಗಳೂರು ಸುತ್ತಮುತ್ತಲ ರಿಯಲ್ ಎಸ್ಟೇಟ್ ಖದೀಮರ ಅಟ್ಟಹಾಸವನ್ನು ಯಾರಿಗಾದರೂ ಇಂಥದೊಂದು ಪ್ರಶ್ನೆ ಕಾಡಲೇಬೇಕು.

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕ ಮಹಾಂತೇಶ್ ಕೊಲೆಯಾಗಿ ಇನ್ನೇನು ವಾರ ಸಮೀಪಿಸುತ್ತಿದೆ. ನಿಷ್ಠಾವಂತ ಅರಣ್ಯಾಧಿಕಾರಿ ಮದನ್ ನಾಯ್ಕ್ ಹತ್ಯೆಯ ಬೆನ್ನಲ್ಲೇ ಕೊಲೆಯಾದ ಮತ್ತೊಬ್ಬ ಪ್ರಾಮಾಣಿಕ ಅಧಿಕಾರಿ ಮಹಾಂತೇಶ್‌ರ ಅಂತಿಮ ದರ್ಶನಕ್ಕೆಂದು ಹೋದ ಮುಖ್ಯಮಂತ್ರಿ ಮತ್ತು ಕಾನೂನು ಸಚಿವರಿಗೆ ನೆರೆದ ಜನರೇ ಧಿಕ್ಕಾರ ಕೂಗಿದ್ದಾರೆ. ಹಂತಕರ ಸುಳಿವು ಸಿಕ್ಕಿದೆ ಇನ್ನೇನು ಹಿಡಿದೇ ಬಿಡ್ತೀವಿ ಎಂದು ಮುಖ್ಯಮಂತ್ರಿ ಆತುರಗೆಟ್ಟು ಹೇಳಿಕೆ ಕೊಟ್ಟರೆ ಗೃಹಮಂತ್ರಿ ಅಶೋಕ್ ಅಂಥಾದ್ದೇನೂ ನಡೆದೇ ಇಲ್ಲ ಎಂಬಂತೆ ನಿರ್ಲಕ್ಷ್ಯದ 'ಡ್ರಾಮಾ' ನಟಿಸುತ್ತಿದ್ದಾರೆ. ಬಹುಶಃ ರಾಷ್ಟ್ರಮಟ್ಟದ ಸುದ್ದಿವಾಹಿನಿಗಳೇನಾದರೂ ಈ ಬಗ್ಗೆ ತಲೆ ಕೆಡಿಸಿಕೊಳ್ಳದೇ ಹೋಗಿದ್ದರೆ ಕರ್ನಾಟಕ ಸರ್ಕಾರ ಈ ಹೊತ್ತಿಗಾಗಲೇ ಮಹಾಂತೇಶ್ ಹತ್ಯೆಯನ್ನು ಮರೆತೇಬಿಡುತ್ತಿತ್ತು?

ಮಹಾಂತೇಶ್ ಹತ್ಯೆ ನಡೆದ ರೀತಿ ಅದಕ್ಕೆ ಪೊಲೀಸರು ಕೊಡುತ್ತಿರುವ ದಿನಕ್ಕೊಂದು ಹೇಳಿಕೆ ಮತ್ತು ಸಹಕಾರ ಸಂಘಗಳ ಲೆಕ್ಕಪರಿಶೋಧನೆಯೆಂಬ ನಿಗೂಢ ಹುತ್ತದ ಭೀಕರತೆಯನ್ನು ಲೆಕ್ಕಹಾಕುವ ಯಾರಿಗಾದರೂ ಹತ್ಯೆಯ ಹಿಂದಿನ ಉದ್ದೇಶದ ವಾಸನೆ ಹತ್ತಲೇಬೇಕು. ದುರಂತವೆಂದರೆ ಗೃಹಮಂತ್ರಿ ಆದಿಯಾಗಿ ಸಣ್ಣಪುಟ್ಟ ಪೊಲೀಸ್ ಅಧಿಕಾರಿಗಳು ಕೂಡ ಕೊಲೆಗೂ ಅವರ ಕರ್ತವ್ಯನಿಷ್ಠೆಗೂ ಸಂಬಂಧವೇ ಇಲ್ಲ ಎಂದು ಪದೇಪದೇ ಹೇಳುವುದೇಕೆ? ಕೊಲೆಗೆ ಕಾರಣವೇ ಗೊತ್ತಾಗಿಲ್ಲ ಎಂದಮೇಲೆ ಏಕೆ ಈ ರೀತಿ ದಿಕ್ಕುತಪ್ಪಿಸಲು ಯತ್ನಿಸುತ್ತಿದ್ದಾರೆ?

• ರಾ. ಸೋಮನಾಥ್


# ಮಹಾಂತೇಶ್ ಹತ್ಯೆ ಸರ್ಕಾರವೇ ಸುಳ್ಳುಗಾರ


ಮಹಾಂತೇಶ್


ಮಹಾಂತೇಶ್ ಅಂತಿಮ ಯಾತ್ರೆ

ವಿಟ್ರಿಯಾ ಎದುರು

ಮಹಾಂತೇಶ್ ಹತ್ಯೆ ನಡೆದ ರೀತಿ ಅದಕ್ಕೆ ಪೊಲೀಸರು ಕೊಡುತ್ತಿರುವ ದಿನಕ್ಕೊಂದು ಹೇಳಿಕೆ ಮತ್ತು ಸಹಕಾರ ಸಂಘಗಳ ಲೆಕ್ಕಪರಿಶೋಧನೆಯೆಂಬ ನಿಗೂಢ ಹುತ್ತದ ಭೀಕರತೆಯನ್ನು ಲೆಕ್ಕಹಾಕುವ ಯಾರಿಗಾದರೂ ಹತ್ಯೆಯ ಹಿಂದಿನ ಉದ್ದೇಶದ ವಾಸನೆ ಹತ್ತಲೇಬೇಕು. ದುರಂತವೆಂದರೆ ಗೃಹಮಂತ್ರಿ ಆದಿಯಾಗಿ ಸಣ್ಣಪುಟ್ಟ ಪೊಲೀಸ್ ಅಧಿಕಾರಿಗಳು ಕೂಡ ಕೊಲೆಗೂ ಅವರ ಕರ್ತವ್ಯನಿಷ್ಠೆಗೂ ಸಂಬಂಧವೇ ಇಲ್ಲ ಎಂದು ಪದೇಪದೇ ಹೇಳುವುದೇಕೆ? ಕೊಲೆಗೆ ಕಾರಣವೇ ಗೊತ್ತಾಗಿಲ್ಲ ಎಂದ ಮೇಲೆ ಏಕೆ ಈ ರೀತಿ ದಿಕ್ಕುತಪ್ಪಿಸಲು ಯತ್ನಿಸುತ್ತಿದ್ದಾರೆ?



ಮಹಾಂತೇಶ್ ಕೊಲೆಯಾಗಿದ್ದು ಮೇ 19 ರ ರಾತ್ರಿ 10.30 ಕ್ಕೆ, ಅದೂ ಪ್ರತಿಷ್ಠಿತ, ಸದಾಕಾಲಕ್ಕೂ ಪೊಲೀಸ್ ಪಹರೆಯಿರುವ, ವಿಧಾನಸೌಧದ ಮಗ್ಗುಲಲ್ಲೇ ಇರುವ ಪ್ಯಾಲೇಸ್ ರಸ್ತೆಯಲ್ಲಿ ಕುಖ್ಯಾತ ವಿಟ್ರಿಯಾ ಹೋಟೆಲ್ ಎದುರಿಗೇ ರಕ್ತ ಸುರಿಸುತ್ತಾ ಪ್ರಜ್ಞೆ ತಪ್ಪಿಬಿದ್ದಿದ್ದ ಮಹಾಂತೇಶ್‌ರನ್ನು ಅನಾಮಿಕ ದಾರಿಹೋಕನೊಬ್ಬ ಹೊತ್ತೊಯ್ದು ಮಲ್ಲಿಗೆ ನರ್ಸಿಂಗ್ ಹೋಮ್‌ಗೆ ಸೇರಿಸಿದ್ದ. ಬಹುಶಃ ಆ ಹೊತ್ತಿಗಾಗಲೇ ಮಹಾಂತೇಶ್ ಮೇಲೆ ಹಲ್ಲೆ ನಡೆದು ಮುಕ್ಕಾಲು ಗಂಟೆಯಾಗಿತ್ತು, ಮಹಾಂತೇಶ್‌ರ ಮಾರುತಿ ಕಾರಿನ ಮುಂಭಾಗ ಜಖಂಗೊಂಡಿತ್ತು, ಅವರ ತಲೆ, ಎದೆ, ಪಕ್ಕೆ, ಹೊಟ್ಟೆ ಎಲ್ಲಾ ಭಾಗಕ್ಕೂ ಪೆಟ್ಟು ಬಿದ್ದಿತ್ತು, ತಲೆಗೆ ಬಿದ್ದ ಪೆಟ್ಟು ಅದೆಷ್ಟು ಬಲವಾಗಿತ್ತೆಂದರೆ ಮೆದುಳು ಜಜ್ಜಿ ಹೋಗಿ ಅದರಿಂದಾಗಿಯೇ ಮಹಾಂತೇಶ್ ಸಾವು ಸಂಭವಿಸಿತ್ತು.

ಮಹಾಂತೇಶ್ ಕೆಲಸ ಮಾಡುತ್ತಿದ್ದದ್ದು ವಿಕಾಸಸೌಧ ಪಕ್ಕದ ಎಂಎಸ್ ಬಿಲ್ಡಿಂಗಿನ ನಾಲ್ಕನೆ ಮಹಡಿಯ ಸಹಕಾರಿ ಇಲಾಖೆಯ ಕಚೇರಿಯಲ್ಲಿ, ಸಹಕಾರ ಸಂಘಗಳ ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟಂತೆ ಅವರು ಬೆಂಗಳೂರು ನಗರ ಜಿಲ್ಲೆಯ ಉಪನಿರ್ದೇಶಕರಾಗಿದ್ದರು. ತಮ್ಮ ಸರ್ವೀಸಿನುದ್ದಕ್ಕೂ ಸಣ್ಣದೊಂದು ತಪ್ಪನ್ನೂ ಎಸಗಿದವರಲ್ಲ, ಯಾವುದೇ ಯಡವಟ್ಟು ಮಾಡಿಕೊಂಡವರಲ್ಲ, ಕರ್ತವ್ಯನಿಷ್ಠೆಯಲ್ಲಿ ಪಕ್ಕಾ ನಿಷ್ಠೂರಿ ಮತ್ತು ಪ್ರಾಮಾಣಿಕ. ಇದೇ ಪ್ರಾಮಾಣಿಕತೆ ಮುಂದೊಮ್ಮೆ ತಮ್ಮ ಪ್ರಾಣಕ್ಕೆ ಕುತ್ತಾಗುತ್ತದೆಯೆಂದು ಬಹುಶಃ ಮಹಾಂತೇಶ್ ಲೆಕ್ಕ ಹಾಕಿರಲಿಲ್ಲ.

ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ ಅಂದರೆ ಆಡಿಟಿಂಗ್. ಮೇಲುನೋಟಕ್ಕೆ ನೀರಸ ಗುಮಾಸ್ತಗಿರಿಯಂತೆ ಕಂಡರೂ ಬೆಂಗಳೂರು ನಗರ ಮತ್ತು ಅದನ್ನಾವರಿಸಿದ ರಿಯಲ್ ಎಸ್ಟೇಟ್ ಮಾಫಿಯಾಗಳ ದೈತ್ಯ ಶಕ್ತಿಯನ್ನು ಲೆಕ್ಕ ಹಾಕಿದರೆ ಬೇರೆಯದೇ ಲೋಕವೊಂದು ತೆರೆದುಕೊಳ್ಳುತ್ತದೆ. ಬೆಂಗಳೂರು ನಗರವೊಂದರಲ್ಲೇ ಸರಿಸುಮಾರು 120 ಗೃಹ ನಿರ್ಮಾಣ ಸಂಘಗಳಿವೆ. ಪ್ರತಿಯೊಂದು ಕೇಂದ್ರೋದ್ಯಮದ ನೌಕರರ ನಿರ್ಮಾಣ ಹೌಸಿಂಗ್ ಸೊಸೈಟಿಗಳು ರಾಜ್ಯ ಸರ್ಕಾರದ ಆಯಾ ಇಲಾಖೆಗಳ ಗೃಹ ನಿರ್ಮಾಣ ಸಂಘಗಳು, ಇದೆಲ್ಲವೂ ಸಾರ್ವಜನಿಕರಿಗೆ ನಿವೇಶನ ವಿತರಿಸಲೆಂದೇ ಹುಟ್ಟಿಕೊಂಡ ಸೊಸೈಟಿಗಳು.

ಹೀಗೆ ಬೆಂಗಳೂರಿನಲ್ಲಿ ತಲೆಎತ್ತಿದ ಹೌಸಿಂಗ್ ಸೊಸೈ... ಗಳೆಲ್ಲದರ ಲೆಕ್ಕ ಪರಿಶೋಧನೆಯ ಜವಾಬ್ದಾರಿಯಿದ್ದ... ಮಹಾಂತೇಶ್‌ಗೆ.

## ಮಾಫಿಯಾಗಳ ಕೈಗೆ?

ಇಂಥ ಗೃಹ ನಿರ್ಮಾಣ ಸಂಘಗಳ ಪಂಪಾಟು... ಸೈಟು ವಿತರಣೆ, ಭೂಮಿ ಖರೀದಿ, ಸದಸ್ಯತ್ವ ಇತ್ಯಾದಿಗಳದ್ದೇ ಮತ್ತೊಂದು ಕತೆಯಾಗುತ್ತದೆ. 1984 ರ ಸುಮಾರಿ... ಬಿಡಿಎ ಮತ್ತು ಗೃಹಮಂಡಳಿಯನ್ನೂ ಮೀರಿ ಆಯ... ಇಲಾಖೆ, ಕೇಂದ್ರೋದ್ಯಮಗಳ ನೌಕರರಿಗೆಂದು ನಿವೇಶ... ವಿತರಿಸುತ್ತೇವೆಂದು ಹುಟ್ಟಿಕೊಂಡ ಗೃಹ ನಿರ್ಮಾ... ಸಂಘಗಳಿಗೆಂದು ಸರ್ಕಾರವೇ ರೈತರ ಭೂಮಿ... ಸ್ವಾಧೀನಪಡಿಸಿಕೊಡುತ್ತಿತ್ತು, ಬೆಂಗಳೂರು ಸುತ್ತಮುತ್ತ... ಅನೇಕ ರೈತರ ಜಮೀನು ಈ ಖಾಸಗಿ ಗೃಹನಿರ್ಮಾ... ಸಂಘಗಳ ಪಾಲಾಗತೊಡಗಿದ್ದೇ ಕೆಲ ಭೂಮಾಲೀಕರು... ತಿರುಗಿಬಿದ್ದರು. ನ್ಯಾಯಾಲಯದ ಮೋರೆ ಹೋಗಿ... ಖಾಸಗಿ ಗೃಹ ನಿರ್ಮಾಣ ಸಹಕಾರ ಸಂಘಗಳಿಗಾಗಿ... ಸರ್ಕಾರ ಜಮೀನು ವಶಪಡಿಸಿಕೊಡುವ ಪ್ರಕ್ರಿಯೆ... ತಡೆಯಾಜ್ಞೆ ತಂದರು.

ಅದೇ ಹೊತ್ತಿಗೆ ಗೃಹ ನಿರ್ಮಾಣ ಸಂಘಗ... ಅಕ್ರಮ, ಭ್ರಷ್ಟಾಚಾರಗಳ ಕುರಿತಂತೆ ಜೆವಿಕೆ ರಾವ್... ಸಮಿತಿಯ ವರದಿಯೂ ಹೊರಬಿತ್ತು. ಕೇಂದ್ರೋದ್ಯಮ... ವೊಂದರಲ್ಲಿ ಇನ್ನೂರೋ ಮುನ್ನೂರೋ ನೌಕರರಿದ್ದರೆ ಅವರ ಗೃಹೋದ್ದೇಶಕ್ಕೆಂದು ಹುಟ್ಟಿಕೊಂಡ ಸೊಸೈಟಿಯಲ್ಲಿ ಹತ್ತೋ ಹನ್ನೆರಡೋ ಸಾವಿರದಷ್ಟು ಸದಸ್ಯರಿರುತ್ತಿದ್ದರು ಇದರರ್ಥ ಕೇವಲ ಸಂಬಂಧಪಟ್ಟ ನೌಕರರಿಗಷ್ಟೇ ಅಲ್ಲದೆ ಯಾರ್‍ಯಾರೋ ಲಾಭಬಡುಕರಿಗೂ ಈ ಸೊಸೈಟಿಗಳು ನಿವೇಶನ ಮಾರಿಕೊಳ್ಳುತ್ತಿದ್ದವು!

ಸ್ವಂತಕ್ಕೊಂದು ಮನೆಯಿಲ್ಲದವರಿಗಷ್ಟೇ ನಿವೇಶನ ನೀಡಬೇಕೆಂಬ ಸರ್ಕಾರಿ ಕಾಯ್ದೆಯೇ ಇಲ್ಲಿ ಹಾಸ್ಯಾಸ್ಪದ...


ಪತ್ನಿ ಮಕ್ಕಳ ಆಕ್ರಂದನ ಸಿಎಂ ನಾಟಕ

ವಾಗಿತ್ತು, ಬಹುತೇಕ ಸೊಸೈಟಿಗಳು ಕಂಡಕಂಡವರನ್ನು ಸಹಸದಸ್ಯರೆಂದು ಮಾಡಿಕೊಂಡು ಅಂಥವರಿಗೇ ಅಧಿಕ... ದರಕ್ಕೆ ಸೈಟು ಮಾರಿ ದುಡ್ಡು ದೋಚುತ್ತಿದ್ದದ್ದು ಗೊತ್ತಾಗಿದ್ದೇ ಸರ್ಕಾರ ಇಂಥ ಸಹಸದಸ್ಯರಿಗೆ ನಿವೇಶನ ವಿತರಿಸುವುದನ್ನೇ ನಿಷೇಧಿಸಿತು. ಇದು ಹೀಗೇ ಮುಂದುವರಿದು ಗೃಹ ನಿರ್ಮಾಣ ಸಂಘಗಳು ಕೃಷಿ

# ಪಾಪದ ಫ್ಲಾಟು: ಯಡ್ಡಿಗೆರಡು ಬಚ್ಚೇಗೌಡರಿಗೊಂದು

ಹೌಸಿಂಗ್ ಸೊಸೈಟಿಗಳ ಭ್ರಷ್ಟಾಚಾರ, ರಿಯಲ್ ಎಸ್ಟೇಟ್ ದಂಧೆ ಅವುಗಳ ಅನಾಚಾರ ಮತ್ತು ಇದಕ್ಕೆ ಬಿಜೆಪಿ ಸರ್ಕಾರದ ಸಹಕಾರದ ಬಗ್ಗೆ ನಿಷ್ಠುರಿ ಅಧಿಕಾರಿ ಮಹಾಂತೇಶ್ ಸಾಕಷ್ಟು ಪುರಾವೆಗಳನ್ನು ಕಲೆಹಾಕಿದ್ದರು. ಇಂಥ ಅನೇಕ ಭೂದರೋಡೆಯನ್ನು ಕೆದಕಿ ಅದನ್ನು ಮಹಾಂತೇಶ್ ಗಮನಕ್ಕೆ ತಂದಿದ್ದು ಮಾಜಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್‌ರ ಪುತ್ರ ಮಹಿಮಾ ಪಟೇಲ್ ಮತ್ತು ಮಾಹಿತಿ ಹಕ್ಕು ಕಾರ್ಯಕರ್ತ ಗಣೇಶ್ ಕೌಂಡಿನ್ಯ.

ವೈಯಾಲಿಕಾವಲ್ ಗೃಹ ನಿರ್ಮಾಣ ಸಹಕಾರ ಸಂಘದ ಅವ್ಯವಹಾರಗಳ ಬಗ್ಗೆ ಬರೆಯದ ಪತ್ರಿಕೆಗಳಿಲ್ಲ, ಇವತ್ತಿಗೂ ಇದನ್ನು ರಾಮು ಎಂಬ ನೆಲಹಿಡುಕನೊಬ್ಬ ನಿಭಾಯಿಸುತ್ತಾನೆ. ಇದೇ ಸೊಸೈಟಿಗೆಂದು ಬಿಡಿಎ ಡಾಲರ್ಸ್ ಕಾಲನಿಯಲ್ಲಿ 2.19 ಎಕರೆ ಭೂಮಿ ಮಂಜೂರು ಮಾಡಿತ್ತು, ಕಾಯ್ದೆಯಂತೆ ಅದನ್ನು ಸದಸ್ಯರಿಗೆ ನಿವೇಶನ ಮಾಡಿ, ಕಮ್ಮಿ ದರಕ್ಕೆ ಹಂಚಬೇಕು. ಆದರೆ ಕೋಟಿಗಟ್ಟಲೆ ದುಡ್ಡು ದೋಚಬೇಕಲ್ಲ?

ವೈಯಾಲಿಕಾವಲ್ ಸೊಸೈಟಿಯ ಖದೀಮರು ಬಿಡಿಎ ಕೊಟ್ಟ ಡಾಲರ್ಸ್ ಕಾಲನಿಯ ಬೆಲೆಬಾಳುವ 2.19 ಎಕರೆ ಜಮೀನನ್ನು ರಾತ್ರೋರಾತ್ರಿ ವೈಷ್ಣವಿ ಇನ್‌ಫ್ರಾಸ್ಟ್ರಕ್ಚರ್ಸ್ ಧಣಿ ಗೋವಿಂದರಾಜುವಿಗೆ ಮಾರುತ್ತಾರೆ. ಸದ್ಯ ಮಾಜಿ ಮುಖ್ಯಮಂತ್ರಿ ಯಡ್ಡಿ ಧವಳಗಿರಿ ಬಂಗಲೆಯ ಪಕ್ಕದಲ್ಲೇ ಇರುವ ಈ 2.19 ಎಕರೆಯಲ್ಲಿ ವೈಷ್ಣವಿ ಸ್ಪ್ಲೆಂಡರ್ ಹೆಸರಿನ ಭವ್ಯ ಅಪಾರ್ಟ್‌ಮೆಂಟ್ ಏಳುವಂತೆ ಯಡ್ಡಿ ನೆರವಾಗುತ್ತಾರೆ. ಇದಕ್ಕೆ ಪ್ರತಿಯಾಗಿ ಯಡ್ಡಿಯ ಧವಳಗಿರಿ ಪ್ರಾಪರ್ಟೀಸ್‌ಗೆ ವೈಷ್ಣವಿ ಧೂರ್ತ ಗೋವಿಂದರಾಜು 2 ಫ್ಲಾಟುಗಳನ್ನು ಕಾಣಿಕೆಯಾಗಿ ಕೊಡುತ್ತಾನೆ. ಗೋವಿಂದರಾಜು ಜೊತೆ ಯಡ್ಡಿಗೆ ಡೀಲು ಕುದುರಿಸಿದ್ದು ಮಾಜಿ ರಾಷ್ಟ್ರಪತಿ ಬಿ.ಡಿ. ಜತ್ತಿ ಮಗ ಅರವಿಂದ ಜತ್ತಿ!

ಅರವಿಂದ ಜತ್ತಿಗೂ ಒಂದು ಫ್ಲಾಟ್ ಕಾಣಿಕೆಯಾಗಿ ಬಂದಿದೆ. ಹಾಗೇ ಕಾರ್ಮಿಕ ಮಂತ್ರಿ ಬಚ್ಚೇಗೌಡರಿಗೂ


ಯಡ್ಡಿ ಫ್ಲಾಟ್ ಗಿಟ್ಟಿಸಿದ ವೈಷ್ಣವಿ ಸ್ಪ್ಲೆಂಡರ್


ಬಿಲ್ಡರ್ ಗೋವಿಂದರಾಜು ಫ್ಲಾಟೊಂದನ್ನು ಬಳುವಳಿಯಾಗಿ ಕೊಟ್ಟಿದ್ದಾನೆ. ಬಚ್ಚೇಗೌಡ ಅದನ್ನು ತನ್ನ ಮಗಳು ಶಿಲ್ಪಾ ಹೆಸರಿಗೆ ಮಾಡಿದ್ದಾರೆ.

ಇದೇ ವೈಯಾಲಿಕಾವಲ್ ಹೌಸಿಂಗ್ ಸೊಸೈಟಿಗೆಂದು ಸರ್ಕಾರ ನಾಗವಾರದಲ್ಲಿ 165 ಎಕರೆ ಮಂಜೂರು ಮಾಡಿದೆ. ಈ ಪೈಕಿ 98 ಎಕರೆಯಲ್ಲಿ ಬಿಡಿಎ ಲೇಔಟ್ ಸಹ ಮಾಡಿದೆ. ಹೀಗೆ ಮಂಜೂರಾದ ಬಡಾವಣೆಯಲ್ಲಿ ಲಕ್ಷ್ಮಣ್ ಎಂಬಾತನ ಜೊತೆ ಸೇರಿ 818 ಸೈಟುಗಳನ್ನು ಸೊಸೈಟಿ ವಿಂಗಡಿಸುತ್ತದೆ. ಈ ಎಲ್ಲಾ ಸೈಟುಗಳೂ ಸದಸ್ಯರಿಗೆ ತಾನೇ ಹಂಚಿಕೆಯಾಗಬೇಕು? ಆದರೆ ಲಕ್ಷ್ಮಣ್ ಮತ್ತು ಸೊಸೈಟಿ ಖದೀಮರು ಸೇರಿಕೊಂಡು ಈ ಪೈಕಿ 173 ಸೈಟುಗಳನ್ನು ಬಿಜೆಪಿ ನಾಯಕ ಪ್ರಸಾದ್ ರೆಡ್ಡಿಗೆ ಮಾರಿಕೊಳ್ಳುತ್ತಾರೆ. 98 ಎಕರೆಯ ಈ ಡೀಲೊಂದೇ 400 ಕೋಟಿಯ ಕರ್ಮಕಾಂಡವಾಗುತ್ತದೆ!


ಗೋವಿಂದರಾಜು

ಇದರಲ್ಲಿ ಮಾಜಿ ಸಹಕಾರಿ ಸಚಿವ ಲಕ್ಷ್ಮಣ್ ಸವದಿ ಸೇರಿದಂತೆ ಪ್ರಸಾದ್ ರೆಡ್ಡಿ (ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಟಿಎಂ ಲೇಔಟಿನ ಬಿಜೆಪಿ ಅಭ್ಯರ್ಥಿ), ನಂದೀಶ್ ರೆಡ್ಡಿ, ವಿಶ್ವನಾಥ್ ಎಲ್ಲರೂ ಪಾಲುದಾರರೆ.

ರಾಷ್ಟ್ರೀಯ ಕ್ಷಯರೋಗ ಸಂಸ್ಥೆಯ ನೌಕರರಿಗೆಂದೇ ಎನ್‌ಟಿಐ ಹೌಸಿಂಗ್ ಸೊಸೈಟಿಯಿದೆ. ಇದನ್ನು ವಿಜಯ್‌ಸಿಂಗ್ ಎಂಬ ರಿಯಲ್ ಎಸ್ಟೇಟ್ ಗಿರಾಕಿಯೊಬ್ಬ ತನ್ನ ಹಿಡಿತದಲ್ಲಿಟ್ಟುಕೊಂಡಿದ್ದಾನೆ. ಇದಕ್ಕೊಂದು ಬಿಡಿಎ ಪ್ರತಿಷ್ಠಿತ ಆರ್‌ಎಂಬಿ ಬಡಾವಣೆಯಲ್ಲಿ ಅಂದರೆ ಡಾಲರ್ಸ್ ಕಾಲನಿಯಲ್ಲಿ ಹಿಂದೆಯೇ 19.5 ಎಕರೆ ಜಮೀನು ಮಂಜೂರು ಮಾಡಿತ್ತು, ಹೀಗೆ ನೌಕರರಿಗೆಂದು ಮಂಜೂರಾದ ಜಮೀನನ್ನು ಸೊಸೈಟಿ ಖದೀಮರು ಮೂರು


ಮಹಿಮಾ

ಭಾಗವಾಗಿ ವಿಂಗಡಿಸಿ ಈ ಪೈಕಿ 5 ಎಕರೆಯನ್ನು ಪೂನಾದ ಬಿಲ್ಡರ್ ಕೊಟ್ಟೆ ಪಾಟೀಲನಿಗೆ ಮಾರಿಕೊಳ್ಳುತ್ತಾರೆ. ಮೂರೆಕರೆಯನ್ನು ಬಿಲ್ಡರ್ ಸಿವಿಎಲ್ ಶಾಸ್ತ್ರಿಗೆ ಮಾರಿದ್ದಾರೆ. ಉಳಿಕೆ 11-15 ಎಕರೆಯ ದೊಡ್ಡ ಭಾಗವನ್ನು ಲಿಕ್ಕರ್ ದೊರೆ ಹರಿಖೋಡೆಯ ಮೂಲಕ ದೈತ್ಯ ಡೆವಲಪರ್ ರಹೇಜಾಗೆ ಮಾರಿಹಾಕಿದ್ದಾರೆ.

ಹೀಗೆ ಬಿಲ್ಡರುಗಳ ಕೈಸೇರಿದ ಭೂಮಿಯ ರಹೇಜಾ ಪಾಲಿನಲ್ಲಿ ಇವತ್ತು ಬೃಹತ್ ಟೌನ್‌ಶಿಪ್ ತಲೆ ಎತ್ತಿದೆ. ರಹೇಜಾ ಧಣಿಗಳು ಇದಕ್ಕಿಟ್ಟ ಹೆಸರು Pebbles bay. ಹೆಲಿಕಾಪ್ಟರ್ ಇಳಿಯುವುದಕ್ಕೂ ವ್ಯವಸ್ಥೆಯಿರುವ ಈ ಟೌನ್‌ಶಿಪ್‌ನಲ್ಲಿ ಫ್ಲಾಟ್ ಒಂದಕ್ಕೆ 2 ಕೋಟಿಯ ಬೆಲೆಯಿದೆ. ಪ್ರತಿ ಚದುರ ಅಡಿಗೆ 10 ಸಾವಿರ ರೂ.ನಂತೆ ಲೆಕ್ಕ ಹಾಕಿದರೂ ಇದೊಂದೇ 500 ಕೋಟಿಯ ಲೂಟಿಯಾಗುತ್ತದೆ. ಸಹಕಾರ ನಗರದಲ್ಲಿ ನೌಕರರ ವಸತಿ ಉದ್ದೇಶಕ್ಕೆ ಕೊಟ್ಟ ಹತ್ತೆಕರೆಯನ್ನು ಇದೇ ಸೊಸೈಟಿ ಧೂರ್ತರು ಶೋಭಾ ಡೆವಲಪರ್ಸ್‌ಗೆ ಮಾರಿದ್ದಾರೆ. ಈ ಹತ್ತೆಕರೆಯನ್ನು ತನ್ನ ಅಧೀನ ಕಂಪೆನಿಯಾದ ಎಸ್‌ಪಿಜಿ ಎಂಟರ್‌ಪ್ರೈಸಸ್ ಮೂಲಕ 50 ಕೋಟಿ ಮೊತ್ತಕ್ಕೆ ಶೋಭಾ ಡೆವಲಪರ್ಸ್ ಧಣಿ ಬ್ಯಾಂಕಿಗೆ ಒತ್ತೆಯಿಡುತ್ತಾನೆ.


ಇಲ್ಲಿ ವಂಚನೆಯಾಗಿದ್ದು ಸರ್ಕಾರಕ್ಕೆ ಮತ್ತು ಬಡ ನಿವೇಶನದಾರರಿಗಾದರೆ, ಲಾಭ ಮಾಡಿದ್ದು ಬಿಲ್ಡರ್‌ಗಳು ಮತ್ತು ರಿಯಲ್ ಎಸ್ಟೇಟ್ ಧೂರ್ತರು. ಮಹಿಮಾ ಪಟೇಲ್ ಮತ್ತು ಮಾಹಿತಿ ಹಕ್ಕು ಕಾರ್ಯಕರ್ತ ಗಣೇಶ್ ಸೇರಿಕೊಂಡು ಕೆದಕಿದ ಇಂಥ ಅನೇಕ ಹಗರಣಗಳನ್ನು ಮಹಾಂತೇಶ್ ಎತ್ತಿ ಹಿಡಿದಿದ್ದರು. ಈ ಬಗ್ಗೆ ಗಣೇಶ್ ಮತ್ತು ಮಹಿಮಾ ಪಟೇಲರಿಗೆ ಕೊಲೆ ಬೆದರಿಕೆಯಿತ್ತೆಂದ ಮೇಲೆ ಇನ್ನು ಮಹಾಂತೇಶ್‌ಗೆ ಉಳಿಗಾಲವುಂಟೆ?

ಈ ಪೈಕಿ ಯಾವ ಬಿಲ್ಡರ್ ಕೈಚಳಕ ತೋರಿರಬಹುದು?

ಯಾವ ಲ್ಯಾಂಡ್ ಹಗರಣದ ಲಾಭಕ್ಕೆ ಮಹಾಂತೇಶ್ ಕೊಲೆಯಾಗಿರಬಹುದು?

ಮಿಯನ್ನು ಖರೀದಿಸುವುದೇ ಕಾನೂನುಬಾಹಿರವೆಂದು ಪ್ರೀಂಕೋರ್ಟ್ ತೀರ್ಪು ಹೊರಬಿತ್ತು.


ಈ ಹಂತದಲ್ಲೇ ರಿಯಲ್ ಟೇಟ್ ಮಾಫಿಯಾಗಳಾಗಿ ತಲೆ ನ್ನ ಹೌಸಿಂಗ್ ಸೊಸೈಟಿಯ ದೀಮರೆಲ್ಲ ರಂಗೋಲೆ ಕೆಳಗೆ ನುಳುವ ತಂತ್ರವೊಂದನ್ನು ಕಂಡಿಡಿದರು. ಅದು ತ್ಯರ್ಥಿಗಳು ಅಂದರೆ ಕೆಕರ್‌ಗಳನ್ನು ಛೂಬಿಟ್ಟು ಭೂಮಿ ಖರೀದಿಸುವುದು!




ಈಗ ಶ್ರೀಮಂತ ರಾಜಕಾರಣಿ ಗಿ ತಲೆ ಎತ್ತಿದ ಕಟ್ಟಾ ಸುಬ್ರಹ್ಮಣ್ಯ ರುಸ್ತು, ಯಲಹಂಕ ಶಾಸಕ ನಾಥ್, ನಾಗಮಂಗಲದ ಎಮ್ಮೆಲ್ಲೆ ಶ್ ಗೌಡ, ಮಾಜಿ ಮಂತ್ರಿ ಯ್ಯ ಶೆಟ್ಟಿ, ಬಿಜೆಪಿಯ ನಾಯಕ ಪ್ರಸಾದ್ ರೆಡ್ಡಿ, ಗ್ರೆಸ್ ಪುಢಾರಿ ಕುಪೇಂದ್ರ ರೆಡ್ಡಿ ಮುಂತಾದವರೆಲ್ಲ ದ್ದೇ ಇಂಥ ಲ್ಯಾಂಡ್ ಬ್ರೋಕರಿಕೆಯಲ್ಲಿ. ಕರ್ನಾಟಕ ಕಾಂ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ವೊಂದೇ ಸಾರ್ವಜನಿಕರಿಂದ 1500 ಕೋಟಿಗೂ ತ್ತ ಮೊತ್ತದ ದುಡ್ಡೆತ್ತಿತ್ತು. ಇದಕ್ಕೆ ಪ್ರತಿಯಾಗಿ ಇದೇ ಖೆಯ ಮತ್ತೊಂದು ಹೌಸಿಂಗ್ ಸೊಸೈಟಿ ತಲೆಎತ್ತಿ ಸಾವಿರ ಕೋಟಿಯಷ್ಟು ಸಾರ್ವಜನಿಕರ ದುಡ್ಡು ಹಾಕಿತ್ತು.

## ರಾಮದಾಸ್ ತಮ್ಮ


ಟೆಲಿಕಾಂ ಇಲಾಖೆ ನೌಕರರ ಹೌಸಿಂಗ್ ಸೊಸೈಟಿಯ ಕ್ಷನಾದ ತಮಿಳುನಾಡು ಮೂಲದ ತ್ಸಲಂ ಕೃಷಿ ಭೂಮಿ ಖರೀದಿನೆಂದು ಏಜೆಂಟ್‌ನನ್ನಾಗಿ ನೇಮಿಸಿಕೊಂಡಿದ್ದು ಜಿ ಮಂತ್ರಿ ಕೃಷ್ಣಯ್ಯ ಶೆಟ್ಟಿ ಮತ್ತು ಮಂತ್ರಿ ರಾಮದಾಸ್ ತಮ್ಮ ಕಾಂತ್ ದಾಸ್‌ರನ್ನು. ಕೇವಲ 262 ದಿ ಟೆಲಿಕಾಂ ನೌಕರರಿದ್ದ ಸೊಸೈಟಿಗೆ ಕೃತ ಸಹಸದಸ್ಯರೆಲ್ಲ ಸೇರಿಕೊಂಡ ವಾಗಿ ಸದಸ್ಯರ ಸಂಖ್ಯೆ 18,560 ಗಿತ್ತು. ಅಂದರೆ 18,299 ಮಂದಿ ಸದಸ್ಯರು!


ಬಚ್ಚೇಗೌಡ

ಹೀಗೆ ಸಾರ್ವಜನಿಕರಿಂದ ಸಂಗ್ರಹಗೊಂಡಿದ್ದ ಸಾವಿರಾರು ಟಿ ರೂಪಾಯಿಯಲ್ಲಿ ರೈತರಿಂದ ಕೃಷಿ ಭೂಮಿ ದಿಸಿಕೊಡುವ ಡೀಲು ಪಡೆದ ಕೃಷ್ಣಯ್ಯ ಶೆಟ್ಟಿ ಕ್ಕೆಂದೇ ಬಾಲಾಜಿ ಕೃಪಾ ಎಂಟರ್‌ಪ್ರೈಸಸ್ ಎಂಬ ಟಾ ಕಂಪೆನಿಯೊಂದನ್ನು ಟ್ಟಿಹಾಕಿದ್ದ. ಬೆಂಗಳೂರಿನಲ್ಲಿ ಕೃಷಿ ಮಿ ಖರೀದಿಸಿಕೊಡಲು ಕೃಷ್ಣಯ್ಯ ಜೊತೆ 400 ಕೋಟಿಯ ಅಗ್ರಿ ಟ್ ಮಾಡಿಕೊಂಡ ಭಕ್ತವತ್ಸಲಂ ರೀತಿ ಮೈಸೂರಿನಲ್ಲಿ ಜಮೀನು ದಿಗೆ ಬಳಸಿಕೊಂಡಿದ್ದು ಮಂತ್ರಿ ದಾಸ್ ತಮ್ಮ ಶ್ರೀಕಾಂತದಾಸ್‌ನನ್ನು. ಶ್ರೀಕಾಂತ್ ದಾಸ್ ಶ್ರೀವಾಸ್ತವ ಎಂಬ ರ್ಟ್‌ನರ್‌ರನ್ನು ಜೊತೆ ಮಾಡಿಕೊಂಡು ಎಸ್‌ಅಂಡ್‌ಎಸ್ s and Ess) ಎಂಟರ್‌ಪ್ರೈಸಸ್ ಎಂಬ ಇನ್ನೊಂದು ನಿ ಹುಟ್ಟು ಹಾಕಿದ.


ಕೃಷ್ಣಯ್ಯ

ನವರ ತಂತ್ರವಿಷ್ಟೆ. ಶುರುವಿನಲ್ಲಿ ರೈತರಿಗೆ ಪುಡಿಕಾಸು ಟ್ಟು ಯಾರ್‍ಯಾರೋ ಬೇನಾಮಿಗಳ ಹೆಸರಲ್ಲಿ ಕೃಷಿ ಭೂಮಿ ದಿಸುವುದು. ಆನಂತರ ಅದನ್ನು ವಾಸದ ಉದ್ದೇಶಕ್ಕೆಂದು ರ್ತನೆ ಮಾಡಿಸಿ ಸೊಸೈಟಿಗಳಿಗೆ ಸುವುದು. ಟೆಲಿಕಾಂ ಸೊಸೈಟಿ ಮತ್ತು ದಾಸ್ ತಮ್ಮನ ಮಧ್ಯೆ 600 ಟಿ ರೂಪಾಯಿಗಳ ಒಪ್ಪಂದವಾಗಿತ್ತು. ಕತ್ತೇನೆಂದರೆ ಹೀಗೆ ಮಾಡಿಕೊಂಡ ನೂರೋ, ಆರುನೂರೋ ಕೋಟಿಯ ದವನ್ನು ಅಧಿಕೃತವಾಗಿ ನೋಂದಾ ಯೇ ಇರಲಿಲ್ಲ. ಹಾಗೊಮ್ಮೆ ಸ್ಟ್ರಾರ್ ಕಚೇರಿಗಳಲ್ಲಿ ನೋಂದಾಯಿ ಕೋಟಿಗಟ್ಟಲೆ ತೆರಿಗೆ ಕಟ್ಟಬೇಕಾಗ ದೆಂದು ನಾಮಕಾವಸ್ಥೆಗೆಂದು ಕೇವಲ ಕಾಗದದ ಮೇಲಷ್ಟೇ ನಮೂದಿಸ ತ್ತು.


ರಾಮದಾಸ್

ಇದರಿಂದಾಗಿ ಕೃಷಿ ಭೂಮಿಯನ್ನು ಕೃಷಿಕರಲ್ಲದವರು ದಿಸಕೂಡದೆಂಬ ಕಾಯ್ದೆ ಉಲ್ಲಂಘನೆಯಷ್ಟೇ ಅಲ್ಲ, ಸ್ಟ್ರಾರ್ ಕಚೇರಿಗೆ ಬಾರದೆಯೇ ನೋಂದಾವಣೆಗೊಳ್ಳದ ಖರೀದಿ ಒಪ್ಪಂದದಿಂದಾಗಿ ರಾಜ್ಯ ಬೊಕ್ಕಸಕ್ಕೆ ನೂರಾರು ಟಿ ರೂಪಾಯಿಗಳ ವಂಚನೆಯಾಗಿತ್ತು.

ಇದೇ ತಂತ್ರವನ್ನು ಬಳಸಿ ಮತ್ತೊಂದು ಟೆಲಿಕಾಂ ಹೌಸಿಂಗ್ ಸೊಸೈಟಿಯ ಖದೀಮ ಜಿ. ಬಾಬು ಸಾವಿರಾರು ಜನಕ್ಕೆ ಟೋಪಿ ಹಾಕಿದ್ದ. ಇಲ್ಲಿ ಭೂಖರೀದಿಗೆ ಈತ ಬಳಸಿದ್ದು ಆಂಧ್ರದ ಆಂಜನೇಯಲು ಪ್ರತಿಪಾಟಿ ಎಂಬ ನೆಲಗಳ್ಳನನ್ನು. ಈತ ಮಾಜಿ ಮಂತ್ರಿ ಕಟ್ಟಾ ನಾಯ್ಡುವಿನ ಸಂಬಂಧಿ ಮತ್ತು ಬೇನಾಮಿ. ಕಟ್ಟಾ ಬೇನಾಮಿ ಆಂಜನೇಯಲು ಮತ್ತು ಟೆಲಿಕಾಂ ಸೊಸೈಟಿಯ ಬಾಬು ಮಧ್ಯೆ ನಡೆದ 300 ಕೋಟಿ ರೂಪಾಯಿಗಳ ಭೂಖರೀದಿ ಒಪ್ಪಂದ ಕೇವಲ ಕಾಗದದ ಮೇಲಷ್ಟೇ ನಡೆದಿತ್ತು. ಅಂಥದೊಂದು ಒಪ್ಪಂದ ನೋಂದಾವಣೆಗೊಂಡಿದ್ದರೆ ರಾಜ್ಯ ಬೊಕ್ಕಸಕ್ಕೆ ಕೋಟಿಗಟ್ಟಲೆ ಆದಾಯ ಬರುತ್ತಿತ್ತು.

## ಯಡ್ಡಿಯ ಧವಳಗಿರಿ

ಇದು ಬೆಂಗಳೂರಿನ ಹೌಸಿಂಗ್ ಸೊಸೈಟಿ ಖದೀಮರ ವಂಚನೆಯ ಒಂದು ಮುಖವಷ್ಟೆ. ಇಂಥ ಸೊಸೈಟಿಗಳೆಲ್ಲ ಪ್ರತಿ ವರ್ಷ ತಮ್ಮ ಲೆಕ್ಕಪತ್ರವನ್ನು ಸರ್ಕಾರಕ್ಕೆ ಸಲ್ಲಿಸಲೇಬೇಕು. ಹೀಗೆ ಸಲ್ಲಿಸಿದ ಲೆಕ್ಕಪತ್ರವನ್ನು ಪರಿಶೀಲಿಸುವುದು ಮಹಾಂತೇಶ್ ಕೆಲಸ. ಪ್ರತಿವರ್ಷದ ತನ್ನ ಆಡಿಟ್ ವರದಿಯಲ್ಲಿ ಮಹಾಂತೇಶ್ ಇಂಥ ಗೋಲ್‌ಮಾಲ್‌ಗಳನ್ನು ಪತ್ತೆಹಚ್ಚಿ ಒಮ್ಮೆ ವರದಿ ಕೊಟ್ಟರೆಂದು ಹೌಸಿಂಗ್ ಸೊಸೈಟಿಯ ಖದೀಮರ ಸಮೇತವೇ ಕೃಷಿ ಭೂಮಿ ಖರೀದಿಸಿ ಕೊಟ್ಟ ಕೃಷ್ಣಯ್ಯ ಶೆಟ್ಟಿ, ರಾಮದಾಸ್ ತಮ್ಮ, ಕಟ್ಟಾ ಬೇನಾಮಿಗಳೆಲ್ಲ ಜೈಲು ಪಾಲಾಗುತ್ತಾರೆ. ಬೆಂಗಳೂರೊಂದರಲ್ಲೇ ಇಂಥ ನೂರಿಪ್ಪತ್ತಕ್ಕೂ ಅಧಿಕ ಸೊಸೈಟಿಗಳ ಭೂಕಬಳಿಕೆ ಮತ್ತು ಲೂಟಿಯನ್ನು ಕೆದಕಿದರೆ ಅದು 2ಜಿ ಸ್ಪೆಕ್ಟ್ರಮ್ ಹಗರಣಕ್ಕಿಂತಲೂ ಭಯಾನಕ ಹಗರಣವಾಗುತ್ತದೆ. ಒಂದು ಮೂಲದ ಪ್ರಕಾರ ಬೆಂಗಳೂರೊಂದರಲ್ಲೇ ಹೌಸಿಂಗ್ ಸೊಸೈಟಿಗಳ ಹೆಸರಲ್ಲಿ ರಿಯಲ್ ಎಸ್ಟೇಟ್ ಖದೀಮರು ಕಬಳಿಸಿದ್ದು ಏಳೂವರೆ ಸಾವಿರ ಎಕರೆ. ಕೇವಲ 12 ಅಥವಾ 13 ಸೊಸೈಟಿಗಳು ಸರ್ಕಾರಿದಿಂದ ಮಂಜೂರಾಗಿದ್ದ ತಮ್ಮ ಭೂಮಿಯನ್ನು ದೈತ್ಯ ಬಿಲ್ಡರುಗಳಿಗೆ ಮಾರಿಕೊಂಡಿದ್ದರ ಮೊತ್ತವೇ 3 ಲಕ್ಷ ಕೋಟಿ!

ಇನ್ನು ನೂರಕ್ಕೂ ಅಧಿಕ ಸೊಸೈಟಿಗಳ ಭೂಕಬಳಿಕೆಯ ಮೊತ್ತ ಇನ್ನೆಷ್ಟಿರಬೇಡ? ಮಾಜಿ ಮುಖ್ಯಮಂತ್ರಿ ಯಡ್ಡಿಯಿಂದ ಹಿಡಿದು, ಕಾರ್ಮಿಕ ಮಂತ್ರಿ ಬಚ್ಚೇಗೌಡ, ಗೃಹಮಂತ್ರಿ ಅಶೋಕ್, ಸಂಸದ ಅನಂತ್‌ಕುಮಾರ್ ಆದಿಯಾಗಿ ಬಿಜೆಪಿ ಸರ್ಕಾರದ ಘಟಾನುಘಟಿಗಳೆಲ್ಲ ಇಂಥ ಹೌಸಿಂಗ್ ಸೊಸೈಟಿಗಳ ಪಾಪದಲ್ಲಿ ಪಾಲುದಾರರೆ. ಗೃಹಮಂತ್ರಿ ಅಶೋಕ್ ಶಿಷ್ಯರೇ ನಡೆಸುವ ಹೌಸಿಂಗ್ ಸೊಸೈಟಿಗಳಿಗೆ ಯಲಹಂಕ ಶಾಸಕ ವಿಶ್ವನಾಥ್, ಎಚ್‌ಎಎಲ್ ಸೊಸೈಟಿಯಲ್ಲಿ ನಡೆಸಿದ ಅವ್ಯವಹಾರದ ಮೊತ್ತವೊಂದೇ ಇನ್ನೂರು ಕೋಟಿ ಮೀರುತ್ತದೆ. ಕಟ್ಟಾ, ನಂದೀಶ್ ರೆಡ್ಡಿ, ಸತೀಶ್ ರೆಡ್ಡಿ, ಶೋಭಾ ಕರಂದ್ಲಾಜೆ, ದಾಸರ ಹಳ್ಳಿ ಮುನಿರಾಜು ಇತ್ಯಾದಿ ಬಿಜೆಪಿ ಶಾಸಕರ ಪಾಪದ ಫಲವಾಗೇ ಡಜನ್ನುಗಟ್ಟಲೆ ಹೌಸಿಂಗ್ ಸೊಸೈಟಿಗಳು ಮುಳುಗಿಹೋಗಿವೆ.

ಇಂಥ ಯಾವ ಹೌಸಿಂಗ್ ಸೊಸೈಟಿಯ ಹಗರಣಕ್ಕೆ ಮಹಾಂತೇಶ್ ಕೈಹಾಕಿದ್ದರು? ಅದೆಷ್ಟು ಹೌಸಿಂಗ್ ಸೊಸೈಟಿಗಳು ಲೆಕ್ಕಪರಿಶೋಧನೆಯಲ್ಲಿ ಮಹಾಂತೇಶ್ ಅಕ್ರಮಗಳನ್ನು ಪತ್ತೆಹಚ್ಚಿದರು? ಮಹಾಂತೇಶ್‌ರ ಆಡಿಟ್ ವರದಿಯೇನಾದರೂ ಹೊರಬಿದ್ದರೆ ಅದೆಷ್ಟು ಬಿಲ್ಡರುಗಳು ಜೈಲು ಪಾಲಾಗುತ್ತಿದ್ದರು?


ಇಂಥ ಎಲ್ಲಾ ಪ್ರಶ್ನೆಗಳಿಗೆ ಪೂರಕವಾಗೇ ಮುಖ್ಯಮಂತ್ರಿ ಸದಾನಂದ ಗೌಡರು ಮಾಡಿದ ಮಹಾಪಾಪವೊಂದಿದೆ. ಅದು ಹೌಸಿಂಗ್ ಸೊಸೈಟಿಗಳ ಸದಸ್ಯರಲ್ಲದವರಿಗೆ ಸೈಟು ವಿತರಿಸಕೂಡದೆಂಬ ಹೈಕೋರ್ಟ್ ಆದೇಶಕ್ಕೆ ವ್ಯತಿರಿಕ್ತವಾಗಿ ಸದಸ್ಯರಲ್ಲದವರಿಗೂ ಕೊಡಬಹುದೆಂದು ಯಡಿ ಮುಖ್ಯಂತ್ರಿಯಾಗಿ ಹೊರಡಿಸಿದ ಆದೇಶವನ್ನು ಯಥಾವತ್ತಾಗಿ ಸುತ್ತೋಲೆ ಹೊರಡಿಸಿದ್ದು!

ಅಂದರೆ ತನ್ನ ಸಿಎಂಗಿರಿಯ ಕೊನೆ ಗಾಲದಲ್ಲಿ ಯಡ್ಡಿ ಮಾಡಿದ ಪಾಪವನ್ನು ಸವದಿಯ ರಾಜೀನಾಮೆ ನಂತರ ಸಹಕಾರಿ ಇಲಾಖೆ ವಹಿಸಿಕೊಂಡ ಸದಾನಂದ ಗೌಡರೂ ಮುಂದುವರಿಸಿದ್ದಾರೆ. ಇದರರ್ಥ ಹೌಸಿಂಗ್ ಸೊಸೈಟಿಗಳ ಪಾಪದಲ್ಲಿ ಸದಾನಂದ ಗೌಡರೂ ಪಾಲುದಾರರೆ. ಇನ್ನು ಮಹಾಂತೇಶ್ ಹಂತಕರು ಪತ್ತೆಯಾಗುತ್ತಾರೆ. ಹತ್ಯೆಯ ಹಿಂದಿರುವ ಸೂತ್ರಧಾರರ ಪತ್ತೆ ಸಾಧ್ಯವೆಂದಾಗಲಿ ನಂಬಲು ಸಾಧ್ಯವೆ?


❀

# ವಿಧಾನಪರಿಷತ್ ಚುನಾವಣೆ: ಕೈ ಪಾಳಯದ ಟಿಕೆಟ್ ಲಾಬಿ


ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆ ಸಮೀಪವಾಗುತ್ತಿದ್ದಂತೆ ಕಾಂಗ್ರೆಸ್‌ನಲ್ಲಿ ಟಿಕೆಟ್ ಆಕಾಂಕ್ಷಿಗಳ ಲಾಬಿಯೂ ಜೋರಾಗುತ್ತಿದೆ. ಖಾಲಿಯಾಗಲಿರುವ 11 ಸ್ಥಾನಗಳಲ್ಲಿ ಪಕ್ಷಗಳ ವಿಧಾನಸಭಾ ಬಲಾಬಲ ಪರಿಗಣಿಸಿದರೆ ಬಿ.ಜೆ.ಪಿ.ಗೆ ಆರು, ಕಾಂಗ್ರೆಸ್‌ಗೆ ಮೂರು ಮತ್ತು ಜೆ.ಡಿಎಸ್ ಗೆ ಒಂದು ಸ್ಥಾನ ಸಿಗುವುದು ಗ್ಯಾರಂಟಿ. ಕಾಂಗ್ರೆಸ್ ಪಾಲಿನ ಈ ಮೂರು ಸ್ಥಾನಗಳಿಗೆ ಟಿಕೆಟ್ ಗಿಟ್ಟಿಸಿಕೊಳ್ಳಲು ಆಕಾಂಕ್ಷಿಗಳು ಇನ್ನಿಲ್ಲದಂತೆ ಕಸರತ್ತು ನಡೆಸಿದ್ದಾರೆ.


ಸಿದ್ದು

ಈಗ ಚುನಾವಣೆ ನಡೆಯುತ್ತಿರುವ ಸ್ಥಾನಗಳ ಸಂಖ್ಯೆ ಹಾಗೂ ಒಟ್ಟು ವಿಧಾನ ಸಭಾ ಸದಸ್ಯರನ್ನು ಪರಿಗಣಿಸಿದರೆ ವಿಧಾನ ಸಭೆಯಿಂದ ವಿಧಾನ ಪರಿಷತ್‌ಗೆ ಒಬ್ಬ ಎಂ.ಎಲ್.ಸಿ ಯನ್ನು ಆಯ್ಕೆ ಮಾಡಲು 19 ಎಂ.ಎಲ್.ಎ ಗಳ ಓಟು ಬೇಕಾಗುತ್ತದೆ. ಎಲ್ಲಾ ಪಕ್ಷಗಳು ಒಂದು ಹೆಚ್ಚುವರಿ ಓಟು ಹಾಕಿಕೊಳ್ಳುವುದರಿಂದ 20 ಓಟುಗಳು ಒಬ್ಬ ಎಂ.ಎಲ್.ಸಿ.ಯನ್ನು ಆಯ್ಕೆಮಾಡುತ್ತವೆ. ಅದರಂತೆ 71 ಎಂ.ಎಲ್.ಎ ಬಲ ಹೊಂದಿರುವ ಕಾಂಗ್ರೆಸ್ ಬಳಿ 60 ಓಟುಗಳಲ್ಲಿ ಮೂರು ಜನರನ್ನು ಮೇಲ್ಮನೆಗೆ ಕಳುಹಿಸಿದ ನಂತರವೂ ಹೆಚ್ಚುವರಿ 11 ಮತಗಳು ಉಳಿಯುತ್ತವೆ. ಟಿಕೆಟ್ ಸಿಕ್ಕರೆ ಗೆಲುವು ಖಾತ್ರಿ ಎಂಬುದರಿಂತೇ ಈಗ ಮೂರು ಸ್ಥಾನಗಳ ಮುಂದೆ ಆಕಾಂಕ್ಷಿಗಳು ಸಾಲುಗಟ್ಟಿ ನಿಂತಿರುವುದು.


ಇಬ್ರಾಹಿಂ

ನಾಯಕರ ವರ್ಚಸ್ಸು, ಪ್ರಭಾವ, ಜಾತಿ ಲೆಕ್ಕಾಚಾರ, ವರಿಷ್ಠರ ಕೃಪೆ ಇವೆಲ್ಲವೂ ವರ್ಕ್‌ಔಟ್ ಆಗುವುದರಿಂದ ಎಲ್ಲ ಕೋನದಿಂದಲೂ ಹೈಕಮಾಂಡನ್ನು ಒಲಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಇದಕ್ಕಾಗೆ ಕೆಲ ನಾಯಕರ ದಂಡು ಸ್ವಲ್ಪ ದಿನದಿಂದ ದಿಲ್ಲಿಯಲ್ಲೇ ಬೀಡು ಬಿಟ್ಟಿದೆ. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಲ್ಲಿ ಬಿ.ಎಲ್. ಶಂಕರ್, ವಿ.ಆರ್. ಸುದರ್ಶನ್, ಕುಪೇಂದ್ರ ರೆಡ್ಡಿ, ಕೆ.ಸಿ. ಕೊಂಡಯ್ಯ, ಬಿ.ಕೆ.ಚಂದ್ರಶೇಖರ್, ಅಲ್ಲಂ ವೀರಭದ್ರಪ್ಪ, ಸಿದ್ಧಾರ್ಥ ಹೆಗಡೆ, ವಿ.ಎಸ್. ಉಗ್ರಪ್ಪ ಸಿ.ಎಂ.ಇಬ್ರಾಹಿಂ, ಮಳವಳ್ಳಿ ಶಿವಣ್ಣ ಕೆಂಚೇಗೌಡ ಮತ್ತು ಮಹಿಳಾ ಕೆಟಗರಿಯಿಂದ ಮೋಟಮ್ಮ, ರಾಣಿ ಸತೀಶ್, ಜಲಜಾ ನಾಯಕ್ ಹೆಸರುಗಳು ಪ್ರಮುಖವಾಗಿ ಕೇಳಿಬರುತ್ತಿವೆ. ಇವರಲ್ಲಿ ಸಿ.ಎಂ. ಇಬ್ರಾಹಿಂಗೆ ಸಿದ್ದರಾಮಯ್ಯನವರ ಸಂಪೂರ್ಣ ಬೆಂಬಲ ಇರುವುದರಿಂದ ಹಾಗೂ ಅಲ್ಪಸಂಖ್ಯಾತರ ಕೋಟಾದವರಾದ್ದರಿಂದ ಅವರ ಆಯ್ಕೆ ಬಹುಪಾಲು ಖಚಿತವಾದಂತಾಗಿದೆ. ಆದರೆ ಅದೇ ಅಲ್ಪಸಂಖ್ಯಾತ ಕೋಟಾದಿಂದ ದಾವಣಗೆರೆಯ ಜಬ್ಬರ್ ಟಿಕೆಟ್ ಅಪೇಕ್ಷಿಸಿರುವುದು ಹಾಗೂ ಈಗಾಗಲೇ ರೆಹಮಾನ್ ಖಾನ್ ರಾಜ್ಯಸಭೆಗೆ ಆಯ್ಕೆಯಾಗಿರುವುದು ಇಬ್ರಾಹಿಂಗೆ ಟಿಕೆಟ್ ಗಿಟ್ಟಿಸಲು ಸ್ವಲ್ಪಮಟ್ಟಿನ ತಡೆಯಾಗಬಹುದು.


ಶಿವಣ್ಣ

ಈಗ ಹಾಲಿ ವಿಧಾನಪರಿಷತ್ ಸದಸ್ಯರಾಗಿದ್ದು ಜೂನ್ 17ಕ್ಕೆ ತಮ್ಮ ಅಧಿಕಾರಾವಧಿ ಮುಕ್ತಾಯವಾಗುವ ವಿ.ಆರ್. ಸುದರ್ಶನ್, ಮೋಟಮ್ಮ ಮತ್ತು ಕೆ.ಸಿ.ಕೊಂಡಯ್ಯ ಎರಡನೇ ಬಾರಿಗೂ ಆಯ್ಕೆ ಬಯಸಿ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಮೋಟಮ್ಮನ ಟಿಕೆಟ್ ಓಟಕ್ಕೆ ಮಹಿಳಾ ಕೋಟಾದಲ್ಲಿ ಅಡ್ಡಿಯಾಗಿರುವುದು ಲಿಂಗಾಯತ ವರ್ಗದ ರಾಣಿ ಸತೀಶ್. ಕಾಂಗ್ರೆಸ್ ಪಕ್ಷ ಮಲ್ಲಿಕಾರ್ಜುನ ಖರ್ಗೆಯನ್ನು ಈಗಾಗಲೇ ಕೇಂದ್ರ ಮಂತ್ರಿಯನ್ನಾಗಿಸಿರುವುದರಿಂದ ಪರಿಶಿಷ್ಟ ಜಾತಿಯವರೆಂಬ ಒಲವೂ ಮೋಟಮ್ಮನಿಗೆ ಸಿಗುವುದು ಡೌಟು. ಜಿ.ಪರಮೇಶ್ವರ್ ಕೆ.ಪಿ.ಸಿ.ಸಿ ಅಧ್ಯಕ್ಷರಾಗಿರುವುದರಿಂದ ಜಾತಿ ಲೆಕ್ಕಾಚಾರದಲ್ಲಿ ರಾಣಿ ಸತೀಶ್‌ಗೂ ಹೀಗೇ ಆಗುವ ಸಂಭವ ಹೆಚ್ಚಿದೆ. ಕೆ.ಸಿ.ಕೊಂಡಯ್ಯ ಮಲ್ಲಿಕಾರ್ಜುನ ಖರ್ಗೆಯ ಕೃಪೆ ಗಿಟ್ಟಿಸಿಕೊಂಡಿರುವುದರಿಂದ ಎರಡನೇ ಬಾರಿಗೆ ಟಿಕೆಟ್ ಸಿಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಇವರೆಲ್ಲರ ನಡುವೆ ಎಸ್.ಎಂ.ಕೃಷ್ಣರ ಅಳಿಯ ಸಿದ್ಧಾರ್ಥ ಹೆಗಡೆಯ ಹೆಸರೂ ಕೇಳಿಬರುತ್ತಿದೆ. ಈ ಹೆಸರಿನ ಹಿಂದೆ ದೂರದೃಷ್ಟಿಯ ಲೆಕ್ಕಾಚಾರ ನಡೆದಿರುವುದು ವಿಶೇಷ. ಈಗಾಗಲೇ ಭ್ರಷ್ಟಾಚಾರ, ಬಿಕ್ಕಟ್ಟು, ಕಚ್ಚಾಟ ಅಂತೆಲ್ಲ ಹೆಸರು ಕೆಡಿಸಿಕೊಂಡಿರುವ ಬಿಜೆಪಿಯಿಂದ ಬೇಸತ್ತಿರುವ ಜನ ಮುಂದಿನ ಚುನಾವಣೆ ವೇಳೆಗೆ ಕಾಂಗ್ರೆಸ್ ಒಳಗೊಂಡ ಸರ್ಕಾರ ಅಧಿಕಾರಕ್ಕೆ ತರುತ್ತಾರೆನ್ನುವ ಅಂದಾಜಿದೆ. ಹಾಗೊಮ್ಮೆ ಅಧಿಕಾರಕ್ಕೆ ಬಂದಿದ್ದೇ ಆದರೆ ಮಂತ್ರಿಗಿರಿ ಗಿಟ್ಟಿಸಿಕೊಳ್ಳಬಹುದೆನ್ನುವ ಉದ್ದೇಶದಿಂದ ಎಂ.ಎಲ್.ಸಿ ಚುನಾವಣೆಗೆ ಸಿದ್ಧಾರ್ಥ ಹೆಗಡೆ ಆಕಾಂಕ್ಷಿಯಾಗಿದ್ದಾರೆ ಎನ್ನಲಾಗುತ್ತಿದೆ.

ಇನ್ನು ದುಡ್ಡಿನ ಕುಳಗಳೂ 'ಕೈ' ಟಿಕೆಟ್‌ಗೆ ತಮ್ಮದೇ ಆದ ಲಾಬಿ ನಡೆಸುತ್ತಿವೆ. ಅವರಲ್ಲಿ ರಿಯಲ್‌ಎಸ್ಟೇಟ್‌ನ ಕುಪೇಂದ್ರರೆಡ್ಡಿ ಮತ್ತು ಮೈನಿಂಗ್ ಫೀಲ್ಡಿನ ಅಬ್ದುಲ್ ವಾಬಾ ಪ್ರಮುಖರು. ಕುಪೇಂದ್ರರೆಡ್ಡಿ ಈಗಾಗಲೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋತಿದ್ದರೆ ಅಬ್ದುಲ್ ವಾಬಾ ಇದೇ ಮೊದಲ ಪ್ರಯತ್ನದಲ್ಲಿದ್ದಾರೆ. ಜಾತಿಯ ಲೆಕ್ಕಾಚಾರದ ನಡುವೆ ಕಾಂಚಾಣದ ಪ್ರಭಾವವೂ ನಡೆಯುತ್ತಿದೆ. ಕೆಲವರು ಎಂ.ಎಲ್.ಸಿ ಟಿಕೆಟ್‌ಗಾಗಿ 25 ಕೋಟಿವರೆಗೆ ಖರ್ಚು ಮಾಡಲು ತಯಾರಿರುವುದಾಗಿ ಹೇಳಿಕೊಳ್ಳುತ್ತಿದ್ದಾರೆ.

ಜಾತಿ, ಪ್ರಭಾವ, ಒಲೈಕೆಗಳನ್ನೆ ಪರಿಗಣಿಸಿ ಟಿಕೆಟ್ ಫೈನಲ್ ಮಾಡುವುದು ಪಕ್ಷಕ್ಕೂ ಕಷ್ಟದ ಮಾತು. ಪಕ್ಷದ ತತ್ವವನ್ನು ಕಾಯಬಹುದಾದಂತಹವರು ಮತ್ತು ಹೊಸಬರಿಗೆ ಅವಕಾಶ ನೀಡಬೇಕಾಗುತ್ತದೆ. ಈ ನಿಟ್ಟಿನಲ್ಲಿ 1985ರಲ್ಲೇ ಅಹಿಂದಾ ಸಮಾವೇಶ ನಡೆಸಿದ ಹಾಗೂ ಲೋಹಿಯಾ ವಿಚಾರ ವೇದಿಕೆಯ ಮೂಲಕ ಗಣಿ ಹಗರಣದ ವಿರುದ್ಧ ಹೋರಾಟ ನಡೆಸಿದ ಶಿವಣ್ಣರನ್ನೂ ಪಕ್ಷ ಪರಿಗಣಿಸಬೇಕಾಗುತ್ತದೆ. ಮತ್ತೆ ಕೆಲವರ ಪ್ರಕಾರ ಉಪ್ಪಾರ, ಅಗಸರು, ಗಾಣಿಗರು, ಕುಂಬಾರರು, ತಿಗಳರು ಮುಂತಾದ ಬಹು ಸಂಖ್ಯಾತರಲ್ಲದ ಹಿಂದುಳಿದ ವರ್ಗದವರನ್ನು ಇಲ್ಲವೇ ಸಕ್ರಿಯ ರಾಜಕಾರಣದಿಂದ ದೂರವಿದ್ದು ಜಾತ್ಯಾತೀತ ಪ್ರಜ್ಞೆಯ ಪ್ರಗತಿಪರ ವ್ಯಕ್ತಿಗಳನ್ನು ಎಂ.ಎಲ್.ಸಿ ಗಳನ್ನಾಗಿ ಆರಿಸಬೇಕೆಂಬ ಅಭಿಪ್ರಾಯವೂ ಕೇಳಿಬರುತ್ತಿದ್ದು, ಪಕ್ಷ ಇದನ್ನು ಧಿಕ್ಕರಿಸುವಂತೆಯೂ ಇಲ್ಲ. ಕಡೇ ಪಕ್ಷ ತನ್ನ ಹೆಚ್ಚುವರಿ ಮತಗಳನ್ನು ಅಂತಹ ಅಭ್ಯರ್ಥಿಗೆ ನೀಡಬೇಕೆಂಬ ಒತ್ತಾಯವೂ ಮೂಡುತ್ತಿದೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆ.ಪಿ.ಸಿ.ಸಿ ಅಧ್ಯಕ್ಷ ಜಿ. ಪರಮೇಶ್ವರ್ ಅವರ ಸಮಿತಿಯ ಶಿಫಾರಸ್ಸಿನಂತೆ ಹೈಕಮಾಂಡ್ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸುವುದರಿಂದ ಅವರ ಕೃಪೆಗಾಗಿ ಆಕಾಂಕ್ಷಿಗಳು ಕಸರತ್ತು ನಡೆಸುತ್ತಿದ್ದಾರೆ. ಒಟ್ಟನಲ್ಲಿ ಮೂರು ಸೀಟಿಗೆ ಮುಗಿಬಿದ್ದಿರುವ ಆಕಾಂಕ್ಷಿಗಳನ್ನು ಕಾಂಗ್ರೆಸ್ ಹೇಗೆ ನಿಭಾಯಿಸುತ್ತೆ ಮತ್ತು ಯಾರ ಪ್ರಭಾವ ವರ್ಕ್‌ಔಟ್ ಆಗುತ್ತೆ ಅನ್ನುವುದೇ ಸದ್ಯದ ಪ್ರಶ್ನೆ. ❀

## ಅಲ್ಲೂ ಅದೇ ರಾಗ

ಬಿ.ಜೆ.ಪಿ.ಯಲ್ಲೂ ಎಂ.ಎಲ್.ಸಿ ಆಕಾಂಕ್ಷಿಗಳ ಸರದಿ ಸಣ್ಣದೇನಿಲ್ಲ. ಅಲ್ಲಿಯೂ ಲಾಬಿ, ಪ್ರತಿಷ್ಠೆಗಳು ಕೆಲಸ ಮಾಡುತ್ತಿವೆ. ಆಂತರಿಕ ಕಚ್ಚಾಟದಿಂದ ಹೈರಾಣಾಗಿರುವ ಬಿ.ಜೆ.ಪಿ.ಯಲ್ಲಿ ಯಡ್ಡಿ ಪಡೆ ಕಟ್ಟಕಡೆಯದಾಗಿ ತನ್ನ ಪ್ರಾಬಲ್ಯವನ್ನು ಪರೀಕ್ಷಿಸಿಕೊಳ್ಳಲು ಹವಣಿಸುತ್ತಿದ್ದರೆ, ಸದಾ ಮತ್ತು ಈಶ್ವರಪ್ಪನ ಟೀಮು ಯಡ್ಡಿಯ ಶವಪೆಟ್ಟಿಗೆಗೆ ಕೊನೇ ಮೊಳೆ ಜಡಿಯಲು ಸಜ್ಜಾಗಿದೆ. ಆರು ಸ್ಥಾನಗಳಲ್ಲಿ ಯಡ್ಡಿಯ ಬಣ ತಮಗೆ ನಾಲ್ಕು ಸ್ಥಾನಗಳನ್ನು ಬಿಟ್ಟುಕೊಡಬೇಕೆಂಬ ಬೇಡಿಕೆ ಇಟ್ಟಿದೆ. ಯಡ್ಡಿ ನಿಷ್ಠರಾದ ಪುಟ್ಟಸ್ವಾಮಿ ಹಾಗೂ ಲಕ್ಷ್ಮೀನಾರಾಯಣರಿಗೆ ಗಿಫ್ಟು ಕೊಡುವ ಇರಾದೆ ಅವರದ್ದು. ಆದರೆ ಇದಕ್ಕೆ ಪ್ರತಿಯಾಗಿ ಯಡ್ಡಿಯನ್ನು ವಿರೋಧಿಸುತ್ತಲೇ ಬಂದ ಬಿ.ಬಿ ಶಿವಪ್ಪ ಮತ್ತು ಸಂತೋಷ್‌ಗೆ ಟಿಕೆಟ್ ನೀಡುವ ಮೂಲಕ ಯಡ್ಡಿಯ ಹಿಡಿತ ತಪ್ಪಿಸಲು ಯೋಜನೆ ರೂಪಿಸಲಾಗುತ್ತಿದೆ.

ಈ ನಡುವೆ ಪಕ್ಷೇತರ ಮತಗಳಿಗೂ ಭಾರೀ ಬೇಡಿಕೆ ಬಂದಿದೆ. ಮೂರೂ ಪಕ್ಷಗಳಲ್ಲಿ ಉಳಿಯುವ ಹೆಚ್ಚುವರಿ ಮತಗಳನ್ನು ಕ್ರೋಢೀಕರಿಸಿಕೊಂಡು 11ನೇ ಸ್ಥಾನಕ್ಕೆ ಆಯ್ಕೆಯಾಗಬೇಕೆಂದರೆ 6 ಪಕ್ಷೇತರ ಅಭ್ಯರ್ಥಿಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಕಾಂಗ್ರೆಸ್‌ನ ಹೆಚ್ಚುವರಿ ಮತಗಳನ್ನು ಕೇಳಲು ಬಂದವರಿಗೆಲ್ಲ ಜಿ.ಪರಮೇಶ್ವರ್ ಮೊದಲು ಪಕ್ಷೇತರರ ಮತಗಳನ್ನು ಖಾತ್ರಿಮಾಡಿಕೊಂಡು ಬರುವಂತೆ ಕಿವಿಮಾತು ಹೇಳಿ ಕಳುಹಿಸುತ್ತಿದ್ದಾರೆ. ಈ ಹೆಚ್ಚುವರಿ ಮತದ ಸ್ಥಾನಕ್ಕೆ ಯಾರು ಸ್ಪರ್ಧಿಸುತ್ತಾರೆ ಎಂಬುದಿನ್ನು ಖಾತ್ರಿಯಾಗಿಲ್ಲವಾದರೂ ವಾಟಾಳ್ ನಾಗರಾಜ್ ಎಲ್ಲಾ ಪಕ್ಷಗಳನ್ನು ತಡಕಾಡುತ್ತಿರುವುದು ಇದೇ ಕಾರಣಕ್ಕೆ ಎನ್ನಲಾಗುತ್ತಿದೆ.

ಅಂಬರೀಷ್ ಅವರದ್ದು ಒರಟು ಸ್ವಭಾವವಾದರೂ ಅವರು ಅಂತರಂಗದಲ್ಲಿ ಪ್ರೀತಿ ತುಂಬಿಸಿಕೊಂಡಿರುವ ವ್ಯಕ್ತಿ. ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರ ಕಣ್ಣಿಗೆ ಬಿದ್ದು ಆಕಸ್ಮಿಕವಾಗಿ ಕಲಾವಿದ ಆದವರು ಇವರು. ಖಳನಾಯಕನಾಗಿ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದರೂ, ಪೋಷಕ ಪಾತ್ರಗಳಲ್ಲಿ ಮಿಂಚಿದ್ದರೂ, ನಾಯಕನಾಗಿ ಮೆರೆದವರು. ಈ ಕ್ಷಣಕ್ಕೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿರುವ ಕಲಾವಿದ.


ಅದೇರೀತಿ ರಾಜ್ಯದ ಅತಂತ್ರ ರಾಜಕೀಯ ಪರಿಸ್ಥಿತಿಯಲ್ಲಿ ಅನಾಯಾಸವಾಗಿ ಅವಕಾಶ ಸಿಕ್ಕಿ ರಾಜಕಾರಣಿಯೂ ಆದವರು. ಜನ ಸೇವೆ, ಹೋರಾಟ ಇತ್ಯಾದಿ ಹಿನ್ನೆಲೆಗಳು ಇಲ್ಲದಿದ್ದರೂ ಎಂಪಿಯಾದರು, ಕೇಂದ್ರದಲ್ಲಿ ಮಂತ್ರಿಯೂ ಆದರು. ರಾಜಕಾರಣದಲ್ಲೂ ತನ್ನದೇ ದಾರಿಯಲ್ಲಿ ಸಾಗಿದ ಈ ಪಾರ್ಟ್ ಟೈಂ ರಾಜಕಾರಣಿಗೆ ಚುನಾವಣಾ ಸಂದರ್ಭದಲ್ಲಿ ಮನೆಬಾಗಿಲಿಗೇ ಟಿಕೆಟ್ ಬರುವುದು ಒಂದು ವಿಶೇಷ. ರಾಜಕಾರಣದಲ್ಲಿ ಯಾರನ್ನೂ ಟೀಕಿಸದ, ಚುನಾವಣೆಯಲ್ಲಿ ಅಕ್ರಮವೆಸಗದ, ಪದವಿ ಪುರಸ್ಕಾರಗಳಿಗೆ ಹಾತೊರೆಯದ ಅಂಬಿ ತಿರಸ್ಕರಿಸುವುದೆಲ್ಲಾ ಅವರನ್ನ ಹಿಂಬಾಲಿಸುವುದೊಂದು ವಿಶೇಷ.

ಈಗ, ತಮ್ಮ 60ನೇ ಹುಟ್ಟುಹಬ್ಬದ ಸಮಯದಲ್ಲಿ ಸಿನಿಮಾರಂಗ ಮತ್ತು ರಾಜಕೀಯ ಕ್ಷೇತ್ರ ಎರಡರಲ್ಲಿ ಇದ್ದರೂ ಎಲ್ಲದರಿಂದ ದೂರವಾದವರಂತೆ ನಿರಾಳವಾಗಿದ್ದಾರೆ.

ದೇಶವಿದೇಶಗಳಲ್ಲಿ ಆಪ್ತರನ್ನು ಹೊಂದಿರುವ ಅಂಬರೀಷ್, ಕನ್ನಡ ಚಿತ್ರರಂಗ ಕಂಡ ಅಪರೂಪದ ನಟ ಮತ್ತು ಕರ್ನಾಟಕದ ರಾಜಕಾರಣ ಕಂಡ ಅಪರೂಪದ ರಾಜಕಾರಣಿ.

ಮೂಲತಃ ತುಂಟನಾದ ಅಂಬರೀಷ್, ಯಾರ ಮಾತನ್ನೂ ಕೇಳದ, ಯಾರ ಮಾತನ್ನು ಕೇಳಿಸಿಕೊಳ್ಳದ ಚಂಚಲ ಪುರುಷ. ಆದರೂ ತನ್ನ ಕಾರ್ಯದ ಬಗ್ಗೆ ದೃಢತೆಯಿರುವ ತುಂಬು ಚೈತನ್ಯದ, ನೇರ ನಡೆನುಡಿಯ ವ್ಯಕ್ತಿ. ಅಂಬಿಯನ್ನು ಒಂದು ರೀತಿ ಲೋಕಾಭಿರಾಮದ ಧಾಟಿಯಲ್ಲಿ ಆಪ್ತತೆಯಿಂದ ಸಂದರ್ಶಿಸಿ, ಅವರ ಬಾಯಿಬಿಡಿಸಿದ ಅಪರೂಪದ ಸಂದರ್ಶನವಿದು.

• ಸಂದರ್ಶನ: ಬಿ.ಚಂದ್ರೇಗೌಡ ಮತ್ತು ಶ್ರೀನಿವಾಸ್ ಕರಿಯಪ್ಪ



# ಅಂಬರೀಷ್‌ಗೆ ಅರವತ್ತು

## ಒಂದು ಅಪರೂಪದ ಸಂದರ್ಶನ

*** ನಿಮ್ಮ ಅಜ್ಜ ಪಿಟೀಲು ಚೌಡಯ್ಯನವರ ಬಗ್ಗೆ ಹೇಳಿ.**

ಅಯ್ಯೋ, ಆಗ ನಾನಿನ್ನೂ ಚಿಕ್ಕವನು. ಆ ವಯಸ್ಸಲ್ಲಿ ನನಗೆ ಪಿಟೀಲು ಗಿಟೀಲು ಏನೂ ಗೊತ್ತಿರಲಿಲ್ಲ. ಅವರು ತೀರೋದಾಗ ಸಂಬಂಧಿಕರ ಮನೆಗೆ ಹೋಗಿ ಹೇಳಿ ಬರಕ್ಕೆ ಕಳಿಸಿದ್ರು. ನಾನು ಹೋಗಿ "ನಮ್ಮಜ್ಜ ತೀರೋದ್ರು" ಅಂತ ಹೇಳಿ ಬಂದಿದ್ದು ಗೊತ್ತಷ್ಟೆ. ನಾನು ಬೆಳೀತಾ ಹೋದಂಗೂ ಚೌಡಯ್ಯನವರ ಪಿಟೀಲು ಪಾಂಡಿತ್ಯದ ಬಗ್ಗೆ ಗೊತ್ತಾಗ್ತಾ ಹೋಯ್ತು. ಆಗ ಶಾಸ್ತ್ರೀಯ ಸಂಗೀತ ವಾದ್ಯಗಳ ಡಾಮಿನೇಷನ್ ಮದ್ರಾಸೇ ಆಗಿತ್ತಲ್ಲಪ್ಪ. ಆದ್ರು ಚೌಡಯ್ಯನೋರು ಕಾಡಿನಲ್ಲಿ – ಅಂದ್ರೆ ಬಹಳ ಒಳ್ಳೆ ಪರಿಸರದಲ್ಲಿ – ಕೂತಗೊಂಡು ನುಡಿಸೋರಂತೆ. ಆ ಪಿಟೀಲಿನ ವಿಶೇಷವಾದ ರಾಗ ದನಿಗೆ ಕೆಲವು ಕಾಡುಪ್ರಾಣಿಗಳು ಕಿವಿಗೊಟ್ಟು ಕೇಳಿಸಿಕೊಳ್ಳುತಿದ್ದವಂತೆ. ಅಂಗಂತ ಹೇಳತಿದ್ರು. ನನಿಗೇನೂ ಗೊತ್ತಿಲ್ಲ.

*** ಬಾಲ್ಯದ ಇನ್ಯಾವುದಾದರೂ ನೆನಪು ಇದ್ದರೆ ಹೇಳಿ?**

ನಮ್ಮಣ್ಣ ಭಾಳ ಕೋಪಿಷ್ಠ. ಅವುನು ಹೇಳಿದ ಕೂಡ್ಲೆ ನಾವು ಅವನ ಎಲ್ಲಾ ಕೆಲಸಾನೂ ಮಾಡಿಕೊಡಬೇಕು. ಒಂದ್ಸಾರಿ ಅವುನು 25 ಟರಲಿನ್ ಶರುಟು ಕೊಟ್ಟು "ಇವನ್ನ ಇಸ್ತ್ರಿ ಮಾಡಿಸಿಗಂಡು ಬಾ" ಅಂತ ಕೊಟ್ಟ. ಯಲ್ಲಾನು ಇಸ್ತ್ರಿ ಮಾಡಿಸಿಗಂಡು ಬರೋವತ್ತಿಗೆ ಎರಡೂವರೆ ಗಂಟೆ ಆಯ್ತು. ತಗಂಡೋದ್ರೆ "ಎಷ್ಟೊತ್ತೋ ಕಾಯೋದು" ಅಂತ ಜೋರು ಮಾಡಿದ. "ಮಗನೆ, ನಿನ್ನಂಗೆ ನಾನೂ ಈ ಮನೆ ಮಗ. ಹೆಚ್ಚಿಗೆ ಅಧಿಕಾರ ನಡಸಕ್ಕೆ ಬರಬ್ಯಾಡ, ಬೊಸುಡಿಕೆ' ಅಂತ ಬೈದು ಶರಟನೆಲ್ಲಾ ಯಸ್ದು ಹೋದೆ ಆತ್ಗೆ. ಅವತ್ತಿಂದ ಅದಿಮಿಕಂಡು ಸುಮ್ಮನಾದ.

*** ನಿಮ್ಮ ಓದಿನ ಬಗ್ಗೆ ಹೇಳಿ...**

ನಾನು ಒಳ್ಳೆ ಸ್ಟೂಡೆಂಟೆ ಆಗಿದ್ದೆ. ಚೆನ್ನಾಗಿ ಮಾರ್ಕನೂ ತಗೀತಿದ್ದೆ. ಮ್ಯಾಥ್‌ಮಾಟಿಕ್ಸ್‌ನಲ್ಲಂತೂ ಫಸ್ಟ್‌ಕ್ಲಾಸ್ ಬರತಿದ್ದೆ. ಆನಂತರ ಯಲ್ಲಾದ್ರಲ್ಲೂ 'ಎ' ಬರಕ್ಕೆ ಶುರುವಾಯ್ತು. 'ಎ' ಅಂದ್ರೆ ಪಸ್ಟಕ್ಲಾಸಲ್ಲ, ಆಬ್‌ಸೆಂಟು ಅಂತ! ನಮ್ಮ ತಂದೆ ಪ್ರಭಾವದಿಂದ ಹ್ಯಂಗೋ ಆರು ನಂಬರ್ ಪಕ್ಕಕ್ಕೆ ಒಂದು ಸೊನ್ನೆ ಹಾಕಿಸಿಕೊಂಡು ಪಾರಾದೆ ಅನ್ನಿ.

*** ನೀವು ಸಿನಿಮಾ ರಂಗಕ್ಕೆ ಬಂದದ್ದು ಹೇಗೆ?**

ಈ ಸಿನಿಮಾರಂಗದ ಬಗ್ಗೆ ನನಗೆ ಆಸಕ್ತೀನೇ ಇರಲಿಲ್ಲ. ಸಿನಿಮಾ ನೋಡದು ಬಿಟ್ರೆ ನಾನು ನಟ ಆಗ್ತಿನಿ ಅಂತ ಕನಸುಮನಸಲ್ಲೂ ಯೋಚನೆ ಮಾಡಿರಲಿಲ್ಲ. ಆಕ್ಟಿಂಗ್ ಬಂದ್ರೆ ತಾನೆ ಅಂತ ಯೋಚನೆ ಮಾಡದು! ಆದ್ರಿಂದ ಸುಮ್ಮನೆ ಓಡಾಡಿಕೊಂಡು ಇದ್ದೆ. ಆಗ ನನಿಗೆ ತುಂಬ ಕೋಪ ಇತ್ತು, ಅದರ ಎರಡು ಪರಸೆಂಟೂ ಈಗಿಲ್ಲ. ಯಾವನಾದ್ರು ದುರುಗುಟ್ಟ ನೋಡಿದ್ರೆ ಸಾಕು "ಯಾಕೊ ನಿನ್ನಕ್ಕನ್" ಅಂತ ಹೊಡೀತಿದ್ದೆ. ಅಂತ ಹುಂಬತನ ನನ್ನಲ್ಲಿತ್ತು. ಆದ್ರಿಂದ ನಮ್ಮ ಕೈಲಿ ಯಾವ ಸಾಧನೆನೂ ಆಗಲ್ಲ ಅಂತ ನನಿಗೆ ನಾನೇ ಅನ್ಕೊಂಡು ಆರಾಮಾಗಿದ್ದೊ.



ರಾಜೇಂದ್ರ ಸಿಂಗ್ ಬಾಬು ಅವುನಲ್ಲ, ಅವುನ ತಮ್ಮ ಸಂಗ್ರಾಮ ಸಿಂಗ್ ನನ್ನ ಗೆಳೆಯನಾಗಿದ್ದ. ಅವುನೊಂದು ಸತಿ "ಪುಟ್ಟಣ್ಣ ಕಣಗಾಲ್ ಸಿನುಮಾ ತಗೀತಿದಾರೆ. ಅದಕ್ಕಾಗಿ ಆಕ್ಟರ್‌ಗಳನ್ನ ಸೆಲೆಕ್ಟ್ ಮಾಡಕ್ಕೆ ಮೈಸೂರಿಗೆ ಬತ್ತಾ ಅವ್ರೆ. ಬಾ" ಅಂದ. "ಏ ಹೋಗೊ ಮಾರಾಯ. ನನಿಗ್ಯಾವ ಆಕ್ಟಿಂಗ್ ಬತ್ತದೆ. ನಾನು ಬರದಿಲ್ಲ" ಅಂತ ಹೇಳಿದೆ. ಆದ್ರೆ ಅವುನಾಗಲೇ "ಇಲ್ಲೊಬ್ಬ ನನ್ನ ಫ್ರೆಂಡವುನೆ. ಶತ್ರುಘ್ನ ಸಿನ್ಹಾ ಇದ್ದಂಗವುನೆ. ಕರಕೊಂಡು ಬತ್ತಿನಿ" ಅಂತ ಪುಟ್ಟಣ್ಣ ಕಣಗಾಲ್ ಅವರಿಗೆ ಹೇಳಿಬಂದಿದ್ದ. ನಾನು ಒಂಥರಾ ಬಲವಂತಕ್ಕೆ ಹೋದೆ.

ಸಂಗ್ರಾಮ್ ಸಿಂಗ್ ಕೊಟ್ಟಿದ್ದ ಜುಬ್ಬ ಪ್ಯಾಂಟಾಯ್ಕಂಡು ಹೋಗಿ, ಪುಟ್ಟಣ್ಣ ಹೇಳಿಕೊಟ್ಟ ಡೈಲಾಗೇಳಿ ಈ ಕಡೆಯಿಂದ ಆ ಕಡೆಗೋದೆ. ಸೆಲೆಕ್ಟ್ ಅಂದೇಬುಟ್ರು. ಆಗ್ಲೆ ಸ್ಟೈಲಾಗಿ ಸಿಗರೇಟು ಎಸಗೋಳದ್ನೆಲ್ಲಾ ಕಲ್ತಿದ್ದೆ. ಅದ್ನೂ ಮಾಡಿದೆ.

ಸಿನುಮಾ ರಿಲೀಜ್ ಆದಾಗ ನಾನೂ ಥಿಯೇಟರಿಗೋಗಿ ನೋಡಿದೆ. ಫಸ್ಟ್‌ಟೈಮ್ ಒಬ್ಬ ವಿಲನ್ ಬರುವಾಗ ಜನ ಚಪ್ಪಾಳೆ ಹೊಡದ್ರು. ಯಾಕೆ ಅಂದ್ರೆ ಅವ್ರೆಲ್ಲಾ ರಿಪೀಟ್ ಆಡಿಯನ್ಸ್. ಜಲೀಲನ ಸೈಕಲ್ ಚಕ್ರ ಕಾಣತಿದ್ದಂಗೆ ಸೀಟಿ ಹೊಡೆದ್ರು. ವೊಟ್ಟವೊದಲ ಬಾರಿಗೆ ಖಳನಾಯಕನಿಗೆ ಸೀಟಿ ತಗಂಡಿದ್ದು ನಾನೇ.

ಪುಟ್ಟಣ್ಣಾರು ನನ್ನನ್ನ, ವಿಷ್ಣುನ್ನ ಕರದು ಇಬ್ರು ಭುಜದ ಮೇಲೆ ಕೈಹಾಕಿ "ಮುಂದೆ ನೀವೇ ಹೀರೋಗಳು ಕರ್ನಾಟಕದಲ್ಲಿ, ನಿಮಗೆ ಒಳ್ಳೆ ಭವಿಷ್ಯ ಇದೆ" ಅಂದ್ರು.

*** ಪುಟ್ಟಣ್ಣ ಅವರು ತಮ್ಮ ಎಲ್ಲಾ ಸಿನಿಮಾಗಳಿಗೂ ನಿಮ್ಮನ್ನು ತಗೊಂಡ್ರಲ್ಲವಾ?**

ತಗೊಂಡ್ರು ಸರಿ. 'ಶುಭಮಂಗಳ' ಸಿನಿಮಾದಲ್ಲಿ ಮಾತೇ ಇಲ್ಲದ ಪಾತ್ರ ಕೊಟ್ಟಿದ್ರು. ಒಂದಿನ ಶೂಟಿಂಗಿಗೆ ಹೊರಡೋದು ಲೇಟಾಯ್ತು. ಕಾರನ್ನ ನೂರಾರು ಕಿಲೋಮೀಟರ್ ಸ್ಪೀಡಲ್ಲಿ ಓಡಿಸಿಗಂಡು ಶೂಟಿಂಗಿಗೆ ಹೋಯ್ತಾಯಿರಬೇಕಾದ್ರೆ ರಸ್ತೆಬದಿ ಜನಗಳು "ಥೂ" ಅಂತ ಬೈಯೋರು. ಅಂತ ರ್‍ಯಾಷ್ ಡ್ರೈವಿಂಗಲ್ಲಿ ಹೋಗಿದ್ದಕ್ಕೆ ಕಾರ್ ಟೈರ್ ಪಂಚರಾಯ್ತು. ಆದ್ರೂ ಓಡಿಸಿಕೊಂಡು ಹೋದೆ. "ಇಪ್ಪತ್ತು ಸಾವಿರ ಖರ್ಚಾಯ್ತದೆ ಕಾರಿಗೆ" ಅಂತ ಹೇಳಿದೆ. ಆಗ ಪುಟ್ಟಣ್ಣಾರು ತಮ್ಮ ಅಸಿಸ್ಟೆಂಟ್ ಡೈರಕ್ಟ್ರಿಗೆ "ನಾನು ಅವುನ ಕತೆ ಕೇಳಕ್ಕಲ್ಲ ಇರೋದು. ನನ್ನ ಕತೆ ತಂದು ಸಿನಿಮಾ ಮಾಡ್ತಾಯಿದ್ದಿನಿ ಅಂತ ಅವನಿಗೆ ಹೇಳು" ಅಂದ್ರು.

ಅವುರು ಸಿಟ್ಟು ಬಂದಾಗ ಆಕ್ಟರು ಜೊತೆ ಮಾತನೇ ಆಡ್ತಿರಲಿಲ್ಲ. ನಾನು ಹೋಗಿ ಮೀಸೆ ತಗೊಂಡು ಮುಖಕ್ಕೆ ಅಂಟಿಸಿಗಂಡು ಓಡಿದೆ. ಆ ಸಿನಿಮಾದಲ್ಲಿ ನನ್ನ ಕಾಸ್ಟೂಮು ಅಂದ್ರೆ ಅಂಗಿ, ಚೆಡ್ಡಿ, ಹೆಗಲ ಮೇಲೊಂದು ಟವಲ್ಲು ಇಷ್ಟೆ.

ಪುಟ್ಟಣ್ಣ ಎಷ್ಟು ನಿಷ್ಠುರಿ ಅಂದ್ರೆ ಅವುರು 'ಶುಭಮಂಗಳ'ದ ಟೈಮಲ್ಲಿ ಆರತಿನ ಲವ್ ಮಾಡ್ತಿದ್ರು. ಆ ಲವ್ವು ತುಂಬ ಪೀಕಲಿತ್ತು. ಅಂತ ಟೈಮಲ್ಲಿ ಒಂದು ದಿನ ಸನ್‌ಸೆಟ್ಟಲ್ಲಿ ಶೂಟ್ ಮಾಡಬೇಕಾಗಿತ್ತು. ಆರತಿ ದೂರದಲ್ಲಿದ್ರು. ಶಾಟ್ ಓಕೆ ಆಗಿರಲಿಲ್ಲ. ಆದ್ರು ಆರತಿ ವಿಗ್‌ನ ಹೇರ್‌ಪಿನ್ ಬಿಚ್ಚಿದ್ರು. ಅಷ್ಟೊತ್ತಿಗೆ ಶಾಟ್ ರೆಡಿ ಅಂತ ಪುಟ್ಟಣ್ಣ ಹೇಳಿದ್ರು. ಆಗ್ಲೆ ಆರತಿ ಹೇರ್‌ಪಿನ್ ತೆಗೆದು ವಿಗ್‌ನೂ ಬಿಚ್ಚಿದ್ದು ಗೊತ್ತಾಗಿಬುಡ್ತು, ಕೂಡ್ಲೆ ಪುಟ್ಟಣ್ಣ "ಮೇಕಪ್ಪು, ವಿಗ್ ತಗಿಯೋ ಜನ ಬೇರೆ. ಅದು ನಿನ್ನ ಕೆಲಸ ಅಲ್ಲ, ನೀನೇನಿದ್ರೂ ಆಕ್ಟಿಂಗ್ ಮಾಡಬೇಕು" ಅಂತ ರೇಗಿಬುಟ್ರು. 'ಈ ಶತಮಾನದ ಮಾದರಿ ಹೆಣ್ಣು' ಅಂತ ಹಾಡು ಬೇರೆ ಶೂಟಿಂಗ್ ಆಗಬೇಕು. ಆರತಿ ಅಳತನೆ ಶುರುಮಾಡೋರು. ಪುಟ್ಟಣ್ಣಾರಿಗೆ ತಲೆ ಕೆಟ್ಹೋಯ್ತು. ಆಗ ನಾನು "ಬನ್ನಿ ಸಾರ್" ಅಂತ ಕರಕಂಡೋದೆ. ಇಸ್ಪಿಟ್ಟಲ್ಲಿ ಕತ್ತೆ ಆಟ ಒಂದದೆ. ಆ ಆಟನ ಆಡಿಸಿ ಪುಟ್ಟಣ್ಣಾರನ್ನ ರಿಲ್ಯಾಕ್ಸ್ ಮಾಡಿಸಿ ಸರಿ ಮಾಡಿದೆ.


'ರಂಗನಾಯಕಿ'ಯಲ್ಲಿ...



ಪುಟ್ಟಣ್ಣನ ಇನ್ನೊಂದು ವಿಶೇಷ ಏನಂದ್ರೆ ಶಾಟ್ ಇರಲಿ, ಇಲ್ದೆಯಿರಲಿ ...ಲ್ಲಿ ಆಕ್ಟರುಗಳು ಅಲ್ಲೇ ಬದ್ದಿರಬೇಕು. ಆ ವಿಷಯದಲ್ಲವರು ಭಾಳ ಸ್ಟ್ರಿಕ್ಟು.

* ರಾಜ್‌ಕುಮಾರ್ ಮತ್ತು ನೀವು 'ಒಡಹುಟ್ಟಿದವರು' ಸಿನಿಮಾದಲ್ಲಿ ...ತೆಯಾಗಿ ನಟಿಸಿದ್ರಿ. ಆ ಅನುಭವದ ಬಗ್ಗೆ ಹೇಳಿ.

ಅಣ್ಣಾವರದು ಭಾಳ ದೊಡ್ಡ ವ್ಯಕ್ತಿತ್ವ. ನಾನು ಮತ್ತು ಅವರು 'ಒಡಹುಟ್ಟಿದವರು' ...ಮಾದ ಶೂಟಿಂಗ್‌ನಲ್ಲಿದ್ದಾಗ "ಅಣ್ಣಾವರ ಭಾಗ ಮೊದಲು ಶೂಟ್ ಮಾಡಿ. ... ಆಮೇಲೆ ಬತ್ತಿನಿ" ಅಂತ ಹೇಳಿದೆ. ಅದ್ಕೆ ಡೈರೆಕ್ಟರು "ಯಾವುದ್ಕೂ ...ಣ್ಣಾವರನ್ನ ಒಂದು ಮಾತು ಕೇಳಿ" ಅಂದ್ರು. ಆಗ ನಾನು "ಬಾಸ್, ಟುಮಾರೊ ...ಶ್ ಟೈಂ?" ಎಂದೆ. ಅಣ್ಣಾವರು ಮೇಕಪ್ ಮಾಡಿಕೊಳ್ಳುತ್ತಾ ಅದೇ ...ಲ್ಲಿ "ಎನಿ ಟೈಂ" ಅಂದ್ರು.

...ಆ ಚಿತ್ರದ ಕಟೌಟು, ಫ್ಲೆಕ್ಸ್‌ಗಳಲ್ಲಿ ಯಾವ ಕಾರಣಕ್ಕೂ ಅಣ್ಣಾವರ ಚಿತ್ರಕ್ಕಿಂತ ... ಚಿತ್ರ ಒಂದಿಂಚೂ ದೊಡ್ಡದಿರಬಾರದು ಅಂತ ಹೇಳಿದ್ದೆ. ಯಾಕೆಂದ್ರೆ ...ಜ್‌ಕುಮಾರ್ ವ್ಯಕ್ತಿತ್ವನೆ ಭಾಳ ದೊಡ್ಡದು.

...ಒಂದು ದಿನ ಅವರು ಮೇಕಪ್ ಮಾಡಿಕೊಳ್ತಾಯಿರುವಾಗ "ಅಂಬರೀಷ್,



ಜಲೀಲ್




... ಶೂಟಿಂಗಿಗೆ ಬಂದಕೂಡಲೇ ಎಲ್ಲರೂ ಅವರಿವರ ಬಗ್ಗೆ ತುಂಬಾ ... ಹೇಳ್ತರೆ. ಅಂತ ಚಾಡಿಗಳೆಲ್ಲಾ ನನ್ನ ಕಿವಿಯಿಂದ ಹಾಗೇ ಹೊರಟೋಗ್ತವೆ. ... ಒಳಗಡೆ ತಗೊಳಲ್ಲ. ಆದ್ರೆ ಯಾವತ್ತೂ ಯಾರೂ ಕೂಡ ನಿಮ್ಮ ಬಗ್ಗೆ ... ಹೇಳಿಲ್ಲವಲ್ಲಾ. ಒಂದು ಸಣ್ಣ ದೂರೂ ಬಂದಿಲ್ಲ" ಅಂತ ಹೇಳಿದ್ರು. ...ಷ್ಟೆ ಸಾಕಲ್ವಾ!

...ವೀರಪ್ಪನ್ ಅಣ್ಣಾವರನ್ನ ಕರಕಂಡೋದಾಗ ನಾವೆಲ್ಲಾ ಅಸಹಾಯಕರಾಗಿ ... ಸಂಕಟಪಟ್ವಿ. ಆದ್ರೆ ಅಣ್ಣಾ ಬಿಡುಗಡೆಯಾದಾಗ ಮೊಟ್ಟಮೊದಲು ...ತನಾಡಿದ್ದು ನನ್ನ ಜೊತೆ. ಶಂಕರ್ ಬಿದರಿಯವರು ಫೋನ್ ಕನೆಕ್ಟ್ ...ಡಿ "ರಾಜ್‌ಕುಮಾರ್ ಮಾತನಾಡ್ತರೆ, ಮಾತಾಡ್ಸಿ ಅಂಬರೀಷ್" ಅಂದ್ರು.



ಆದ್ರೆ ಅಣ್ಣಾವ್ರುರು ತಮ್ಮ ವಿಷಯಬಿಟ್ಟು "ಹೇಗಿದ್ದಿರಿ ಅಂಬರೀಷ್? ಸುಮಲತಾ ಹೇಗಿದ್ದಾರೆ?" ಅಂದ್ರು. ನಿಜಕ್ಕೂ ಕಣ್ಣಲ್ಲಿ ನೀರು ಬಂದ್ವೊ. ಆಮೇಲೆ "ಮಂಚೇಗೌಡ್ರು ಹೇಗಿದಾರೆ?" ಅಂದ್ರು. ಅದನ್ನು ಕೇಳಿ ನಾನು ದಂಗಾದೆ.

ಅದು ನಾನು ಯಾವಾಗ್ಲೊ ಅಣ್ಣಾವ್ರಿಗೆ ಹೇಳಿದ್ದ ಜೋಕು. ನನ್ನ ಮಗ ಹುಟ್ಟಿದಾಗ ಅವರಜ್ಜೆ "ಏನು ಹೇರು ಹೆಟ್ಟುಂಡಾವಪ್ಪ?" ಅಂತ ಪದೇಪದೇ ಕೇಳ್ತಿದ್ರು. ನಾನಿನ್ನೂ ನನ್ನ ಮಗನಿಗೆ ಹೆಸರಿಟ್ಟಿರಲಿಲ್ಲ, ಕೊನೆಗೆ ಬೇಜಾರಾಗಿ "ಮಂಚೇಗೌಡ ಅಂತ ಹೆಟ್ಟುಂಡಾನು, ಬಾಗುಂದಾ?" ಅಂದೆ. ಅದಕ್ಕವುರು "ಮಂಚೇಗೌಡ ಅಂಟೆ ಏಮೀ?" ಅಂದ್ರು. ಅದಕ್ಕೆ ನಾನು "ಮಂಚ ಅಂಟೆ ಬೆಡ್ಡು, ಗೌಡ ಅಂಟೆ ಕಿಂಗು. ಬೆಡ್‌ಕಿಂಗ್ ಅಂತ ಹೆಸರಿಟ್ಟಿದ್ದಿನಿ" ಅಂದೆ. ಈ ಜೋಕ್ ಅನ್ನು ಅಣ್ಣಾವರಿಗೆ ಹೇಳಿದಾಗ ಅವ್ರು ತುಂಬಾ ನಗಾಡಿದ್ರು. ಅದನ್ನು ಅವುರು ಜ್ಞಾಪಕ ಇಟ್ಕೊಂಡು ವೀರಪ್ಪನ್‌ನಿಂದ ಬಿಡುಗಡೆಯಾದ ಕಷ್ಟದ ಸಮಯದಲ್ಲೂ ಕೇಳಿದ್ರು.



ರಾಜ್‌ಕುಮಾರ್ ಅಂದ್ರೆ ನಮ್ಮಮ್ಮನಿಗೆ ತುಂಬಾ ಗೌರವ. ಅವರನ್ನ ನೋಡಬೇಕು, ಮಾತಾಡಿಸಬೇಕು ಅಂತ ಕೇಳ್ತಿದ್ಲು, ಒಂದು ಸಾರಿ ಟೌನಾಲಲ್ಲಿ ಕಾರ್ಯಕ್ರಮ ಇತ್ತು, ರಾಜ್‌ಕುಮಾರ್ ಕೂಡ ಅಲ್ಲಿಗೆ ಬಂದಿದ್ರು. ನಾನು ನಮ್ಮಮ್ಮನ ಜೊತೆ ಹೋಗಿ ಮುಂದಿನ ಸೀಟಿನಲ್ಲಿ ಕೂತುಕೊಂಡೆ. ಅಮ್ಮ "ಹೋಗಿ ರಾಜ್‌ಕುಮಾರ್ ಅವರನ್ನ ಮಾತಾಡ್ಸಿ ನಮಸ್ಕಾರ ಮಾಡು" ಅಂತ ಮತ್ತೆಮತ್ತೆ ಹೇಳ್ತಿದ್ಲು, ನನಗೆ ಬೇಜಾರಾಗಿ "ಏಯ್, ಸುಮ್ಮನೆ ಕೂತುಕೊ ನೀನು" ಅಂತ ಜೋರು ಮಾಡಿದೆ. ಅಷ್ಟರಲ್ಲಿ ಅಣ್ಣಾವರು "ಏನು ಅಂಬರೀಷ್, ಚೆನ್ನಾಗಿದ್ದೀರಾ" ಅಂತ ಮಾತಾಡಿಸಿದ್ರು. ತಗೊಳಪ್ಪ ಶುರುವಾಯ್ತು ನಮ್ಮಮ್ಮನ ಬೈಗುಳ. "ನೀನೆ ಮೊದ್ಲು ಅವರನ್ನ ಮಾತಾಡ್ಸಬೇಕಾಗಿತ್ತು" ಅಂತ ಮೈಸೂರುಗಂಟ ಬೋದ್ಲು, ನಾನ್ಯಾಕಪ್ಪ ಇವ್ಳ ಕರಕೊಂಡು ಬಂದೆ ಅನ್ನಂಗಾಯ್ತು.

* ರಾಜ್‌ಕುಮಾರ್ ಜೊತೆ ಸಿನಿಮಾ ಶೂಟಿಂಗ್ ಟೈಮಲ್ಲಿ ಯಾವ್ದಾದ್ರು ಸ್ವಾರಸ್ಯಕರ ಘಟನೆಗಳಿದ್ರೆ ಹೇಳಿ.

ಸ್ವಾರಸ್ಯ ಬೇಕಾದಷ್ಟವೆ. ಆದ್ರೆ ನನಿಗೆ ಹೇಳಕ್ಕೆ ಈಗ ಟೈಮಿಲ್ಲ, 'ಪಡುವಾರಳ್ಳಿ' ಶೂಟಿಂಗ್ ನಡೀವಾಗ 'ಗಂಡ ಬೇರುಂಡ' ಶೂಟಿಂಗ್ ಕೂಡ ನಡೀತಿತ್ತು, ಅದೂ ಕುದುರೆಮುಖದಲ್ಲಿ, ಇಲ್ಲೂ ಶೂಟಿಂಗಲ್ಲಿ ಇರಬೇಕು, ಅಲ್ಲಿಗೂ ಹೋಗಬೇಕಾದ ಪರಿಸ್ಥಿತಿ ಬಂತು. ಪುಟ್ಟಣ್ಣನವರನ್ನ ಕೇಳೊ ಧೈರ್ಯ ಇರಲಿಲ್ಲ, ಆದ್ರು ಕೇಳಿಕೊಂಡು "ಕರೆಕ್ಟ್ ಟೈಮಿಗೆ ಬತ್ತಿನಿ ಸಾರ್" ಅಂತ ಹೇಳಿ ಕುದುರೆಮುಖಕ್ಕೆ ಶೂಟಿಂಗಿಗೆ ಹೋದೆ. ಅಲ್ಲಿಗೆ ಹೋದ ಕೂಡ್ಲೆ ನನ್ನ ತಂದೆ ತೀರೋಗಿದಾರೆ ಅಂತ ಫೋನ್ ಬಂತು. ನಿರ್ದೇಶಕರು ಕಳಿಸಿಕೊಟ್ರು. ಇಡೀ ರಾತ್ರಿ ಡ್ರೈವ್ ಮಾಡಿಕೊಂಡು ಬಂದೆ. ತಂದೆಯ ಅಂತ್ಯಸಂಸ್ಕಾರ ಮುಗದ ಮೇಲೆ ರೂಮಿಗೋಗಿ ಕೂತುಕೊಂಡು ಸಿಗರೇಟ್ ಸೇತ್ತಾಯಿದ್ದೆ. ಆಗ ನಮ್ಮಮ್ಮ ಬಂದು "ನೀನು ಶೂಟಿಂಗಿಗೆ ಹೋಗಪ್ಪ ಪಾಪ ಸಿನಿಮಾ ತಗಿಯೋರು ದುಡ್ಡಾಕಿರತರೆ. ಅವುರಿಗೆ ನಿನ್ನಿಂದ ನಷ್ಟ ಆಗೋದು ಬೇಡ" ಅಂದ್ಲು.

ನಮ್ಮಮ್ಮ ಅಂತ ವಿದ್ಯಾವಂತೆ ಆಗಿರಲಿಲ್ಲ, ಆದ್ರು ಭಾಳ ವಿವೇಕದಿಂದ ನಡಕೊಳತಿದ್ರು. ನಾನು ಕೂಡ್ಲೆ ಇಪ್ಪತ್ತೈದು ಸಾವಿರ ಅವರಿಗೆ ಕೊಟ್ಟು "ಅಪ್ಪನ ತಿಥಿ ಮಾಡಿಬುಡಮ್ಮ" ಅಂತ ಹೇಳಿ ಬಂದಷ್ಟೇ ವೇಗವಾಗಿ ಕುದುರೆಮುಖಕ್ಕೆ ಹೋಗಿ 'ಗಂಡಬೇರುಂಡ' ಚಿತ್ರದ ಶೂಟಿಂಗಲ್ಲಿ ಭಾಗವಹಿಸಿದೆ. ಇತ್ತ ಪುಟ್ಟಣ್ಣನವರೂ ನನ್ನ ಕಷ್ಟಕಾಲದಲ್ಲಿ ಧೈರ್ಯ ತುಂಬಿ ಸಹಕರಿಸಿದ್ರು.

'ಗಂಡ ಬೇರುಂಡ' ಶೂಟಿಂಗಿಗೆ ಎರಡು ಹುಲಿ ತರಿಸಿದ್ರು. ಹುಲಿ ಮೇಲೆ ಫೈಟ್ ಮಾಡಬೇಕಾಗಿತ್ತು, ಆ ಹುಲಿ ನೋಡಿದ್ರೆ ಭಯ ಆಗೋದು. ಏನಪ್ಪ ಇದು ಗ್ರಾಚಾರ ಅಂತ ಹೆದ್ರಿಕೊಂಡೆ ಅತ್ಯಕ್ಕೋದ್ರೆ ಆ ನನಮಗನವು ಗುರ್ ಅಂತ ಗುಟುರಾಕಿದ್ರೊ. ಯಂಗಪ್ಪ ಹುಲಿ ಜೊತೆ ಫೈಟ್ ಮಾಡದು ಅಂತ ಇಡೀ ದಿನ ಯೋಚನೆ ಮಾಡ್ತ ಆ ದಿನ ಶೂಟಿಂಗನೇ ಮಾಡಕ್ಕಾಗಲಿಲ್ಲ, ಮನಿಕಂಡ್ರೆ ಹುಲಿ ಗುರುಗುಡೋ ಶಬ್ದನೇ ಕೇಳದು.

ಮರುದಿನ ಹುಲಿಯ ನಾಲ್ಕು ಕಾಲುನೂ ಹಿಡುಕಟ್ಟಿ, ಅದಕ್ಕೆ ಹೊಟ್ಟೆ ತುಂಬ ತಿನ್ನಿಸಿ, ಬಾಯಿ ಹೊಲ್ದು ಹದಿನಾರು ಜನ ಹೊತಗಂಡು ಬಂದ್ರು. ಆದರ ಬಾಯಿ ಹೊಲ್ದಿದ್ದೊನೂ ಪಕ್ಕದಲ್ಲಿ ಪಾಸಾದ ಕೂಡ್ಲೆ ಹುಲಿ ಕೊಡವಿದೇಟಗೆ ಹದಿನಾರು ಜನಾನೂ ಚೆಲ್ಲಾಪಿಲ್ಲಿಯಾದ್ರು. ಯಂಗಪ್ಪಾ ಇಂತ ಹುಲಿ ಜೊತೆ ಹೋರಾಡ್ಲಿ ಅಂತ ನಾನು ಮತ್ತು ಶ್ರೀನಾಥ ಯೋಚನೆ ಮಾಡುವಾಗ ಒಂದು ಉಪಾಯ ಹೊಳೀತು. 'ಮಾ' ಎಂಬ ಹಿಂದಿ ಚಿತ್ರದಲ್ಲಿ ಧರ್ಮೇಂದ್ರ ಕುಡುಕೊಂಡು ಹುಲಿ ಜೊತೆ ಫೈಟ್ ಮಾಡಿದ್ದು ನೆನಪಾಯ್ತು, ಕೂಡ್ಲೆ ನಾನು "ಡ್ರಿಂಕ್ಸ್ ಮಾಡಿ ಫೈಟ್ ಮಾಡ್ತಿನಿ" ಅಂದೆ. ಶ್ರೀನಾಥನ ಹೆಂಡ್ತಿ "ನಮ್ಮೆಜಮಾನ್ರಿಗೆ ಕುಡಸಬೇಡಿ" ಅಂದ್ರು. "ನಿನ್ನ ಗಂಡನಿಗೆ ಯಾರು ಕುಡುಸ್ತಾರೆ. ನನ್ನಷ್ಟಕ್ಕೆ ನಾನು ಕುಡಕಂಡು ಫೈಟ್ ಮಾಡ್ತಿನಿ ಹೋಗಮ್ಮ" ಅಂದೆ. ಆಮ್ಯಾಲೆ ಡ್ರಿಂಕ್ ತರಿಸಿ, ಒಂದು ಮೂರು ಪೆಗ್ ಹಾಕಿ ತಯಾರಾಗ್ತಯಿರುವಾಗ ಶ್ರೀನಾಥ ಬಂದ. ನನಿಗೆ ಅಂತ ಮಡಗಿದ್ದ ಗ್ಲಾಸನ್ನು ಖಾಲಿ ಮಾಡಿ ಹೋಗೇಬುಟ್ಟ.

ಅವನು ಹೋದ ಕೂಡ್ಲೆ ಹೊರಗೆ ಜನಗಳು ಕೇಕೆ ಹಾಕದು, ಸೀಟಿ ಹೊಡೆಯೋದು ಕೇಳ್ತು, ನಾನು ಇದೇನಾಯ್ತಪ್ಪ ಅಂತ ಹೋಗಿ ನೋಡ್ತಿನಿ, ಶ್ರೀನಾಥ ನಾಯಿ ತಲೆ ಸವರಿದಂಗೆ ಹುಲಿಯ ತುರುಸ್ತ ಕುಂತಿದ್ದ. "ಬಾರಮ್ಮ ಬಾ" ಅಂತ ಶ್ರೀನಾಥ ನನ್ನನ್ನ ಕರದ. ನನಿಗೆ ಎಲ್ಲಿತ್ತೊ ಏನೊ, ಹುಲಿ ಪೌರುಷನೆ ಮೈಮೇಲೆ ಬಂದಂಗಾಗಿ "ಬಿಡೊ ನಿನ್ನ ಹುಲಿಯ" ಅಂದೆ. ಹುಲಿ ಎಗರಿದೇಟಿಗೆ ಆದಕ್ಕೆ ಗುದ್ದಿ, ಗುದ್ದಿ ಕತ್ತುಹಿಸುಕಿ ಬಿಸಾಕಿದೆ. ಆದ್ರು ಬೆನ್ನ ಮೇಲೆ ಸರಿಯಾದ ಏಟು ಬಿದ್ದಿತ್ತು, ಶ್ರೀನಾಥನಿಗೆ ಏನಾದ್ರು ಏಟು ಬಿದ್ದಿದಿಯಾ ಅಂತ ಕೇಳಿದೆ. "ಏ ನನಿಗೇನು ಬಿದ್ದಿಲ್ಲಾ" ಅಂತ ಹೇಳಿದ. ಆದ್ರೆ ರಷ್ ನೋಡ್ತಿನೀ, ಅವ್ನನ್ನ ಹಿಡಕೊಂಡು ಸರಿಯಾಗಿ ಬಾರಿಸಿತ್ತು ಹುಲಿ. ಅದ ನೋಡಿ ನಕ್ಕೂ, ನಕ್ಕೂ ಸುಸ್ತಾದ್ರೊ. ನಾನಂತೂ ಚೇರಿಂದ ಕೆಳಗೆ ಬಿದ್ದು ಕುಂತಿದ್ದೆ. ಅಷ್ಟು ನಗು ಬಂದಿತ್ತು.

ಕೈಯಲ್ಲಿ ಗಾಲ್ಫ್ ಸ್ಟಿಕ್ ಹಿಡಿದಾಗ

* ನೀವು 'ರಂಗನಾಯಕಿ' ಚಿತ್ರದಲ್ಲಿ ತುಂಬಾ ಚೆನ್ನಾಗಿ ನಟಿಸಿದ್ದೀರಿ. ಅದರಲ್ಲೂ ಕನ್ನಡ ನಾಡಿನ ಹಾಡು ತುಂಬಾ ಚೆನ್ನಾಗಿದೆ.

ಹೌದು, ನನಗೂ ಮೆಚ್ಚುಗೆ ಆಗಿರೊ ಪಾತ್ರ ಅದು. ಪುಟ್ಟಣ್ಣನಂಥವರಿಂದ ಮಾತ್ರ ಅಂತ ಚಿತ್ರ ತಗಿಯಕ್ಕೆ ಸಾಧ್ಯ. ಆದರಲ್ಲಿ ತಾಯಿ ಮಗನನ್ನೇ ಲವ್

▶12









# ಗನ್ ರನ್ನರ್ ಟಿಸ್ಯಾ ಜೊತೆ ಹೆಬ್ಬೆಟ್ ಮಂಜನ ದೋಸ್ತಿ

ಪೊಲೀಸರಿಗೆ ಮಾಹಿತಿದಾರನಾಗಿ ಕೆಲಸ ಮಾಡುತ್ತಿದ್ದ ಜೊತೆಗೆ ಧಾರವಾಡ, ಬೆಳಗಾಂ, ಬಾಗಲಕೋಟೆ ಸೇರಿದಂತೆ ಹಲವಾರು ಜಿಲ್ಲೆಗಳಲ್ಲಿ ಅಕ್ರಮವಾಗಿ ಪಿಸ್ತೂಲು ಮಾರಾಟ ಮಾಡುತ್ತಿದ್ದ ವಿಶ್ವನಾಥ ಕರಡಿಗುಡ್ಡ ಅಲಿಯಾಸ್ ಟಿಸ್ಯಾನನ್ನು ಹುಬ್ಬಳ್ಳಿ ಪೊಲೀಸರು ಇತ್ತೀಚೆಗೆ ಬಂಧಿಸಿದ್ದಾರೆ. ಟಿಸ್ಯಾನ ಜೊತೆಗೆ ಆತನ ಗ್ಯಾಂಗಿನಲ್ಲಿದ್ದ ಹಲವಾರು ಕ್ರಿಮಿನಲ್‌ಗಳೂ ಈಗ ಜೈಲು ಸೇರಿದ್ದಾರೆ.

ಪೊಲೀಸರಿಗೆ ಮಾಹಿತಿದಾರನಾಗಿದ್ದವನೇ ಓರ್ವ ದೊಡ್ಡ ಕ್ರಿಮಿನಲ್ ಆಗಿದ್ದ ಎಂದರೆ ಇಲ್ಲಿಯ ಪೊಲೀಸರ ಕಾರ್ಯದಕ್ಷತೆ ಎಂತಹದ್ದಿರಬೇಕೆಂದು ಸುಲಭವಾಗಿ ಊಹಿಸಬಹುದು! ಅದಕ್ಕೆ ಕಾರಣ ಟಿಸ್ಯಾನ ಅವ್ಯವಹಾರದಿಂದ ಬರುತ್ತಿದ್ದ ಆಮದನಿಯಲ್ಲಿ ಪೊಲೀಸರಿಗೂ ಪಾಲಿತ್ತು ಎಂಬುದು ಬಹಿರಂಗ ಸತ್ಯ!



## ಜೈಲೇ ಕ್ರಿಮಿನಲ್‌ಗಳ ಶಾಲೆ

ಹುಬ್ಬಳ್ಳಿಯಲ್ಲಿರುವ ಸಬ್‌ಜೈಲು ಮತ್ತು ಧಾರವಾಡದಲ್ಲಿರುವ ಜಿಲ್ಲಾ ಕಾರಗೃಹ ಇವತ್ತು ಕ್ರಿಮಿನಲ್‌ಗಳನ್ನು ತಯಾರು ಮಾಡುವ ಅಡ್ಡೆಗಳಾಗಿಬಿಟ್ಟಿವೆ. ಒಂದು ವರ್ಷದ ಹಿಂದೆ ಹುಬ್ಬಳ್ಳಿಯ ಸಬ್‌ಜೈಲಿನಲ್ಲಿ ರೌಡಿ ಪಲ್ಲಿ ಹತ್ಯೆಯ ಆರೋಪಿಗಳು ಇತರೆ ಕೈದಿಗಳ ಜೊತೆಗೂಡಿ ದಂಗೆ ಎದ್ದು ಇಡೀ ಜೈಲನ್ನೇ ಧ್ವಂಸ ಮಾಡಿ ಪರಾರಿ ಆಗಲು ಯತ್ನಿಸಿದ್ದರು. ಅದೇರೀತಿ ಧಾರವಾಡ ಜಿಲ್ಲಾ ಕಾರಾಗೃಹವೂ ಇವತ್ತು ಮಹಾಪಾತಕ ಹೆಬ್ಬೆಟ್ ಮಂಜನ ಕಾರ್ಯಕ್ಷೇತ್ರವಾಗಿದೆ. ಜೈಲಿನಲ್ಲಿರುವ ಇತರರನ್ನು ತನ್ನ ಅಗತ್ಯಕ್ಕೆ ತಕ್ಕಂತೆ ಪಳಗಿಸುವ ಮಂಜ ಅವರನ್ನು ಜಾಮೀನು ಕೊಡಿಸಿ ಕಳಿಸುವ ವ್ಯವಸ್ಥೆ ಮಾಡುತ್ತಾನಲ್ಲದೆ, ಅವರನ್ನೆಲ್ಲ ತನ್ನ ದಂಧೆಗೆ ಉಪಯೋಗಿಸಿಕೊಂಡು ಜೈಲಿನಿಂದಲೇ ತನ್ನ ಕ್ರಿಮಿನಲ್ ದಂಧೆಯನ್ನು ರಿಮೋಟ್ ಕಂಟ್ರೋಲ್ ಮಾಡುತ್ತಿದ್ದಾನೆ. ಇಂತಹ ಮಂಜನಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಜೈಲಿನ ಸಿಬ್ಬಂದಿಯೇ ಒದಗಿಸುತ್ತಿದೆ. ಧಾರವಾಡ ಕಾರಾಗೃಹದ ಮೇಲೆ ಪೊಲೀಸರು ರೇಡ್ ಮಾಡಿ ದಾಗೆಲ್ಲಾ ಮೊಬೈಲ್, ಗಾಂಜಾ, ಮಾದಕ ವಸ್ತುಗಳು, ಮಾರಕಾಸ್ತ್ರಗಳು ಸಿಕ್ಕಿವೆ. ಆದರೂ ಕಾರಾಗೃಹದ ಸಿಬ್ಬಂದಿ ಮೇಲೆ ಯಾರೂ ಕ್ರಮ ಕೈಗೊಂಡಿಲ್ಲ.

ಇವತ್ತು ಶಸ್ತ್ರಾಸ್ತ್ರ ಕಳ್ಳ ಸಾಗಣೆ ಪ್ರಕರಣದಲ್ಲಿ ಮೊದಲನೇ ಆರೋಪಿ ಆಗಿರುವ ಟಿಸ್ಯಾ ಈ ದಂಧೆಯನ್ನು ಕಲಿತದ್ದೇ ಹೆಬ್ಬೆಟ್ ಮಂಜನಿಂದ. ಈ ಹಿಂದೆ ದರೋಡೆ, ಸರಗಳ್ಳತನ, ಕಳವು, ಖೋಟಾನೋಟು ಸರಬರಾಜು ಇತ್ಯಾದಿ ಕೇಸುಗಳಲ್ಲಿ ಸಿಲುಕಿಕೊಂಡಿದ್ದ ಟಿಸ್ಯಾನನ್ನು ಮೂರು ವರ್ಷಗಳ ಕಾಲ ಧಾರವಾಡದ ಜೈಲಿನಲ್ಲಿ ಬಂಧಿಸಿಡಲಾಗಿತ್ತು. ಅದೇ ಹೊತ್ತಿಗೆ ಮೊಂಬ ಗ್ರಾಮದವನಾದ ಕಲ್ಲಪ್ಪ ಕಳವಾಯಿ ಎಂಬಾತನೂ ಜೈಲಿನಲ್ಲಿದ್ದ. ಈತ ಹುಬ್ಬಳ್ಳಿಯ ವಿದ್ಯಾನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಕೊಲೆ ಮಾಡಿದ್ದಕ್ಕೆ ಅವನನ್ನು ಬಂಧಿಸಲಾಗಿತ್ತು. ಅಷ್ಟೇ ಅಲ್ಲದೆ, ಕಾರವಾರದ ಮಂಜುನಾಥ ಹರಿಕಂತ, ಹುಬ್ಬಳ್ಳಿಯ ಹೇಮಂತನಗರದ ಪ್ರವೀಣ ಕೆಂಗಡಿ ಎಂಬ ಇಬ್ಬರು ಕ್ರಿಮಿನಲ್‌ಗಳೂ ಅದೇ ಹೊತ್ತಿಗೆ ಜೈಲುಪಾಲಾಗಿದ್ದರು. ಇವರೆಲ್ಲರೂ ಜೈಲಿನಲ್ಲೇ ಹೆಬ್ಬೆಟ್ ಮಂಜನಿಂದ ಅಕ್ರಮ ಶಸ್ತ್ರಾಸ್ತ್ರಗಳ ಮಾರಾಟದ ಬಗ್ಗೆ 'ಮಾರ್ಗದರ್ಶನ' ಪಡೆದರು.

## ಕ್ರಿಮಿನಲ್‌ಗಳ ಪೊಲಿಟಿಕಲ್ ಲಿಂಕ್

ಟಿಸ್ಯಾನಿಗೆ ಬಜೆಪಿ ಪಕ್ಷದೊಂದಿಗೆ ಗೆಳೆತನ ಇದೆ. ಹಾಗೆಯೇ ಕೊಲೆಗಡುಕ ಕಲ್ಲಪ್ಪ ದಳವಾಯಿಗೆ ಜೆಡಿಎಸ್ ಪಕ್ಷದೊಂದಿಗೆ ಲಿಂಕ್‌ಗಳಿವೆ. ಎಪಿಎಂಸಿ ಸದಸ್ಯನಾಗಿರುವ ಶಿವಾನಂದ ಶಾರಿಗಾರನ ಸಹೋದರ ಹನುಮಂತ ಶಾರಿಗಾರನ ಜೊತೆ ಕಲ್ಲಪ್ಪ ದಳವಾಯಿ ರಿಯಲ್ ಎಸ್ಟೇಟ್ ದಂಧೆಯನ್ನು ನಡೆಸುತ್ತಿದ್ದಾನೆ. ಹುಬ್ಬಳ್ಳಿ ತಾಲೂಕಿನ ಹಳ್ಳಿಗಳಲ್ಲಿ ವ್ಯಾಜ್ಯವಿರುವ ಹೊಲಗಳನ್ನು ಗುರುತು ಹಚ್ಚಿ ಅವುಗಳನ್ನು ಕಡಿಮೆ ರೇಟಿಗೆ ಖರೀದಿಸಿ ಆನಂತರ ಹೆಚ್ಚಿನ ದರಕ್ಕೆ ಮಾರುವ ಈ ದಂಧೆ ಕಳೆದ ನಾಲ್ಕು ವರ್ಷಗಳಿಂದ ನಡೆಯುತ್ತಿದೆ. ಇದರ ಪರಿಣಾಮವಾಗಿಯೇ ಈ ಹಿಂದೆ ಕೈಯಲ್ಲಿ ಚಕ್ಕಾಸೂ ಇಲ್ಲದಿದ್ದ ಶಿವಾನಂದ ಶಾರಿಗಾರ ಇವತ್ತು ಕೋಟಿ ಲೆಕ್ಕದಲ್ಲಿ ತೂಗುತ್ತಿದ್ದಾನೆ. ಅಷ್ಟೇ ಅಲ್ಲ, ಮುಂಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಥವಾ ಕಾಂಗ್ರೆಸ್ ಪಕ್ಷದಿಂದ ನವಲಗುಂದ ಕ್ಷೇತ್ರಕ್ಕೆ ಟಿಕೆಟ್ ಪಡೆದು ವಿಧಾನಸೌಧದ ಮೆಟ್ಟಲನ್ನು ಹತ್ತುವ ಕನಸು ಕಾಣುತ್ತಿದ್ದಾನೆ.

ಈಗ ಟಿಸ್ಯಾನೊಂದಿಗೆ ಬಂಧನಕ್ಕೊಳಗಾಗಿರುವ ಹುಬ್ಬಳ್ಳಿಯ ರಾಮನಗರದ ಸಂತೋಷ ಚಲವಾದಿ ಎಂಬಾತನಿಗೆ ಬಿಜೆಪಿಯ ಸಖ್ಯ ಇದೆ. ಈ ಹಿಂದೆ ಕಾಂಗ್ರೆಸ್ ಮುಖಂಡ ಗುರುನಾಥ ಗಾಣದಾಳ ಎಂಬುವವರನ್ನು ಸಂತೋಷ್ ಚಲವಾದಿ ಕೊಲೆ ಮಾಡಿದ್ದಕ್ಕೆ ಆತನನ್ನು ಅರೆಸ್ಟ್ ಮಾಡಲಾಗಿತ್ತು. ಹುಬ್ಬಳ್ಳಿಯ ಹೊಸೂರಿನ ಯುವತಿ ಶೃತಿಯನ್ನು ಅಪಹರಿಸಿಕೊಂಡು ಹೋಗಿ ಮದುವೆಯಾಗಿದ್ದ ಸಂತೋಷ್ ಕೊಲೆ ಆರೋಪದಲ್ಲಿ ಖುಲಾಸೆಗೊಂಡು ಬಂದ ನಂತರ ಟಿಸ್ಯಾನ ಶಸ್ತ್ರಾಸ್ತ್ರ ಗ್ಯಾಂಗಿನ ಭಾಗವಾಗಿದ್ದ. ಈತ ಕೊಲೆ ಮಾಡಿದ್ದ ಗಾಣದಾಳ ಅವರ ಕುಟುಂಬದ ಸದಸ್ಯರು ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡಿರುವುದರಿಂದ ಕೊಲೆಗಾರ ಸಂತೋಷ್ ಬಜೆಪಿಯೊಂದಿಗೆ ಗುರುತಿಸಿಕೊಂಡಿದ್ದಾನೆ.



## ಅಕ್ರಮ ಪಿಸ್ತೂಲ್ ಹಾಗೂ ನಕಲಿ ನೋಟು

ಪಶ್ಚಿಮ ಬಂಗಾಳದ ಹೌರಾದಿಂದ ಕೇವಲ ಹತ್ತು ಸಾವಿರ ರೂಪಾಯಿಗೆ ಸಿಗುವ ಪಿಸ್ತೂಲುಗಳು ಮಾರಾಟವಾಗುವುದು ಒಂದರಿಂದ ಒಂದೂವರೇ ಲಕ್ಷ ರೂಪಾಯಿಗಳಿಗೆ. ಜೊತೆಗೆ ಒಂದು ಅಸಲಿ ನೋಟು, ಎರಡು ನಕಲಿ ನೋಟು ನೀಡುವ. ಈ ಮರ್ಮವನ್ನು ಹೇಳಿಕೊಟ್ಟದ್ದೇ ಹೆಬ್ಬೆಟ್ ಮಂಜ. ಆದರಲ್ಲಿ ತನ್ನ ಪಾಲನ್ನು ಜೈಲಿನಲ್ಲಿ ಇದ್ದುಕೊಂಡೇ ಪಡೆಯುತ್ತಿದ್ದಾನೆ. ಮೊದಮೊದಲು ಪೊಲೀಸರ ಮಾಹಿತಿದಾರನಾಗಿ ಕೆಲಸ ಮಾಡುತ್ತಿದ್ದ ಟಿಸ್ಯಾನಿಗೆ ಪೊಲೀಸರು ಹಾಕುತ್ತಿದ್ದ ಪುಡಿಗಾಸು ಬೇಡವಾಗಿತ್ತು. ಮತ್ತೊಂದೆಡೆ ಇದೇ ಪೊಲೀಸರು ಯಾವ್ಯಾವುದೋ ಪ್ರಕರಣದಲ್ಲಿ ಬಂಧಿಸಿ ಜೈಲಿಗೆ ಅಟ್ಟುವುದು ತಪ್ಪುತ್ತಿರಲಿಲ್ಲ. ಇದರಿಂದ ಬೇಸರಗೊಂಡಿದ್ದ ಟಿಸ್ಯಾಗೇ ಜೈಲಿನಲ್ಲಿ ಹೆಬ್ಬೆಟ್ ಮಂಜನ ಈ ಹೊಸ ಕಸುಬು ಇಷ್ಟವಾಗಿತ್ತು.

ಜೈಲಿನಲ್ಲಿದ್ದ ಟಿಸ್ಯಾ ಹೊರಬಂದ ಕೂಡಲೇ ಹುಬ್ಬಳ್ಳಿಯ ಗಣೇಶನಗರದ ಪ್ರಶಾಂತ ಬಡಿಗೇರ, ಹೇಮಂತನಗರದ ಪ್ರವೀಣ ಅಂಗಡಿ ಜೊತೆಗೂಡಿ ಪಿಸ್ತೂಲು ಖರೀದಿ ಮಾರಾಟದಲ್ಲಿ ತೊಡಗಿದ್ದ. ಇದರೊಂದಿಗೇ ತರುತ್ತಿದ್ದ ಖೋಟಾನೋಟು ಚಲಾವಣೆಗೊಳಿಸಲು ಸಂಗಮ ಕಾಲೋನಿಯ ರಾಕೇಶ ಬದ್ಧಿ, ಜಿ ಅಡ್ಡಾದ ಕುಶಾಲ ಹಬೀಬನನ್ನು ನೇಮಿಸಿಕೊಂಡಿದ್ದ. ಪ.ಬಂಗಾಳದ ಹೌರಾದ ಜಿನ್ನಾ ಎಂಬುವವನಿಂದ ತಿಂಗಳಿಗೆ ಒಮ್ಮೆ 4-5 ಪಿಸ್ತೂಲು ಖರೀದಿಸುತ್ತಿದ್ದ ಟಿಸ್ಯಾ ಅದನ್ನು ಕೊಲೆ ಆರೋಪದಲ್ಲಿ ಸಿಲುಕಿಕೊಂಡಿದ್ದ ಕುಖ್ಯಾತ ರೌಡಿಗಳಾದ ಮೊರಬ ಗ್ರಾಮದ ಕಲ್ಲಪ್ಪ ದಳವಾಯಿ, ರಾಮನಗರದ ಸಂತೋಷ ಚಲವಾದಿಗೆ ಮಾರಿದ್ದ. ಇದಲ್ಲದೇ ಇದೇ ತಂಡದಲ್ಲಿದ್ದ ಕಾರವಾರದ ಮಂಜುನಾಥ, ರಾಮದುರ್ಗದ ಪ್ರಶಾಂತ, ಬೆಂಗಳೂರಿನ ರಘು ಮೂಲಕ ಯಾರ್ಯಾರಿಗೆ ಮಾರಿದ್ದಾರೆ ಅನ್ನುವುದರ ಬಗ್ಗೆ ಟಿಸ್ಯಾನೇ ಬಾಯಿ ಬಿಡಬೇಕು.

## ಗ್ಯಾಂಗ್ ವಿರುದ್ಧ ಕೆಲಸ ಮಾಡಿದಾತ ಖತಂ

ಈ ಗುಂಪಿನಲ್ಲಿದ್ದ ಪ್ರವೀಣ ಹಿರೇಹಾಳಮಠ ಎನ್ನುವವನು "ಹಣ ಸರಿಯಾಗಿ ಹಂಚಿಕೆ ಆಗಬೇಕು. ಇಲ್ಲವೇ ಪೊಲೀಸರಿಗೆ ತಿಳಿಸುತ್ತೇನೆ" ಅಂದಿದ್ದೇ ತಡ, ಅವನಿಗೇ ಟಿಸ್ಯಾ ಗ್ಯಾಂಗ್ ಕಂಠಮಟ್ಟ ಕುಡಿಸಿ ಕಾರವಾರ ರಸ್ತೆಯಲ್ಲಿರುವ ರೇವಡಿಹಾಳ ಕೋಳಿ ಫಾರಂ ಹತ್ತಿರ ಕರೆದೊಯ್ದು ಕೊಲೆ ಮಾಡಿ ಕೊನೆಗೆ ಸುಟ್ಟು ಹಾಕಿಬಿಟ್ಟಿತು. ಅಲ್ಲಿಗೆ ದೋಸ್ತಿ ಖತಂ. ಈಗ ಟಿಸ್ಯಾ, ಪ್ರಶಾಂತ್ ಲಕ್ಷ್ಮಣ್, ಯಲ್ಲಪ್ಪ ಅಂಗಡಿ, ರಾಕೇಶ್ ರಾಜಪ್ಪ ಕುಶಾಲ್ ಮೋಹನ್‌ಸಾ, ಹಬೀಬ್ ಜೈಲು ಪಾಲಾಗಿದ್ದಾರೆ. ಇವರು ಈಗ ಪೊಲೀಸರ ಕೈಗೆ ಸಿಗದೇ ಹೋಗದಿದ್ದರೆ ದೊಡ್ಡ ಅನಾಹುತಕಾರಿ ಕ್ರಿಮಿನಲ್‌ಗಳಾಗಿ ಬೆಳೆದುಬಿಡುತ್ತಿದ್ದರು.

• ವರದಿಗಾರ


# ಅಂಬರೀಷ್‌ಗೆ ಅರವತ್ತು



ಮಾಡ್ತಳೆ. ಮಗನೂ ತಾಯಿನ ಲವ್ ಮಾಡ್ತನೆ. ಆದರೆ ಆ ಪ್ರೇಮದ ಗಡಿನ ಬಹಳ ಎಚ್ಚರದಿಂದ ಶೂಟ್ ಮಾಡಿದ್ರು ಪುಟ್ಟಣ್ಣ, ನೋಡೋ ಪ್ರೇಕ್ಷಕರಿಗೆ ಯಾವುದೇ ಅಶ್ಲೀಲ ಭಾವನೆ ಬಾರದಂಗೆ ತಗಿಯೋದು ಅಷ್ಟು ಸುಲಭ ಅಲ್ಲ. ಆ ಹಾಡಿನ ದೃಶ್ಯದಲ್ಲಿ ನಾನು ಮಾಡಿದ ಆಕ್ಟಿಂಗ್‌ಅನ್ನು ಇಲ್ಲಿ ಈಗ ಮಾಡಿ ತೋರುಸ್ತಿದ್ದೆ. ಆದ್ರೆ ಇಲ್ಲಿ ಹೆಣ್ಣುಮಗಳವ್ರುಳೆ ಬೇಡಬಿಡಿ.

▸11

ಈಗ ನನಗೆ ಜಾಸ್ತಿ ಕೆಲಸ ಮಾಡಕ್ಯಾಗಲ್ಲ, ನನಿಗೆ ಆಕ್ಟಿಂಗ್ ಬರಲ್ಲ, ನನಗೆ ಪಾತ್ರ ಬೇಡ ಅಂದ್ರೂ ಜನ ಕೇಳಲ್ಲ, "ನೀವು ಯಾವಾಗ್ಲಾದ್ರು ಬನ್ನಿ ಸಾರ್" ಅಂತರೆ. ಏನು ಮಾಡದು. 'ಶ್ರೀಮಂಜುನಾಥ' ಅನ್ನೊ ಸಿನಿಮಾ ಡೈರೆಕ್ಟರ್ ರಾಘವೇಂದ್ರ ರಾವ್ "ಸುಮಲತಾ ಜೊತೆ ನೀವು ಆಕ್ಟ್ ಮಾಡಿ" ಅಂತ ಗಂಟುಬಿದ್ರು. ತಪ್ಪಿಸಿಗಳಕ್ಕೆ ಅಂತ ಏನೇನೊ ಮಾಡಿದೆ, ಆಗಲಿಲ್ಲ, ಕೊನೆಗೆ ಅವರನ್ನ ಊಟಕ್ಕೆ ಕರದು, ಒಳ್ಳೆ ಊಟ ಹಾಕಿ, ಮಾಡಿಮೇಕ್ಕೆ ಕರಕಂಡೋಗಿ "ನಿಮ್ಮ ಕಾಲಿಗೆ ಬೀಳ್ತೀನಿ. ನನ್ನನ್ನ ಈ ಸಿನಿಮಾದಿಂದ ಕೈಬಿಡಿ. ನನ್ನಿಂದ ನಿಮಗೆ ತೊಂದ್ರೆ ಆಗದು ಬೇಡ" ಅಂದೆ. ಅದಕ್ಕವುರು "ಏಮಿ ಪ್ರಾಬ್ಲಮ್ಮು? ಮೀರು ಶೂಟಿಂಗ್ ವಸ್ತಾರು, ಪೋತಾರ ಅಂತೆ ತಾನೆ. ನಾಕೇಮು ಪ್ರಾಬ್ಲಂ?" ಅಂದ್ರು. ಅದಕ್ಕೆ ನಾನು "ಶೂಟಿಂಗ್‌ಕು ವಸ್ತಾನು, ಪೋತಾನು ಸರಿ. ನಾನು ಯಪ್ಪುಡು ವಸ್ತಾನು; ಯಪ್ಪುಡು ಪೋತಾನು ಅದೇ ತಾನೇ ಪ್ರಾಬ್ಲಂ" ಅಂದೆ. ಆದ್ರು ಪಾಪ ನನ್ನ ಸಮಯಕ್ಕೆ ಹೊಂದಿಕಂಡು ಶೂಟಿಂಗ್ ಮುಗಿಸಿದ್ರು. ಈಗ್ಲು ನನ್ನನ್ನ ಚಿತ್ರಕ್ಕೆ ತಗಳೋರು ನನ್ನ ಟೈಮಿಗೆ ಹೊಂದಿಕೊಂಡು ಶೂಟ್ ಮಾಡ್ತರೆ ಪಾಪ.




* ನೀವು ರಾಜಕಾರಣಕ್ಕೆ ಬಂದದ್ದರ ಬಗ್ಗೆ ಹೇಳಿ ಸಾರ್.

ಅದ್ಯಲ್ಲ ಹಳೆ ಕತೆ. ಮುಖ್ಯವಾಗಿ ನಾನು ಮತ್ತು ಮಾದೇಗೌಡರು ತುಂಬ ಕ್ಲೋಸಾಗಿದ್ವೊ. ಆಗ ಅವುರು ಬಂದು "ನೀನು ಮಂಡ್ಯದ ಎಂ.ಪಿ. ಕ್ಯಾಂಡೇಟ್ ಆಗಬೇಕು" ಅಂದ್ರು. ನಾನು "ಅದ್ಯಲ್ಲ ಆಗಲ್ಲ, ದುಡ್ಡು ಇಲ್ಲ" ಅಂದೆ. ಆಗವುರು "ಪಾರ್ಟಿ ಫಂಡಿಂದ ಬರುತ್ತೆ, ನಾನೊಂದಿಷ್ಟು ಮಾಡಿಕೊಡ್ತಿನಿ. ನೀನು ಸುಮ್ಮನೆ ನಿಂತಕೊ" ಅಂದ್ರು. "ಸರಿ, ನಾನು ಕ್ಯಾಂಡೇಟಾದ್ರೆ ನೀನು ಏನು ಮಾಡ್ತಿಯಾ" ಅಂತ ಕೇಳಿದೆ. "ನೀನು ನಾಮಿನೇಷನ್ ಹಾಕ ಹೋಗು. ನಾನು ನಿನ್ನನ್ನ ಗೆಲ್ಲಿಸಿಕೊಂಡು ಬತ್ತಿನಿ" ಅಂದ್ರು. ಅಂಗಂತ ಹೇಳಿ ಹೋದೋರು ಅವ್ರುರೇ ಕ್ಯಾಂಡೇಟಾದ್ರು. ಆಗ ನನ್ನ ಮನೆಗೆ ಜನತಾದಳದ ಘಟಾನುಘಟಿ ಲೀಡ್ರೆ ಬಂದು ಟಿಕೆಟ್ ಕೊಟ್ರು. ಗೆದ್ದೆ. ಆದ್ರೆ 15 ತಿಂಗಳಾದ ಮೇಲೆ ಸರ್ಕಾರ ಉರುಳಿಬಿದ್ದಾಗ ವಾಪಸ್ಸು ಬಂದು ಕಾಂಗ್ರೆಸ್ ಸೇರಿಕಂಡೆ.

* ನೀವು ಸಕ್ರಿಯವಾಗಿ ರಾಜಕಾರಣದಲ್ಲಿ ತೊಡಗಿಸಿಕೊಬೇಕಾಗಿದೆ. ಕರ್ನಾಟಕದಲ್ಲಿ ಜನಕ್ಕೆ ನಿಮ್ಮಂತ ಲೀಡ್ರು ಬೇಕಾಗಿದೆ...

ರಾಜಕಾರಣ ಅಷ್ಟು ಸುಲಭ ಅಲ್ಲ, ಈಗ ಮೊದ್ಲಿನ ತರ ಇಲ್ಲ, ಜನ ರಾಜಕಾರಣಿಗಳು ಅಂದ್ರೆ ಸಾಕು, ಬಾಯಿಗೆ ಬಂದಂಗೆ ಬೈತರೆ. ಆದ್ರಿಂದ ಪಾರ್ಟ್ ಟೈಂ ರಾಜಕಾರಣನೇ ಒಳ್ಳೆದು ಅಂತ ನನ್ನ ಭಾವನೆ.

ಇವತ್ತು ಜನ ಎಮ್ಮೆಲ್ಲೆ ಆಗಕ್ಕೆ, ಮಂತ್ರಿ ಆಗಕ್ಕೆ ಭಾಳ ಕಷ್ಟ ಪಡ್ತರೆ. ಲಾಬಿ ಮಾಡ್ತರೆ. ಆದ್ರೆ ನಾನು ಕೇಂದ್ರದ ಮಂತ್ರಿಯಾದೆ. ಆದ್ರೆ ಎಷ್ಟೆ ಸಲೀಸಾಗಿ ಆ ಪದವಿನೂ ಬಿಟ್ಟೆ. ನನಿಗೆ ರಾಜಕಾರಣದಿಂದ ಏನೂ ಆಗಬೇಕಾಗಿಲ್ಲ, ಆಸ್ತಿ ಬೇಡ, ಹಣ ಬೇಡ, ಇರೊ ಒಬ್ಬ ಮಗನ್ನ ಓದಿಸಿ ಅವನ್ನ ಮುಂದೆತಂದು ಮರಿಯಾದಿಯಾಗಿ ಬದುಕಿದ್ರೆ ಸಾಕಾಗ್ಯದೆ.

ಯಾಕಂದ್ರೆ ಮೊದಲಿನ ಎನರ್ಜಿ ಈಗಿಲ್ಲ, ಇಷ್ಟು ಸಾಕು ಅನ್ನುಸ್ತದೆ. ಕಾಫಿ ಕುಡುದ್ರಾ? ಹೊರಡಿ ಮತ್ತೆ, ಇಷ್ಟು ಹೇಳಿದ್ರೂ ಇಲ್ಲೆ ಕುಂತಿದ್ರೆ ಬಾಗಿಲವರಿಗೂ ಬಂದು ಕಳಿಸಿ ಕೊಡಬೇಕಾಯ್ತದೆ!

# ಚನ್ನಗಿರಿ: ಜಾತಿ ಧ್ರುವೀಕರಣದಲ್ಲಿ ಗೆಲುವು ಯಾರಿಗೆ?

ಪಟೇಲರ ನಿರ್ಗಮನದ ನಂತರ ಪ್ರತಿ ಚುನಾವಣೆ ಬಂದಾಗ ಯಾರಿಗೆ ತಮ್ಮ ಮತ ನೀಡಬೇಕು ಎನ್ನುವ ಚಿಂತೆ ಕ್ಷೇತ್ರದ ಮತದಾರರನ್ನು ಕಾಡುತ್ತದೆ. ಅದಕ್ಕೆ ಮುಖ್ಯ ಕಾರಣ ಚನ್ನಗಿರಿ ವಿಧಾನಸಭಾ ಕ್ಷೇತ್ರ ಈಗ ಜಾತಿ ರಾಜಕಾರಣದ ಸಂಕಟದಲ್ಲಿ ಸೊರಗುತ್ತಿರುವುದು. ಪಟೇಲರು ಬದುಕಿರುವವರೆಗೂ ಮತದಾರರಲ್ಲಿ ಲಿಂಗಾಯತರು, ದಲಿತರು, ಹಿಂದುಳಿದವರು ಎಂಬ ಜಾತಿ ಆಧಾರಿತ ವಿಂಗಡನೆ ಪ್ರಧಾನವಾಗದೇ ರಾಜಕೀಯ ಪಕ್ಷ ಮತ್ತು ಸ್ಪರ್ಧಿಸುವ ವ್ಯಕ್ತಿ ಪ್ರಧಾನವಾಗಿರುತ್ತಿತ್ತು. ಆದರೀಗ ಇಲ್ಲಿ ಜಾತಿರಾಜಕಾರಣವೇ ಪ್ರಮುಖವಾಗಿಬಿಟ್ಟಿದೆ.

ಮಾಜಿ ಮುಖ್ಯಮಂತ್ರಿ ಜೆ.ಎಚ್.ಪಟೇಲರ ಮರಣದ ನಂತರ ಅವರು ಪ್ರತಿನಿಧಿಸುತ್ತಿದ್ದ ಚನ್ನಗಿರಿ ವಿಧಾನಸಭಾ ಕ್ಷೇತ್ರ ಅಕ್ಷರಶಃ ಅನಾಥವಾಗಿದೆ. ಪಟೇಲರು



ಅಧಿಕಾರದಲ್ಲಿದ್ದಷ್ಟು ದಿನ ಅವರು ಚನ್ನಗಿರಿ ಅಭಿವೃದ್ಧಿಯತ್ತ ಗಮನ ಹರಿಸದಿದ್ದರೂ ಕ್ಷೇತ್ರದ ಮತದಾರರಿಗೆ ಆಪ್ತರಾಗಿದ್ದರು, ಕ್ಷೇತ್ರದ ಪ್ರತಿ ಮನೆಯ ಮುದುಕ, ಮುದುಕಿ, ಹುಡುಗರನ್ನು ಹೆಸರಿಡಿದು ಮಾತನಾಡಿಸುವಷ್ಟು ಆಪ್ತ ಸಂಬಂಧಗಳನ್ನು ಹೊಂದಿದ್ದರು. ಶಾಸಕರಾಗಿ, ಸಂಸದರಾಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿದ್ದಾಗಲೂ ಪಟೇಲರು ತಮ್ಮ ನಡೆ, ನುಡಿ, ಸರಳತೆಗೆ ಎಂದೂ ಅಧಿಕಾರದ ಬಿಂಕು ತಾಕಿಸಿಕೊಂಡಿರಲಿಲ್ಲ. ಅವರ ಸುದೀರ್ಘ ರಾಜಕಾರಣದ ಅವಧಿಯಲ್ಲಿ ಎಂದೂ ಹಟಾಲಂಗಳನ್ನು ಹೊಂದಿರಲಿಲ್ಲ, ಮಧ್ಯವರ್ತಿಗಳನ್ನು ಇಟ್ಟುಕೊಂಡಿರಲಿಲ್ಲ. ಪಟೇಲರೊಂದಿಗೆ ಚನ್ನಗಿರಿಯ ಮತದಾರರಿಗೂ ಅಷ್ಟೇ ಸಲುಗೆಯಿತ್ತು. ಎಲ್ಲವೂ ನೇರಾನೇರ.

ಆದರೀಗ ಪಟೇಲರಿಲ್ಲ, ಅವರ ನಿರ್ಗಮನದ ನಂತರ ಪ್ರತಿ ಚುನಾವಣೆ ಬಂದಾಗ ಯಾರಿಗೆ ತಮ್ಮ ಮತ ನೀಡಬೇಕು ಎನ್ನುವ ಚಿಂತೆ ಕ್ಷೇತ್ರದ ಮತದಾರರನ್ನು ಕಾಡುತ್ತದೆ. ಅದಕ್ಕೆ ಮುಖ್ಯ ಕಾರಣ ಚನ್ನಗಿರಿ ವಿಧಾನಸಭಾ ಕ್ಷೇತ್ರ ಈಗ ಜಾತಿರಾಜಕಾರಣದ ಸಂಕಟದಲ್ಲಿ ಸೊರಗುತ್ತಿರುವುದು.



ಪಟೇಲರು ಬದುಕಿರುವವರೆಗೂ ಮತದಾರರಲ್ಲಿ ಲಿಂಗಾಯತರು, ದಲಿತರು, ಹಿಂದುಳಿದವರು ಎಂಬ ಜಾತಿ ಆಧಾರಿತ ವಿಂಗಡನೆ ಪ್ರಧಾನವಾಗದೇ ರಾಜಕೀಯ ಪಕ್ಷ ಮತ್ತು ಸ್ಪರ್ಧಿಸುವ ವ್ಯಕ್ತಿ ಪ್ರಧಾನವಾಗಿರುತ್ತಿತ್ತು. ಆದರೀಗ ಇಲ್ಲಿ ಜಾತಿರಾಜಕಾರಣವೇ ಪ್ರಮುಖವಾಗಿಬಿಟ್ಟಿದೆ.

## ಮಹಿಮನ ಮಹಿಮೆ

ಪಟೇಲರು ಹೋದನಂತರ ಸಹಜವಾಗಿಯೇ ಮತದಾರರು ಅವರ ಪುತ್ರ ಮಹಿಮನತ್ತ ನೋಡಿದರು. ಈತ ತಂದೆಯ ಶೈಲಿಯ ರಾಜಕಾರಣವನ್ನು ಮುಂದುವರೆಸುತ್ತಾನೆ ಎಂಬ ಭರವಸೆ ಇಟ್ಟ ಇಲ್ಲಿನ ಜನ ಆತನನ್ನು ಚುನಾವಣೆಯಲ್ಲಿ ಶಾಸಕನಾಗಿ ಮಾಡಿದರು. ಆದರೆ ಮಹಿಮ ಮಾಡಿದ್ದು ಏನನ್ನು?

ಆರಂಭದಲ್ಲಿ ಎಲ್ಲವೂ ಸರಿಯಿತ್ತು. ಆದರೆ ಬರುಬರುತ್ತ ಅರಸರ ಕುದುರೆ ಕತ್ತೆಯಾಯಿತು ಎಂಬಂತೆ ಮಹಿಮನ ನಡೆಗಳೆಲ್ಲ ತಂದೆಯ ರಾಜಕಾರಣದಿಂದ ದೂರವಾಗಲಾರಂಭಿಸಿತು. ಇತ್ತ ಮಹಿಮ ಕ್ಷೇತ್ರದ ಅಭಿವೃದ್ಧಿ ಬಗ್ಗೆಯೂ ಗಮನ ನೀಡಲಿಲ್ಲ, ಅತ್ತ ಮತದಾರರನ್ನೂ ಹತ್ತಿರ ಮಾಡಿಕೊಳ್ಳಲಿಲ್ಲ. ಪ್ರಜೆಗಳಿಗಿಂತಲೂ ಕಲ್ಕಿ ಭಗವಾನ್ ಎಂಬ ಢೋಂಗಿ ಸ್ವಾಮಿಯನ್ನು ಆರಾಧಿಸಿದ ಮಹಿಮಾ ಜನರು ತನ್ನ ಮೇಲಿಟ್ಟಿದ್ದ ಭರವಸೆಯನ್ನೆಲ್ಲಾ ಮಣ್ಣುಮಾಡಿಬಿಟ್ಟ.

ಆನಂತರ ಚನ್ನಗಿರಿ ಮತದಾರರು ಆಯ್ಕೆ ಮಾಡಿ ಕೊಂಡಿದ್ದು ಕಾಂಗ್ರೆಸ್‌ನ ವಡ್ನಾಳು ರಾಜಣ್ಣ ಎಂಬ ಅಡಿಕೆ ದಲ್ಲಾಳಿಯನ್ನು. ರಾಜಣ್ಣ ಶಾಸಕನಾದ ನಂತರವಾದರೂ ಚನ್ನಗಿರಿಗೆ ನೆಮ್ಮದಿ ಸಿಕ್ಕೀತು ಎಂಬ ಆಶೆಯೂ ರಾಜಣ್ಣನ ಸರ್ವಾಧಿಕಾರಿ ವರ್ತನೆಯಿಂದ ಮಣ್ಣುಪಾಲಾಯಿತು.


ರಾಜ್ಯದಲ್ಲಿ ಜೆಡಿಎಸ್ ಮತ್ತು ಬಿಜೆಪಿ ನಡುವಿನ ಸಮ್ಮಿಶ್ರ 'ಕೋ-ಜಾ' ಸರಕಾರ ಅಂತ್ಯಗೊಂಡ ನಂತರ ಇಲ್ಲಿನ ಪರಿಸ್ಥಿತಿ ಮತ್ತಷ್ಟು ಕೆಟ್ಟಿತು. ಅದಾದ ನಂತರದ 2008ರ ಚುನಾ ವಣೆಯೇ ಚನ್ನಗಿರಿಯಲ್ಲಿ ಜಾತಿ ಆಧಾರಿತ ವಿಂಗಡನೆಗೆ ಮುಖ್ಯ ಕಾರಣವಾಯಿತು.

ಮಾಡಾಳು ವಿರೂಪಾಕ್ಷಪ್ಪನ ಎಂಟ್ರಿ

ದೇವೇಗೌಡರೊಂದಿಗೆ ಜಗಳ ಕಾದು ಜೆಡಿಎಸ್ ಪಕ್ಷವನ್ನು ತೊರೆದ ಮಹಿಮ 'ಸುವರ್ಣಯುಗ' ಎಂಬ ಪಾರ್ಟಿ ಕಟ್ಟಿ ಅದರ ಏಕೈಕ ಅಭ್ಯರ್ಥಿಯಾಗಿ ಸ್ಪರ್ಧಿಸಿದ. ಸಾಲದಕ್ಕೆ ಸೂಳೆಕೆರೆ ಏರಿ ಮೇಲೆ ಭಗವಂತನ ಧ್ಯಾನ ಮಾಡಲು ತಪಸ್ಸಿಗೆ ಕುಂತ. ಕಾಂಗ್ರೆಸ್‌ನ ವಡ್ನಾಳು ರಾಜಣ್ಣನ ಸರ್ವಾಧಿಕಾರಿ ಶಾಸಕತ್ವವೂ ಮತದಾರನಿಗೂ ಸಾಕುಸಾಕಾಗಿತ್ತು, ಆಗ ಉದ್ಭವಿಸಿದ್ದೇ ಮಾಡಾಳು ವಿರೂಪಾಕ್ಷಪ್ಪ. ಹಿರೇಮಳಲಿ ಗ್ರಾಮ ಪಂಚಾಯತಿ ಅಧ್ಯಕ್ಷನಾಗಿ, ಜಿಲ್ಲಾ ಪಂಚಾಯ್ತಿ ಸದಸ್ಯನಾಗಿ ಅಲ್ಲಿಯತನಕ ಎಲ್ಲ ಅಧಿಕಾರವನ್ನು ಕಾಂಗ್ರೆಸ್ ಪಕ್ಷದವನಾಗಿ ಅನುಭವಿಸಿದ್ದ ಮಾಡಾಳು ವಿರೂಪಾಕ್ಷಪ್ಪ ಶಾಸಕನಾಗುವ ಕನಸೊತ್ತೇ ಭಾರತೀಯ ಜನತಾ ಪಾರ್ಟಿಗೆ ಕುಪ್ಪಳಿಸಿಬಿಟ್ಟ.



ಅದೇ ಹೊತ್ತಿಗೆ ತಾನು ಲಿಂಗಾಯತ ನಾಯಕನೆಂದೂ, ತನಗೆ ಒಕ್ಕಲಿಗರಾದ ದೇವೇಗೌಡ ಮತ್ತು ಅವರ ಪುತ್ರ ಕುಮಾರಸ್ವಾಮಿಯಿಂದ ಮೋಸವಾಯಿತೆಂದೂ ಯಡಿಯೂರಪ್ಪ ಎಲ್ಲೆಡೆ ಕೂಗು ಹಾಕಲಾರಂಭಿಸಿದ. ರಾಜ್ಯದ ಹಲವಾರು ಕಡೆ ಯಡ್ಡಿ ಪರವಾಗಿ ಲಿಂಗಾಯತರು ಒಗ್ಗಟ್ಟಾಗ ಲಾರಂಭಿಸಿದರು. ಆ ಹವಾ ಚನ್ನಗಿರಿಯನ್ನೂ ನುಂಗಿ ಹಾಕಿತು.



ಅಲ್ಲಿಯತನಕ ಜಿಲ್ಲಾ ಪಂಚಾಯತಿಯನ್ನು ದಾಟಿ ಬರಲಾಗದ ಮಾಡಾಳು ವಿರೂಪಾಕ್ಷಪ್ಪ ಬಿಜೆಪಿಯಲ್ಲಿ ಸಾಧು ವೀರಶೈವನೆಂದೇ ಹೆಸರು ನೋಂದಾಯಿಸಿ ಪಕ್ಷದ ಟಿಕೆಟ್ ಪಡೆದ. ಮಾಡಾಳು ವಿರೂಪಾಕ್ಷಪ್ಪ ಮತ್ತು ಕಾಂಗ್ರೆಸ್‌ನ ವಡ್ನಾಳು ರಾಜಣ್ಣ ಇಬ್ಬರೂ ಸಾದು ಲಿಂಗಾಯತರು. 'ಸುವರ್ಣ ಯುಗ' ಪಕ್ಷದಿಂದ ಸ್ಪರ್ಧಿಸಿದ್ದ ಮಹಿಮ ಪಟೇಲ್ ಬಣಜಿಗ ಲಿಂಗಾಯತ. ಇವರೆಲ್ಲರ ನಡುವೆ ಜೆಡಿಎಸ್ ಪಕ್ಷದಿಂದ ವದಿಗೆರೆ ರಮೇಶ ಎಂಬಾತನೂ ಚುನಾವಣಾ ಕಣದಲ್ಲಿದ್ದ. ಇತರರೆಲ್ಲರೂ ಲಿಂಗಾಯತರಾಗಿದ್ದರೆ ಈ ವದಿಗೆರೆ ರಮೇಶ ಮಾತ್ರ ಹಿಂದುಳಿದ ನಾಯಕ ಸಮುದಾಯದವನು.

## ಜಾತಿರಾಜಕಾರಣ

ಕೊನೆಗೂ ಮಹಿಮನ ತಪಸ್ಸಿನ ಮಹಿಮೆಗೆ ಮತದಾರ ಸೊಪ್ಪು ಹಾಕಲಿಲ್ಲ, ಆತ ನಂಬಿದ್ದ ಕಲ್ಕಿ ಕೂಡ ಕೈಕೊಟ್ಟ. ವಡ್ನಾಳು ರಾಜಣ್ಣ ಮಕಾಡೆ ಮಲಗಿದ. ಜೆಡಿಎಸ್‌ನ ವದಿಗೆರೆ ರಮೇಶ ಸೋತರೂ ಮಾಡಾಳು ವಿರೂಪಾಕ್ಷಪ್ಪನಿಗೆ ನೀರಿಳಿಸುವಂತೆ ಸ್ಪರ್ಧೆ ಒಡ್ಡಿದ. ಬಹಳಷ್ಟು ಲಿಂಗಾಯತರು ಯಡ್ಡಿಯ ಕಾರಣಕ್ಕೆ ಬಿಜೆಪಿಯನ್ನೇ ಬೆಂಬಲಿಸಬೇಕೆನ್ನುವ ನಿರ್ಧಾರಕ್ಕೆ ಬಂದಿದ್ದರಿಂದ ವಿರೂಪಾಕ್ಷಪ್ಪ ಜೆಡಿಎಸ್‌ನ ರಮೇಶ್‌ಗಿಂತ ಕೇವಲ 8000 ಚಿಲ್ಲರೆ ಹೆಚ್ಚು ಮತಗಳನ್ನು ಪಡೆದು ಗೆದ್ದು ಬಿಟ್ಟ.

ಮಾಡಾಳು ವಿರೂಪಾಕ್ಷಪ್ಪ ಗೆದ್ದ ಕ್ಷಣದಿಂದ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಗತಿಯೇ ಬದಲಾಗಿಹೋಯಿತು. ಕ್ಷೇತ್ರದಲ್ಲಿ ಜಾತಿರಾಜಕಾರಣ ಭುಗಿಲೆದ್ದಿತು. "ಲಿಂಗಾಯತರೇ ನನ್ನ ಗೆಲುವಿಗೆ ಕಾರಣ, ಯಡಿಯೂರಪ್ಪನೇ ನನ್ನ ನಾಯಕ" ಎಂದು ವಿರೂಪಾಕ್ಷಪ್ಪ ಬಹಿರಂಗವಾಗಿ ಸಾರುತ್ತಿರುವುದು ಚನ್ನಗಿರಿಯ ಮಾನವನ್ನ ಮೂರು ಕಾಸಿಗೆ ಹರಾಜಿಗೆ ಹಾಕಿದಂತಾಗಿದೆ.

ಒಂದೆಡೆ ವಿರೂಪಾಕ್ಷಪ್ಪ ಅಧಿಕಾರಿಗಳಿಗೆ ತಲೆನೋವಾಗಿ ಪರಿಣಮಿಸಿದ್ದರೆ ಇನ್ನೊಂದೆಡೆ ಕಾಮಗಾರಿಗಳ ಹೆಸರಲ್ಲಿ ಬರಪೂರ ಕಮೀಷನ್ ವಸೂಲಿ ಮಾಡುತ್ತಿದ್ದಾನೆ. ವಿರೂಪಾಕ್ಷಪ್ಪನ ಹಿರಿಯ ಮಗ ಮಲ್ಲಿಕಾರ್ಜುನ ಸ್ವತಃ ಗುತ್ತಿಗೆದಾರನಾಗಿದ್ದು ಗ್ರಾಮ ಪಂಚಾಯತಿಗಳ ಸಣ್ಣ ಕಾಮಗಾರಿಗಳನ್ನೂ ಬೇರೆಯವರಿಗೆ ಬಿಡದೆ ತಾನೇ ಬೇನಾಮಿ ಹೆಸರಲ್ಲಿ ಮಾಡಿಸುತ್ತಿದ್ದಾನೆ. ಚನ್ನಗಿರಿ ಮತ್ತು ನಲ್ಲೂರು ಪಟ್ಟಣಗಳಲ್ಲಿ ರಸ್ತೆ, ದೀಪ, ಕುಡಿಯುವ ನೀರು ಇತ್ಯಾದಿ ಸವಲತ್ತುಗಳು ಸಿಗುತ್ತಿದ್ದರೂ ಕ್ಷೇತ್ರದ ಗ್ರಾಮೀಣ ಪ್ರದೇಶಗಳ ರಸ್ತೆಗಳು ಅದ್ವಾನ ಎದ್ದು ಹೋಗಿದೆ. ಆದರೆ ದಾಖಲೆಗಳಲ್ಲಿ ಮಾತ್ರ ಎಲ್ಲ ಕೆಲಸಗಳು ನಡೆದಿವೆ.

ಕಳೆದ ಚುನಾವಣೆ ಸಂದರ್ಭದಲ್ಲಿ ದುಡ್ಡಿಗಾಗಿ ಪರದಾಡಿದ್ದ ವಿರೂಪಾಕ್ಷಪ್ಪ ಮುಂಬರುವ ಚುನಾವಣೆಗೆ ಅದೆಷ್ಟು ಕೋಟಿ ಆದೀತು ಎನ್ನುವ ಅಹಂಕಾರವನ್ನು ಮೆರೆಯುತ್ತಿರುವ ಮತದಾರರನ್ನು ಕಂಗೆಡಿಸಿಬಿಟ್ಟಿದೆ. ಸಾದು ಲಿಂಗಾಯತರೂ ಕುಲಸ್ಥ ಶಾಸಕನ ತಿನ್ನಾಟಕ್ಕೆ ಬೇಸರ ಪಡುವಂತಾಗಿದೆ.

ಹಾಗೆ ನೋಡಿದರೆ ಶಾಸಕ ವಿರೂಪಾಕ್ಷಪ್ಪನಿಗಿಂತ ಆತನ ಮಗ ಮಲ್ಲಿಕಾರ್ಜುನನದ್ದೇ ಕ್ಷೇತ್ರದಲ್ಲಿ ಕಾರುಬಾರು. ಎಷ್ಟರಮಟ್ಟಿಗೆಂದರೆ ವಿರೂಪಾಕ್ಷಪ್ಪ ಡಮ್ಮಿ ಶಾಸಕನಾಗಿ ಆತನ ಮಗನೇ ಶಾಸಕನಾಗಿ ಜನರಿಗೆ ಕಾಣಿಸುತ್ತಿದ್ದಾನೆ. ಇದೆಲ್ಲದರ ಮಧ್ಯೆ ಸರ್ಕಾರದ ಆಯಕಟ್ಟಿನ ಜಾಗಗಳಲ್ಲಿ ತನ್ನ ಸ್ವಜಾತಿ ಲಿಂಗಾಯತರನ್ನೇ ವಿರೂಪಾಕ್ಷಪ್ಪ ನೇಮಿಸಿಕೊಂಡಿದ್ದಾನೆ. ಪರಿಣಾಮವಾಗಿ ಚನ್ನಗಿರಿಗೆ ತಹಶೀಲ್ದಾರನಾಗಿ ವಕ್ಕರಿಸಿಕೊಂಡಿರುವ ರೇವಣಸಿದ್ದಪ್ಪನೆಂಬ ಲಿಂಗಾಯತ ಇವತ್ತು ತನ್ನ ಜವಾಬ್ದಾರಿಗಳನ್ನು ಮರೆತು ಶಾಸಕನ ಅನಧಿಕೃತ ಸೇವಕನಂತೆ ವರ್ತಿಸುತ್ತಿದ್ದಾನೆ.

## ಯಾರು ದಿಕ್ಕು?

ಪರಿಸ್ಥಿತಿ ಹೀಗಿರುವಾಗ ಚನ್ನಗಿರಿಗೆ ಯಾರು ದಿಕ್ಕು ಎಂಬ ಚಿಂತೆ ಜನರನ್ನು ಕಾಡುತ್ತಿದೆ.

ಈಗ ಮಹಿಮ ಪಟೇಲ್ ಕೂಡ ಕಾಂಗ್ರೆಸ್ ಸೇರಿರುವುದರಿಂದ ಮುಂದಿನ ಚುನಾವಣೆಯಲ್ಲಿ ಯಾರಿಗೆ ಪಕ್ಷದ ಟಿಕೆಟ್ ಎಂಬುದರ ಬಗ್ಗೆ ವಡ್ನಾಳು ರಾಜಣ್ಣ ಮತ್ತು ಮಹಿಮ ನಡುವೆ ಸಮರ ಶುರುವಾಗಿದೆ. ವಡ್ನಾಳು ರಾಜಣ್ಣ ಈಗ ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿರುವುದರಿಂದ ಆತನಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕರೂ ಚುನಾವಣೆ ನಡೆಸುವುದು ಕಷ್ಟಕರ. ಅದೇ ಹೊತ್ತಿಗೆ ಮಹಿಮನ ಬಗ್ಗೆ ಮತ್ತೆ ಮತದಾರರಲ್ಲಿ ಭರವಸೆ ಮೂಡುವುದೂ ಕಷ್ಟ. ತನ್ನ ತಂದೆಯ ಬಗ್ಗೆ ಜನರಲ್ಲಿರುವ ಪ್ರೀತಿಯನ್ನು ಮತಗಳಾಗಿ ಪರಿವರ್ತಿಸಿಕೊಳ್ಳುವ ಜಾಣತನ ಮಹಿಮನಿಗಿಲ್ಲ.

## ಲಿಂಗಾಯತರಿಗೇ ಗೆಲುವು?

ಒಂದು ಅಚ್ಚರಿಯ ಸಂಗತಿಯೆಂದರೆ ದೇಶಕ್ಕೆ ಸ್ವಾತಂತ್ರ ಬಂದನಂತರದ ಅಷ್ಟೂ ಚುನಾವಣೆಯಲ್ಲೂ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಸ್ಪರ್ಧಿಸುತ್ತಲೇ ಬಂದಿದ್ದರೂ ಚನ್ನಗಿರಿ ವಿಧಾನಸಭಾ ಕ್ಷೇತ್ರ ಪ್ರತಿ ಬಾರಿ ಲಿಂಗಾಯತರನ್ನೇ ಗೆಲ್ಲಿಸುತ್ತಾ ಬಂದಿದೆ.

ಇಲ್ಲಿ ಲಿಂಗಾಯತರು ಹೆಚ್ಚುಸಂಖ್ಯೆಯಲ್ಲಿದ್ದರೂ ನಾಯಕರ ಮತಗಳೇ 35 ಸಾವಿರದಷ್ಟಿವೆ. ಇದಲ್ಲದೆ ಉಪ್ಪಾರರು, ಮುಸ್ಲಿಮರು, ಕುರುಬರು ಅಂತೆಲ್ಲ ಇತರ ಸಮುದಾಯಗಳ ಮತಗಳನ್ನು ಸೇರಿಸಿದರೆ ಇಲ್ಲಿ ಲಿಂಗಾಯತರಿಗಿಂತ ಇತರರ ಸಂಖ್ಯೆಯೇ ಹೆಚ್ಚಾಗುತ್ತದೆ. ಇಷ್ಟೆಲ್ಲ ಇದ್ದರೂ ಜೆ.ಎಚ್.ಪಟೇಲರು ಇಲ್ಲಿಂದ ಸತತವಾಗಿ ಗೆದ್ದು ಬಂದಿದ್ದಕ್ಕೆ ಕಾರಣ ಇಲ್ಲಿನ ದಲಿತರು, ಅಲ್ಪಸಂಖ್ಯಾತರು ಮತ್ತು ಇತರೆ ಹಿಂದುಳಿದ ವರ್ಗಗಳು ತಮ್ಮ ಜಾತ್ಯತೀತ ಮನೋಭಾವವನ್ನು ಮೆರೆದದ್ದು.

## ಲಿಂಗಾಯತೇತರ ಐಕ್ಯತೆ?

ಈಗ ರಾಜ್ಯದಲ್ಲಾಗಿರುವಂತೆ ಚನ್ನಗಿರಿಯಲ್ಲೂ ಪರಿಸ್ಥಿತಿ ಬದಲಾಗಿದೆ. ಯಡಿಯೂರಪ್ಪನ ಭ್ರಷ್ಟಾಚಾರ, ಅಧಿಕಾರದ ದಾಹ, ತಿಕ್ಕಲುತನಗಳು ಜನರಲ್ಲಿ ರೇಜಿಗೆ ಹುಟ್ಟಿಸಿದೆ. ಅದೇರೀತಿ ಮಾಡಾಳು ವಿರೂಪಾಕ್ಷಪ್ಪನ ಅಹಂಕಾರ, ಸ್ವಜಾತಿ ಪ್ರೀತಿ ಮತ್ತು ಸುಂಗಾಟಗಳು ಚನ್ನಗಿರಿ ಮತದಾರರಲ್ಲಿ ಅಸಹನೆ ಉಂಟುಮಾಡಿದೆ.

ಇದೇ ಹೊತ್ತಿನಲ್ಲಿ ಕಾಂಗ್ರೆಸ್‌ನಲ್ಲಿ ವಡ್ನಾಳು ರಾಜಣ್ಣ ಮತ್ತು ಮಹಿಮ ನಡುವೆ ಮೂಲ-ವಲಸಿಗ ಎಂಬ ಕಚ್ಚಾಟ ಶುರುವಾಗಿದೆ. ಇವರಿಬ್ಬರಿಗೆ ಒಬ್ಬರನ್ನೊಬ್ಬರು ಕಂಡರಾಗುವುದಿಲ್ಲ. ಇವರಿಬ್ಬರಲ್ಲಿ ಯಾರಿಗೇ ಕಾಂಗ್ರೆಸ್ ಟಿಕೆಟ್ ನೀಡಿದರೂ ವಿರೋಧಿ ಗುಂಪು ಪಕ್ಷದ ಅಭ್ಯರ್ಥಿಯ ವಿರುದ್ಧ ಕೆಲಸ ಮಾಡುವುದು ಗ್ಯಾರಂಟಿ ಎಂಬಂತಾಗಿದೆ.




ವಡ್ನಾಳ್ ರಾಜಣ್ಣ

ಮುಂದಿನ ಬಾರಿಯೂ ಜೆಡಿಎಸ್‌ನಿಂದ ವದಿಗೆರೆ ರಮೇಶನಿಗೇ ಟಿಕೆಟು ಸಿಗುವ ಸಾಧ್ಯತೆ ಹೆಚ್ಚಾಗಿದೆ. ಕಳೆದ ಚುನಾವಣೆಯಲ್ಲಿ 28 ಸಾವಿರ ಮತಗಳನ್ನು ಪಡೆದಿದ್ದ ರಮೇಶ ಈಗಾಗಲೇ ತಮ್ಮ ಚುನಾವಣಾ ಪ್ರಚಾರವನ್ನು ಶುರುಮಾಡಿದ್ದಾರೆ. ಮಾಡಾಳು ವಿರೂಪಾಕ್ಷಪ್ಪ ವಡ್ನಾಳು ರಾಜಣ್ಣ ಮತ್ತು ಮಹಿಮ - ಈ ಮೂವರೂ ಲಿಂಗಾಯತ ಸಮುದಾಯದವರಾಗಿರುವುದೇ ವದಿಗೆರೆ ರಮೇಶನಿಗೆ ಪೂರಕವಾಗುವ ಸಾಧ್ಯತೆಗಳಿವೆ.

ಬರುವ ಚುನಾವಣೆಯಲ್ಲಿ ಮತದಾರರು ಇಲ್ಲಿಯತನಕ ಲಿಂಗಾಯತರನ್ನು ಗೆಲ್ಲಿಸಿದ್ದು ಸಾಕು. ನಾಯಕ ಸಮುದಾಯದ ವದಿಗೆರೆ ರಮೇಶನನ್ನು ಒಂದು ಸಲ ಗೆಲ್ಲಿಸಿ ನೋಡುವ ಎಂಬ ನಿರ್ಧಾರಕ್ಕೆ ಬಂದರೆ ಇಲ್ಲಿನ ಚಿತ್ರಣವೇ ಬದಲಾಗುತ್ತದೆ.


ಅದಕ್ಕೆ ಲಿಂಗಾಯತೇತರ ಸಮುದಾಯಗಳು ಮನಸ್ಸು ಮಾಡಬೇಕಷ್ಟೇ.

• ಟಿ.ಎನ್.ಷಣ್ಮುಖ



# ತಲ್ಲಣಿಸದಿರು ಮನವೇ

ಶಿವಪ್ರಕಾಶನಿಗೆ ಈ ಮುಂಚೆ ಕನಸುಗಳು ಬೀಳುವುದೇ ಅಪರೂಪವಾಗಿತ್ತು. ಕಳೆದ ಒಂದು ವರ್ಷದಿಂದ ಕನಸುಗಳು ಅವನ ನಿದ್ದೆಯನ್ನೇ ಗುತ್ತಿಗೆ ಹಿಡಿದಂತೆ ಬೀಳುತ್ತಿವೆ. ತೀರಾ ಅಪರೂಪಕ್ಕೊಮ್ಮೆ ಒಳ್ಳೆಯ ಕನಸುಗಳನ್ನು ಬಿಟ್ಟರೆ ಬಹುತೇಕವಾಗಿ ಸಾವು-ನೋವುಗಳಿಗೆ ಸಂಬಂಧಿಸಿದ ಕನಸುಗಳೇ.. ಅದರಲ್ಲೂ ತನ್ನ ಕುಟುಂಬದವರೇ ಹೀಗೆ ಮತ್ತೆ ಮತ್ತೆ ಕನಸಿನಲ್ಲಿ ಸಾಯುವುದಿತ್ತು. ಒಂದು ಬಾರಿ ಸ್ವತಃ ಶಿವಪ್ರಕಾಶ ತನ್ನ ಸಾವನ್ನು ಅದಕ್ಕೆ ಸಿಗಬಹುದಾದ ಪ್ರತಿಕ್ರಿಯೆಯನ್ನು ಕೂಡಾ ಕನಸಿನಲ್ಲಿ ಕಂಡಿದ್ದಾನೆ.



## ಕತೆ

• ಡಾ. ಎಸ್.ಬಿ.ಜೋಗುರ

ಹೀಗೆ ಕಥೆಯೊಂದು ಕನಸಾಗಿ ಆ ಪರಿ ಕಾಡುತ್ತದೆ ಎಂದು ಮೊದಲೇ ತಿಳಿದಿದ್ದರೆ ಲೇಖಕ ಶಿವಪ್ರಕಾಶ ಆ ಕಥೆಯನ್ನೇ ಬರೆಯುತ್ತಿರಲಿಲ್ಲ, ಹೌದು. ಆ ಕಥೆ ಅವನನ್ನು ಮತ್ತೆ ಮತ್ತೆ ಎಲ್ಲೆಂದರಲ್ಲಿ, ಹೇಗೆಂದರೆ ಹಾಗೆ ಜೊತೆಗಿರುವವರು ಕೂಡಾ ಹೈರಾಣಾಗುವಂತೆ ಅಮೂರ್ತವಾಗಿ ಅವನ ಬೆನ್ನಿಗೆ ಬಿದ್ದು ಕಾಡುತ್ತಿದೆ. ಆಂಗ್ಲಭಾಷೆಯ ಅಧ್ಯಾಪಕನಾದ ಶಿವಪ್ರಕಾಶ ತರಗತಿಯಲ್ಲಿ ಪಾಠ ಮಾಡುವಾಗ ಆ ಕಥೆಯ ಯಾವುದೋ ಒಂದು ಎಳೆ ನೆನಪಾಗಿ ತಗುಲಿಕೊಂಡರೂ ಸಾಕು ವಿಚಲಿತನಾದಂತೆ ತೋರುತ್ತಿದ್ದ. ಏನೋ ಹೇಳಲು ಹೊರಟು, ಏನೋ ಹೇಳುತ್ತಿದ್ದ. ವಿದ್ಯಾರ್ಥಿಗಳು ತಮ್ಮಲ್ಲಿಯೇ ಗುಸುಗುಸು ಎನ್ನುತ್ತಿರುವುದನ್ನು ಕಂಡು ಮತ್ತೆ ವಾಸ್ತವಕ್ಕೆ ಮರಳುತ್ತಿದ್ದ. ಧಾರವಾಡದ ಖಾಸಗಿ ಕಾಲೇಜೊಂದರಲ್ಲಿ ಕಳೆದ ಎರಡು ದಶಕಗಳಿಗಿಂತಲೂ ಹೆಚ್ಚು ಕಾಲ ಆಂಗ್ಲಭಾಷೆಯ ಅಧ್ಯಾಪಕನಾಗಿ ಕೆಲಸ ಮಾಡಿದ ಶಿವಪ್ರಕಾಶ, ಇಲ್ಲಿಯವರೆಗೆ ನೂರಾರು ಕಥೆಗಳನ್ನು ಬರೆದು, ಹತ್ತಾರು ಪ್ರಶಸ್ತಿಗಳನ್ನು ಪಡೆದುಕೊಂಡರೂ ಕೀರ್ತಿ ಶನಿಯ ಅರಿವಿನಿಂದ ಹೊರಗುಳಿದಿರಲಿಲ್ಲ, ಹಾಗಾಗಿಯೇ ಪ್ರಶಸ್ತಿ ಘೋಷಣೆಯಾದ ದಿನದಿಂದ ಒಂದು ವಾರದವರೆಗೆ ಮೊಬೈಲನ್ನು ಸ್ವಿಚ್ ಆಫ್ ಮಾಡಿ ಇಡುವ ಇವನ ಮನಸ್ಥಿತಿಯನ್ನು ಗೆಳೆಯರೆಲ್ಲರೂ ಛೇಡಿಸುತ್ತಿದ್ದರು. ತನ್ನ ಒಂದು ಕಥೆ ತನ್ನನ್ನು ಆ ಹಂತಕ್ಕೆ ಕರೆದೊಯ್ಯಬಹುದು ಎಂದು ಆತ ಎಣಿಸಿರಲೇ ಇಲ್ಲ, ಪಾಠ ಮಾಡುವ ವೇಳೆಯಲ್ಲಿ ರಸ್ತೆ ಮೇಲೆ ಯಾವುದೋ ಒಂದು ವಾಹನ ವಿಕಾರವಾಗಿ ಹಾರ್ನ್ ಮಾಡಿದರೂ ಸಾಕು ಶಿವಪ್ರಕಾಶ ಒಂದುಕ್ಷಣ ತತ್ತರಿಸಿ ಹೋದವನಂತೆ ತೋರುತ್ತಿದ್ದ. ಅದೊಂದು ದಿನ ಹೆಮಿಂಗ್ವೇ ಕಾದಂಬರಿಯನ್ನು ಪಾಠ ಮಾಡುವ ಗಳಿಗೆಯಲ್ಲಿ ಆತ ತನ್ನನ್ನೇ ತಾನು ಮರೆತು, ಆ ಕಾದಂಬರಿಯ ಸನ್ನಿವೇಶವೊಂದನ್ನು ಅತ್ಯಂತ ಭಾವಪರವಶನಾಗಿ ಚರ್ಚಿಸುತ್ತಿದ್ದಾಗ ಕಾಲೇಜಿನ ಎದುರಿನ ರಸ್ತೆಯಲ್ಲಿ ವಾಹನವೊಂದು ಜೋರಾಗಿ ಚೊಂಯ್.. ಎಂದು ಬ್ರೇಕ್ ಹಾಕಿದ ಸದ್ದಾಗಿ ಕೈಯಲ್ಲಿ ಹಿಡಿದಿದ್ದ ಕಾದಂಬರಿಯನ್ನೇ ಬಿಟ್ಟಿದ್ದ. ಎರಡೂ ಕೈಗಳನ್ನು ಬಲವಾಗಿ ಕಿವಿಗೆ ಮುಚ್ಚಿದ್ದ. ಅವನ ತುಟಿಗಳು ಅದುರುತ್ತಿದ್ದವು. ವಿದ್ಯಾರ್ಥಿಗಳು ಆ ರೂಪದಲ್ಲಿ ತರಗತಿಯೊಳಗೆ ಹಿಂದೆಂದೂ ಶಿವಪ್ರಕಾಶನನ್ನು ಕಂಡಿರಲಿಲ್ಲ, ಇಡೀ ಕಾಲೇಜಿನಲ್ಲಿಯೇ ಒಳ್ಳೆಯ ಅಧ್ಯಾಪಕ ಎಂದು ಹೆಸರು ಗಳಿಸಿದ ಶಿವಪ್ರಕಾಶ ಈಗೀಗ ಅದೇಕೋ ಕೊಂಚ ಮಾನಸಿಕವಾಗಿ ವಿಚಲಿತನಾದಂತೆ ತೋರುತ್ತಿದ್ದ. ಏನೋ ಮಾಡಲು ಹೊರಟು ಇನ್ನೇನೋ ಮಾಡುತ್ತಿದ್ದ. ಜೊತೆಗಿದ್ದವರನ್ನು ಅಲ್ಲಿಯೇ ಬಿಟ್ಟು ನಡೆದುಬಿಡುತ್ತಿದ್ದ. ಆಮೇಲೆ ನೆನಪಾಗಿ ಛೇ..! ಎಂದು ಅವರನ್ನು ಹುಡುಕುತ್ತಿದ್ದ. ಕ್ಷಮೆ ಕೇಳುತ್ತಿದ್ದ. ಒಂದು ಬಾರಿಯಂತೂ ಹೋಟೇಲ್ ಒಂದರಲ್ಲಿ ತನ್ನ ಸಹ ಅಧ್ಯಾಪಕರೊಂದಿಗೆ ಚಹಾ ಕುಡಿಯಲೆಂದು ತೆರಳಿದವನು ಅದೇನೋ ಒಂದು ಫೋನ್ ಕಾಲ್ ರಿಸೀವ್ ಮಾಡಲೆಂದು ಹೋದವನು ಸೀದಾ ಸ್ಟಾಫ್ ರೂಮಿಗೆ ಬಂದು ಕುಳಿತಿದ್ದ. ಇನ್ನೊಂದು ವಿಚಿತ್ರವೆಂದರೆ ಹಾಗೆ ಎಲ್ಲರನ್ನು ಚಹಾ ಕುಡಿಯಲು ಕರೆದುಕೊಂಡು ಹೋದವನೇ ಅವನಾಗಿತ್ತು, ಎಷ್ಟೋ ಹೊತ್ತಿನ ಮೇಲೆ ಅವನಿಗೆ ನೆನಪಾಗಿ ಪಶ್ಚಾತ್ತಾಪ ಪಟ್ಟಿದ್ದ.

ದೀಪಾವಳಿ ಹಬ್ಬಕ್ಕೆಂದು ಊರಿನಿಂದ ಬಂದಿದ್ದ ತನ್ನ ತಂದೆಯನ್ನು ಬಸ್ ಹತ್ತಿಸಲು ತೆರಳಿದ್ದ ಶಿವಪ್ರಕಾಶ ಯಾವುದೋ ಒಂದು ಬೇರೆ ಊರಿನ ಬಸ್ ಹತ್ತಿಸಿ 'ಊರಿಗೆ ಹೋದಮೇಲೆ ಫೋನ್ ಮಾಡು' ಎನ್ನುತ್ತಿರುವಾಗ ಕಂಡಕ್ಟರ್ ಎಲ್ಲಿಗೆ ಎಂದು ಕೇಳಿದ್ದೇ ತಡ, 'ಮಾರಾಯರೇ ಇದು ಜಮಖಂಡಿಗೆ ಹೋಗೂದಿಲ್ಲ, ಬೋರ್ಡ್ ನೋಡ ಬಾರದಾ..?' ಎಂದಾಗ ಶಿವಪ್ರಕಾಶ ನಾಲಿಗೆ ಕಚ್ಚಿ ತನ್ನ ಕೈಯಿಂದ ನೆತ್ತಿಯ ಹಿಂಬದಿಯನ್ನು ಚಚ್ಚಿಕೊಂಡಿದ್ದ. ಅವನ ತಂದೆಯೂ ಮಗನ ಈ ಅವಸ್ಥೆಯನ್ನು ಕಂಡು ಕನಿಕರ ಪಟ್ಟಿದ್ದರು. ಸದಾ ತುಂಬಾ ಅಲರ್ಟ್ ಆಗಿರುವ ಶಿವಪ್ರಕಾಶ ಹೀಗೆ ಮಹಾನ್ ಮರೆಗುಳಿಯಾಗಿರುವುದು, ಸದಾ ಏನೋ ಧ್ಯಾನಿಸುವಂತಿರುವ ಸ್ಥಿತಿಯನ್ನು ಕಂಡು ಅವನ ಕುಟುಂಬದವರಿಗೆಲ್ಲಾ ಆಶ್ಚರ್ಯವಾಗಿದೆ. ಹೆಂಡತಿ ಪ್ರಮೀಳಾ ಗಂಡನ ಆ ಬಗೆಯ ವರ್ತನೆಯನ್ನು ಕಂಡಾಗಲೊಮ್ಮೆ 'ಅತಿಯಾಗಿ ಓದಿದರೆ, ಬರೀತಾ ಕೂತರೆ ಇನ್ನೇನಾಗಬೇಕು..? ನಿಮ್ಮಣ್ಣ ಮದುವೆಯಾದ ಹೊಸತರಲ್ಲಿಯೇ ನಮ್ಮ ತಂದೆ ನಿಮಗೆ ಈ ಮಾತ ಹೇಳಿದ್ದರು' ಅಂತಿದ್ದಳು. ಶಿವಪ್ರಕಾಶ ಆಕೆಯ ಮಾತನ್ನು ಕೇಳಿ ಮುಗುಳ್ನಗುವುದನ್ನು ಬಿಟ್ಟು ಬೇರೆ ಏನನ್ನೂ ಮಾತನಾಡುತ್ತಿರಲಿಲ್ಲ, ಈಗೀಗ ಮಕ್ಕಳಾದ ನವೀನ ಮತ್ತು ರೂಪಾ ಇಬ್ಬರೂ ಶಿವಪ್ರಕಾಶನನ್ನು ತಮಾಷೆ ಮಾಡಲು ಶುರು ಮಾಡಿದ್ದಾರೆ. ಡೈನಿಂಗ್ ಟೇಬಲಲ್ಲಿ ಏನೇನು ಇದೆ ಎನ್ನುವುದನ್ನು ಅವನ ಊಟ ಮುಗಿಯುವವರೆಗೂ ನೆನಪು ಮಾಡುತ್ತಿರಬೇಕು. ಅನೇಕ ಬಾರಿ ರೈಸ್ ಊಟ ಮಾಡದೇ ಕೈ ತೊಳೆದು ಆಮೇಲೆ ಮತ್ತೆ ಅನ್ನ ಸಾರು ಊಟ ಮಾಡಿದ ದಿನಗಳಿವೆ.. ಮಗಳು ರೂಪಾ 'ಮಮ್ಮೀ, ಪಪ್ಪಾ ಏನೋ ಯೋಚನೆಯಲ್ಲೇ ಇರ್ತಾರೆ. ನೋಡು ಮತ್ತೆ ನಿನಗೆ ಗೊತ್ತಾಗದ ಹಾಗೆ ಎಲ್ಲಾದರೂ ಒಂದು ಸೆಟಪ್ ಮಾಡಿರಬಹುದು' ಎಂದಾಗ 'ಹಂಗ ಮಾಡಿ ಅಲ್ಲೆ ಉಳಿದರೆ ನನಗೂ ಸಾಕಾಗೈತಿ' ಎಂದು ಆತನ ಹೆಂಡತಿ ಅಂದಾಗ ಶಿವಪ್ರಕಾಶ 'ಇವಳೊಬ್ಬಳನ್ನೇ ನನಗೆ ಸರಿಯಾಗಿ ನಿಭಾಯಿಸಲಿಕ್ಕೆ ಆಗ್ತಾ ಇಲ್ಲ, ಇನ್ಯಾವ ಸೆಟಪ್ ಕರ್ಮ..?' ಅನ್ನುತ್ತಾ ಮೊಸರು -ಅನ್ನ ಊಟ ಮಾಡದೇ ಕೈ ತೊಳೆದು ಎದ್ದಾಗಿತ್ತು.

*******

ಆ ದಿನ ಸ್ನೇಹಿತನ ಮಗಳ ಮದುವೆ. ದಾವಣಗೆರೆಗೆ ತೆರಳುವುದಿತ್ತು, ಇಡೀ ಫ್ಯಾಮಿಲಿ ಬರಬೇಕು ಎಂದು ಆತ ಕರೆದಿದ್ದ. ಪಿ.ಜಿ.ಯಲ್ಲಿ ಇಬ್ಬರೂ ಕ್ಲಾಸಮೇಟ್ಸ ಹೀಗಾಗಿ ಮದುವೆಯನ್ನಂತೂ ತಪ್ಪಿಸುವಂತಿಲ್ಲ, ಎಲ್ಲರಿಗಿಂತಲೂ ಬೇಗ ಎದ್ದು ಸ್ನಾನ ಮಾಡಿ ರೆಡಿಯಾದ ಶಿವಪ್ರಕಾಶ ಹೆಂಡತಿ ಮತ್ತು ಮಕ್ಕಳನ್ನೂ ಎಬ್ಬಿಸಿದ. ತಾನು ಬರುವುದಿಲ್ಲ ಎಂದು ಮಗಳ ಹಟ. ಆಕೆಗೆ ದಾವಣಗೆರೆಯಲ್ಲಿ ಬಟ್ಟೆ ಇಸಿದುಕೊಡುವ ಮಾತು ಕೊಟ್ಟು ರೆಡಿ ಮಾಡಲಾಯಿತು. ಮಗನದೂ ಅದೇ ರಾಗ. ತನಗೆ ಈ ಮದುವೆಗಿದುವೆ ಎಲ್ಲಾ ಬೋರಿಂಗ್ ನೀವು ಹೋಗಿ ಬನ್ನಿ ಅಂತ ಖಂಡಿತವಾಗಿ ಆತ ಹೇಳಿದ. ಅವನು ಬರದಿದ್ದರೆ ಕಾರ್ ಡ್ರೈವಿಂಗ್ ಮಾಡಿಕೊಂಡು ಹೋಗುವುದು ಶಿವಪ್ರಕಾಶಗೆ ಕಷ್ಟ. ತನ್ನ ಪರೀಕ್ಷೆ ಬೇರೆ ಹತ್ತಿರ ಬಂತು ತಾನು ಬರೋದಿಲ್ಲ ಎಂದು ಮಗ ಒಂದೇ ರಾಗ ತೆಗೆದ. ಎಂದಿನಂತೆ ಹೆಂಡತಿ ಕೂಡಾ ಮಗನನ್ನೇ ಬೆಂಬಲಿಸಿದಳು. ಒಬ್ಬ ಡ್ರೈವರನ್ನು ಕರಕೊಂಡು ಹೋದರಾಯ್ತು ಅಂತ ತೀರ್ಮಾನಿಸಿದರು. 'ನಿಮಗೆ ಎಷ್ಟು ಹೊತ್ತಾದರೂ ಟೈಮ್ ಸಾಲುವದಿಲ್ಲ ಬೇಗಬೇಗ ರೆಡಿಯಾಗಿ ಅಕ್ಷತೆ ಟೈಮಲ್ಲಿ ಅಲ್ಲಿರಬೇಕು' ಎಂದು ಶಿವಪ್ರಕಾಶ ಗಡಿಬಿಡಿ ಮಾಡುತ್ತಿರುವಾಗಲೇ ಹೆಂಡತಿ ಹೊರಬಂದಳು. ಶಿವಪ್ರಕಾಶ ಗಲಿಬಿಲಿಗೊಂಡ. ಹೆಂಡತಿ ಪ್ರಮೀಳಾ ಎಂದೂ ಚೂಡಿದಾರ್ ಹಾಕಿದವಳಲ್ಲ, ಅಂದು ಅದೇನೋ.. ಆಕೆ ಮಗಳ ಚೂಡಿದಾರ್ ಧರಿಸಿದ್ದಳು. ಮಗಳು ಅಮ್ಮನ ಸೀರೆ ತೊಟ್ಟಿದ್ದಳು. 'ಇದೇನಿದು.. ಈ ವಯಸ್ಸಲ್ಲಿ ನೀನು ಚೂಡಿದಾರ್..?' ಅಂದಾಗ ಪ್ರಮೀಳಾ 'ನೀವೂ ಜೀನ್ಸ್ ಪ್ಯಾಂಟ್ ಹಾಗೂ ಟೀ ಶರ್ಟ್ ಹಾಕೊಳ್ಳಿರಿ. ಯಾರು ಬೇಡ ಅಂತಾರೆ' ಅಂದಾಗ ಶಿವಪ್ರಕಾಶ ನಗುತ್ತಾ 'ನೀನೇ ಮದುವಿ ಹುಡುಗಿ ಆಗಿಯಲ್ಲೇ..? ಬನ್ನಿ ಬನ್ನಿ ಬೇಗ ಕಾರ್ ಹತ್ತಿ ಮತ್ತೆ ತಡ ಮಾಡೂದು ಬೇಡ' ಎನ್ನುತ್ತಿರುವಂತೆ ಎಲ್ಲರೂ ಕಾರ್ ಹತ್ತಿದರು. ಇವರನ್ನು ಬೀಳ್ಕೊಡಲು ಮಗ ನವೀನ ಮನೆಯ ಮೇಲಿನ ಬಾಲ್ಕನಿಯಲ್ಲಿ ನಿಂತಿದ್ದ. ಕಾರ್ ಸ್ಟಾರ್ಟ್ ಆಗುತ್ತಿರುವಂತೆ ಒಂದು ಸಾರಿ ಭೂಮಿ ಅಲ್ಲಾಡಿದಂತಾಯ್ತು. ಡ್ರೈವರ್ 'ಸರ್ ಭೂಕಂಪ.. ಭೂಕಂಪ' ಅನ್ನುವುದರೊಳಗೆ ಮನೆ ನೆಲಸಮವಾಗಿತ್ತು, ಮಗ ನವೀನ ಆ ಕಟ್ಟಡದ ಅವಶೇಷಗಳ ಅಡಿ ಸಿಕ್ಕು ನರಳುತ್ತಿದ್ದ. ತಕ್ಷಣವೇ ಶಿವಪ್ರಕಾಶ ಕಾರಿನ ಬಾಗಿಲು ತೆಗೆದು ಧಾವಿಸಿ ಕೆಳಗಿಳಿದ... ಸುತ್ತಲೂ ಕತ್ತಲು ಮುಸುಕಿದೆ. ದೇವರ ಕೋಣೆಯ ಜೀರೋ ಬಲ್ಬು ಕೂಡಾ ಕಣ್ಣು ಮುಚ್ಚಿದೆ. ಆಗಲೇ ಆತನಿಗೆ ವಿದ್ಯುತ್ ಇಲ್ಲ ಎನ್ನುವುದು ಖಾತ್ರಿಯಾಯಿತು. ಶಿವಪ್ರಕಾಶ ಹೆದರಿ ಪೂರ್ತಿ ಹುಸಿಹುಸಿಯಾಗಿದ್ದ. ಹೊರಗಡೆ ನಾಯಿಗಳು ಬೊಗಳುವ ಸದ್ದು. ಸಮಯ ಆಗ ರಾತ್ರಿ ಎರಡು ಗಂಟೆ ಎದ್ದು ನೀರು ಕುಡಿದು 'ಛೇ ದರಿದ್ರ ಕನಸು' ಎಂದು ಗೊಣಗಿ ಮತ್ತೆ ಮಲಗಿದ.

*******

ಶಿವಪ್ರಕಾಶನಿಗೆ ಈಗೀಗ ಏಕಾಗ್ರತೆಯಿಂದ ಕೆಲಸ ಮಾಡಲಾಗುತ್ತಿಲ್ಲ, ಏನೋ ಒಂದು ಬಗೆಯ ಮಾನಸಿಕ ಕಿರಿಕಿರಿ ಬೆನ್ನಿಗೆ ಬಿದ್ದ ಅನುಭವ. ಕಾಲೇಜಿನಲ್ಲಿ ವಿದ್ಯಾರ್ಥಿಗಳೊಂದಿಗೂ ಈಗ ಮುಂಚಿನಂತೆ ಅಂತರಕ್ರಿಯೆಯಲ್ಲಿ ತೊಡಗುತ್ತಿಲ್ಲ, ಏನೋ ಯೋಚನೆ. ಯಾವುದೋ ನೆನಪು-ಇದ್ದಕ್ಕಿದ್ದಂತೆ ಕಳೆದುಹೋಗಿರುವುದರ ಅನುಭವ ಅವನನ್ನು ಬಾಧಿಸುತ್ತಿತ್ತು, ಅವನನ್ನು ನೋಡಿ ಈಗ ಯಾವ ಕೆಲಸವನ್ನೂ ಮಾಡುವಂತಿಲ್ಲ, ಮತ್ತೆ ಮತ್ತೆ ಅದೇ ಕನಸು.. ಅದೇ ಅಪಘಾತ. ಅದೇ ಬಗೆಯ ದೃಶ್ಯ. ರಕ್ತ ಅದರ ಅಲ್ಲಿರುವ ಮುಖಗಳು ಮಾತ್ರ ಮಸುಕು ಮಸುಕು. ಕೆಲ ಬಾರಿ ತನ್ನ ಮಗ.. ಮಗಳು ಆ ಅಪಘಾತದಲ್ಲಿ ಸಿಲುಕಿದ ದೃಶ್ಯಗಳು ಕನಸಿನಲ್ಲಿ ತೇಲಿ ಬಂದಿರುವುದಿದೆ. ಶಿವಪ್ರಕಾಶನ ಮಗ ಮತ್ತು ಮಗಳು ಇಬ್ಬರೂ ಇಂಜಿನಿಯರಿಂಗಲ್ಲಿ ಓದುತ್ತಿದ್ದಾರೆ. ಮಗ ಈಗ ಕೊನೆಯ ಸೆಮ್‌ನಲ್ಲಿದ್ದರೆ, ಮಗಳು ಎರಡನೆಯ ಸೆಮ್‌ನಲ್ಲಿ ಓದುತ್ತಿದ್ದಳು. ಅವರಂತೂ ತಮ್ಮ ತಂದೆಯ ಇತ್ತೀಚಿನ ವರ್ತನೆಗಳನ್ನು ಕಂಡು ಈ ಕತೆಗಾರರು, ಸಾಹಿತಿಗಳೇ ಹೀಗೆ ಎಂದು ಷರಾ ಎಳೆದು ಬಿಟ್ಟಾಗಿದೆ. ಶಿವಪ್ರಕಾಶ ಇಲ್ಲಿಯವರೆಗೆ ನೂರಾರು ಕಥೆಗಳನ್ನು ಬರೆದಿದ್ದರೂ ಯಾವ ಕಥೆಯ ಪಾತ್ರಗಳೂ ಇಷ್ಟು ಗಾಢವಾಗಿ ಅವನನ್ನು ಬೆನ್ನಟ್ಟಿರಲಿಲ್ಲ, ಕಲಘಟಗಿ ರಸ್ತೆಯ ಆ ಬೈಪಾಸ್‌ನಲ್ಲಿ ತಲೆ ಎತ್ತಿದ ಆ ಅಪಘಾತದ ಕಥೆ ಮಾತ್ರ ಅವನನ್ನು ಮತ್ತೆ ಮತ್ತೆ ಕ್ಷಣಹೊತ್ತು ವಿಚಲಿತಗೊಳಿಸುವಷ್ಟು ಆಪ್ತವಾಗುವುದಿತ್ತು. ಶಿವಪ್ರಕಾಶನ ದೈನಂದಿನ ಬದುಕಿನ ಒಟ್ಟು ವ್ಯವಹಾರಗಳಲ್ಲಿ ಚೂರುಪಾರು ಆ ಕಥೆಯ ಸನ್ನಿವೇಶ, ಪಾತ್ರ, ಸಂಭಾಷಣೆ ಇಣುಕುತ್ತಿದ್ದವು. ಆತ ಅವೆಲ್ಲವುಗಳಿಂದ ತಪ್ಪಿಸಿಕೊಳ್ಳಲೆತ್ನಿಸಿದಷ್ಟೂ ಅವು ಗಾಢವಾಗುತ್ತಿದ್ದವು. ಅದು ಏಕೆ ಹಾಗೆ..? ಎನ್ನುವ ಪ್ರಶ್ನೆ ಶಿವಪ್ರಕಾಶನನ್ನು ಮತ್ತೆ ಮತ್ತೆ ಕಾಡುತ್ತಿತ್ತು, ಶಿವಪ್ರಕಾಶ ತನ್ನ ಕಾರನ್ನು ಡ್ರೈವ್ ಮಾಡುವಾಗಲಂತೂ ಆ ಅಪಘಾತದ ಕಥೆಯೊಳಗಿನ ತಿರುವುಗಳು ಮತ್ತು ಆ ಅಪಘಾತದ ದೃಶ್ಯ ತನ್ನ ಕಣ್ಣೆದುರಿಗಿನ ರಸ್ತೆಯ ಮೇಲೆ ಇದ್ದಕ್ಕಿದ್ದಂತೆ ಒಂದು ಸಿನೆಮಾ ದೃಶ್ಯದಂತೆ ಚಕ್ಕನೇ ಮೂಡಿ ಮಾಯವಾಗಿಬಿಡುತಿದ್ದವು. ಹೀಗೆ ಚಕ್ಕನೆ ಮೂಡಿ ಮಾಯವಾಗುವ ಮನಸಿನ ಮಾಯಾಲೋಕ ಎರಡು ಬಾರಿ ಶಿವಪ್ರಕಾಶನನ್ನು ದೊಡ್ಡ ಅಪಘಾತದಿಂದ ತಪ್ಪಿಸಿದ್ದವು. ಈಗೀಗ ದೂರದ ಸ್ಥಳಗಳಿಗೆ ತೆರಳುವುದಿದ್ದರೆ ಒಬ್ಬ ಡ್ರೈವರನ್ನು ಗೊತ್ತುಮಾಡಿಕೊಂಡೇ ಆತ ಹೊರಡುತ್ತಿದ್ದ ಶಿವಪ್ರಕಾಶ ಮನೆಯಲ್ಲಿ ತಾನು ತುಂಬಾ ಅಲರ್ಟ್ ಆಗಿ ಡ್ರೈವಿಂಗ್ ಮಾಡುತ್ತೇನೆ ಎಂದಾಗಲೆಲ್ಲಾ ಹೆಂಡತಿ ಪ್ರಮೀಳಾ 'ನೋಡಿದಿನಲ್ಲಾ, ಹಾವೇರಿ ಕ್ರಾಸ್ ಬಳಿ ಕೂದಲೆಳೆ ಅಂತರದಲ್ಲಿ ನಾವೆಲ್ಲಾ ಬಚಾವಾದದ್ದು' ಎಂದಾಗ ಅವನಿಗೆ ಮರು ಮಾತನಾಡಲಾಗುತ್ತಿಲ್ಲ.

ಸ್ಟಾಫ್ ರೂಮಲ್ಲಿ ಒಬ್ಬನೆ ಕುಳಿತಿರುವಾಗ ತನ್ನ 'ಅಪಘಾತ' ಎಂಬ ಕಥೆಯನ್ನು ನೆನಪು ಮಾಡಿಕೊಂಡು ಎಲ್ಲ ಕಥೆಗಳೂ ಒಂದೊಮ್ಮೆ ಕತೆಗಾರನನ್ನು ಹೀಗೆಯೇ ಬೆನ್ನಿಗೆ ಬಿದ್ದರೆ ಅವನ ಮನಸ್ಥಿತಿ ಹೇಗಿರಬೇಡ ಎಂದು ಯೋಚಿಸಿ ಒಬ್ಬನೇ ನಗುತ್ತಾ ಕುಳಿತಿರುವ ವೇಳೆಯಲ್ಲಿ ಪ್ರಿನ್ಸಿಪಾಲ್ ವೇಣುಗೋಪಾಲ್ 'ಶಿವಪ್ರಕಾಶ, ನಿಮ್ಮ ಪೀರಿಯಡ್ ಇದೆಯಂತಲ್ಲ.. ಹುಡುಗರು ಕೇಳ್ತಾ ಬಂದಿದ್ದರು' ಅಂದಾಗ ಶಿವಪ್ರಕಾಶ ಗಡಬಡಿಸಿ 'ಓ ಸಾರಿ ಸರ್, ಮರೆತು ಬಿಟ್ಟಿದ್ದೆ' ಎನ್ನುತ್ತ ತರಗತಿಗೆ ನಡೆದ. ಇತ್ತೀಚಿನ ದಿನಗಳಲ್ಲಿ ಶಿವಪ್ರಕಾಶ ಮತ್ತೆ ಕತೆ ಬರೆಯಲೇ ಇಲ್ಲ, ಬರೆಯಬೇಕೆಂದು ಕುಳಿತಾಗಲೆಲ್ಲಾ ಮತ್ತದೇ ಕಲಘಟಗಿ ಬೈಪಾಸ್ ಹೈವೇ.. ರಸ್ತೆಯ ತಿರುವು.. ಅಪಘಾತ.. ರಕ್ತ.. ಪೋಲಿಸು ಹೀಗೆ ಇನ್ನೂ ಏನೇನೋ ನೆನಪಾಗಿ ಬರೆಯಬೇಕೆಂದು ಹೊರಟ ಕತೆ ತುಂಡು ತುಂಡಾಗುತ್ತಿತ್ತು.

ಶಿವಪ್ರಕಾಶನ ಆ 'ಅಪಘಾತ' ಕಥೆಯಲ್ಲಿ ಮದುವೆಯಾದ ಮೊದಲ ದಿನವೇ ಕಲಘಟಗಿ ಕ್ರಾಸಿನ ಅಪಘಾತದಲ್ಲಿ ಹುಡುಗ-ಹುಡುಗಿ ಇಬ್ಬರೂ ಇಲ್ಲವಾಗುತ್ತಾರೆ. ಜೊತೆಗಿರುವ ಹುಡುಗನ ತಂದೆ-ತಾಯಿ ಬದುಕಿ ಉಳಿದಿರುತ್ತಾರೆ. ಒಬ್ಬನೇ ಮಗನ ಸಾವು ಕಣ್ಣಾರೆ ಕಂಡ ಹೆತ್ತವರ ಆಕ್ರಂದನಗಳು ಕತೆಗಾರ ಶಿವಪ್ರಕಾಶನ ಮನದ ಮೂಲೆಯಲ್ಲಿ ಅಮೂರ್ತವಾಗಿ ಉಳಿದುಬಿಟ್ಟಿದ್ದವು. ಹೇಗಾದರೂ ಮಾಡಿ ಅದನ್ನು ಮರೆಯಲೇಬೇಕು ಎಂದು ಪ್ರಯತ್ನಿಸುತ್ತಿರುವಾಗಲೇ ಅಪಘಾತದ ಸುದ್ದಿಯ ಚಿತ್ರಗಳು ಟಿ.ವಿ ಇಲ್ಲವೇ ಪತ್ರಿಕೆಯಲ್ಲಿ ಬಂದದ್ದೇ ಮತ್ತೆ ಆ ಕಥೆಯ ಪಾತ್ರಗಳು ಜೀವಂತವಾಗಿ ಕಾಡುತ್ತಿದ್ದವು. ಈಗೀಗ ಶಿವಪ್ರಕಾಶನಿಗೆ ತಾನು ಒಬ್ಬ ಮನೋವೈದ್ಯರನ್ನು ಭೇಟಿಯಾಗುವ ಅವಶ್ಯಕತೆಯಿದೆ ಎಂದೆನಿಸುತ್ತಿದೆ. ಆ ದಿಶೆಯಲ್ಲಿ ಅದಾಗಲೇ ಆತ ಡಾಕ್ಟರ್ ಪ್ರದೀಪಕುಮಾರ ಅವರ ಭೇಟಿಗಾಗಿ ಸಮಯವನ್ನು ನಿಗದಿಪಡಿಸಿಕೊಂಡಿದ್ದಾನೆ.

ಶಿವಪ್ರಕಾಶನಿಗೆ ಈ ಮುಂಚೆ ಕನಸುಗಳು ಬೀಳುವುದೇ ಅಪರೂಪವಾಗಿತ್ತು. ಕಳೆದ ಒಂದು ವರ್ಷದಿಂದ ಕನಸುಗಳು ಅವನ ನಿದ್ದೆಯನ್ನೇ ಗುತ್ತಿಗೆ ಹಿಡಿದಂತೆ ಬೀಳುತ್ತಿವೆ. ತೀರಾ ಅಪರೂಪಕ್ಕೊಮ್ಮೆ ಒಳ್ಳೆಯ ಕನಸುಗಳನ್ನು ಬಿಟ್ಟರೆ ಬಹುತೇಕವಾಗಿ ಸಾವು-ನೋವುಗಳಿಗೆ ಸಂಬಂಧಿಸಿದ ಕನಸುಗಳೇ.. ಅದರಲ್ಲೂ ತನ್ನ ಕುಟುಂಬದವರೇ ಹೀಗೆ ಮತ್ತೆ ಮತ್ತೆ ಕನಸಿನಲ್ಲಿ ಸಾಯುವುದಿತ್ತು. ಒಂದು ಬಾರಿ ಸ್ವತಃ ಶಿವಪ್ರಕಾಶ ತನ್ನ ಸಾವನ್ನು ಅದಕ್ಕೆ ಸಿಗಬಹುದಾದ ಪ್ರತಿಕ್ರಿಯೆಯನ್ನು ಕೂಡಾ ಕನಸಿನಲ್ಲಿ ಕಂಡಿದ್ದಾನೆ. ಮರುದಿನ ತಾನು ಕನಸಿನ

ಪತ್ತೆ. ಯಾಕೆ ಸತ್ತೆ ಎನ್ನುವ ಪ್ರಶ್ನೆಗಳಿಗೆ ಉತ್ತರಗಳನ್ನು ಕಲೆಹಾಕಿ ಸೋತಿದ್ದ. ಕೊನೆಗೆ ಕನಸಿನಲ್ಲಿಯ ಸಾವು ...ಷ್ಯವನ್ನು ಹೇಳುತ್ತದೆ ಎನ್ನುವ ತನ್ನ ಅಪ್ಪನ ಮಾತನ್ನು ... ನಿಟ್ಟುಸಿರುಬಿಟ್ಟಿದ್ದ. ಕತೆಯೊಂದು ಕನಸಾಗಿ ಈ ...ಕಾಡುತ್ತದೆ ಎಂದು ಆತ ಕನಸುಮನಸಿನಲ್ಲಿಯೂ ...ಚಿಸಿರಲಿಲ್ಲ. ಹೀಗೆ ಬೆಂಬಿಡದೇ ಕಾಡುತ್ತಿರುವ ಆ ... ಪಾತ್ರಗಳು.. ಸನ್ನಿವೇಶಗಳು.. ಇವನ್ನಾಧರಿಸಿದ ... ಕುರಿತೇ ಒಂದು ಕತೆ ಬರೆಯಬೇಕೆಂದು ಹೊರಟ ...ತನಿಗೆ ಬೀಳುವ ಬಹುತೇಕ ಕನಸುಗಳಲ್ಲಿಯ ಆರಂಭ ... ಅಂತ್ಯಗಳೆರಡೂ ಅಸ್ಪಷ್ಟವಾಗಿರುತ್ತಿದ್ದುದೇ ಆತ ಕತೆ ...ಯುವಲ್ಲಿ ಒಂದು ಬಹುದೊಡ್ಡ ತೊಡಕಾಗಿತ್ತು.

* * * * *

...ರವಾಡದ ಕೆಲಗೇರಿ ರಸ್ತೆಯಲ್ಲಿರುವ ಡಾ. ಪ್ರದೀಪ ...ಮಾನಸೋಲ್ಲಾಸ ಆಸ್ಪತ್ರೆ ಈಗೀಗ ತುಂಬಾ ಗಿಜಿಬಿಜಿ. ...ಡಾಕ್ಟರೇ ಶಿವಪ್ರಕಾಶನ ಮುಂದೆ ಹಿಂದೆಂದಿಗಿಂತಲೂ ...ನಗರಗಳಲ್ಲಿ ಮನೋರೋಗಿಗಳ ಪ್ರಮಾಣ ತುಂಬಾ ...ಗುತ್ತಿದೆ ಎಂದು ಹೇಳಿದರು. ಮಹಾನಗರಗಳಲ್ಲಿ ... ಹತ್ತು ಜನರಲ್ಲಿ ಒಬ್ಬಾತ ಒಂದಲ್ಲ ಒಂದು ...ರೋಗದಿಂದ ಬಳಲುತ್ತಿದ್ದಾರೆಂದು ದೆಹಲಿ ಮೂಲದ ...ಪತ್ರಿಕೆಯೊಂದನ್ನು ಉಲ್ಲೇಖಿಸಿ ಹೇಳಿದರು. ಶಿವಪ್ರಕಾಶ ...ಕೇಂದ್ರಿತ ವಿದ್ಯಾರ್ಥಿಯಂತೆ ಅತ್ಯಂತ ಏಕಾಗ್ರತೆಯಿಂದ ... ಹೇಳುವುದನ್ನೆಲ್ಲಾ ಕಣ್ಣಗಲಿಸಿ ಕೇಳುತ್ತಿದ್ದ. ಡಾಕ್ಟರ್ ...ತನ್ನ ವಿಷಯವನ್ನು ಪ್ರಸ್ತಾಪಿಸುವುದು ಎಲ್ಲಿಂದ..? ...ಈಗೀಗ ನಿದ್ದೆ ಸರಿಯಾಗಿ ಬೀಳುವುದಿಲ್ಲ ಎಂದೋ.. ... ಬರೀ ಕೆಟ್ಟಕೆಟ್ಟ ಕನಸುಗಳು ಬೀಳುತ್ತವೆ ಎಂದೋ.. ಅಪಘಾತದ ಕನಸುಗಳೇ ಯಾಕೆ ಬೀಳುತ್ತವೆ ...ದೋ..? ಹೀಗೆ ಹತ್ತಾರು ಪ್ರಶ್ನೆಗಳು ನಾ ಮುಂದು.. ...ಮುಂದು ಎಂದು ಆತನ ಮನದ ಮೊನೆಯ ಕೊನೆಯ ... ನಿಂತಿದ್ದವು. ಶಿವಪ್ರಕಾಶ ಆಂಗ್ಲಭಾಷಾ ಅಧ್ಯಾಪಕ ... ತಿಳಿದದ್ದೇ ಡಾಕ್ಟರ್ ಮನುಷ್ಯನ ಮನಸಿನ ವಿವಿಧ ...ಂಗಳನ್ನು.. ಸಿಗ್ಮಂಡ್ ಫ್ರಾಯ್ಡ್‌ನ ಕನಸುಗಳ ...ಷಣೆಯನ್ನು ತುಂಬಾ ರೋಚಕವಾಗಿ ಹೇಳಿದರು. ...ಮೂಲಕ ತಾನು ಮನಃಶಾಸ್ತ್ರವನ್ನು ತುಂಬಾ ಆಳವಾಗಿ ...ದಿವೆ ಎನ್ನುವುದನ್ನು ಸಾಬೀತುಪಡಿಸುವುದು ಅವರ ...ಶವಾಗಿತ್ತು.

...ಈಗ ನಿಮ್ಮ ವಿಷಯಕ್ಕೆ ...ಣ. ಹೇಳಿ ಏನು ...ಟ್ಟ..?' ಎಂದಾಗ ಅತ್ಯಂತ ...ಕಾಗಿ ಶಿವಪ್ರಕಾಶ ತಾನು ... ಕಥೆ, ಅಪಘಾತ, ...ಸ್ ರಸ್ತೆ, ಕಲಘಟಗಿ ... ಇವೆಲ್ಲವೂ ಕನಸಿನಲ್ಲಿ ...ನ್ನೊಂದು ರೂಪದಲ್ಲಿ ಬಂದು ... ಕಾಡುವ ಬಗ್ಗೆ, ಆ ...ನಲ್ಲಿ ತನಗೆ ಆಪ್ತರಾದವರೊಬ್ಬರು ...ಯುವ ಬಗ್ಗೆ ಡಾಕ್ಟರ್ ಎದುರು ಹೇಳಿಕೊಂಡ.

... ಹೇಳುತ್ತಲೇ 'ಕೆಲಬಾರಿ ಹಗಲು ಹೊತ್ತಿನಲ್ಲಿಯೂ ...ಬಗೆಯ ಮೂರ್ನಾಲ್ಕು ರಸ್ತೆಗಳು ಕೂಡುವ ತಿರುವು ... ಕಂಡ ತಕ್ಷಣ ನನ್ನ ಕಥೆಯೊಳಗಿನ ಪ್ರತಿಮೆಗಳು.. ...ವೇಶಗಳು ನೆನಪಾಗುತ್ತವೆ. ಒಂದು ಬಾರಿಯಂತೂ ...ರಲೆಳೆಯ ಅಂತರದಲ್ಲಿ ನನ್ನದೇ ಕಾರು ಅಪಘಾತದಿಂದ ...ಪ್ ಆದದ್ದಿದೆ. ಇದೆಲ್ಲಾ ಏನು..? ಯಾಕೆ ಹೀಗೆ..? ...ನ ಪ್ರಶ್ನೆ ನನ್ನನ್ನು ಅನೇಕ ಬಾರಿ ಕಾಡಿದೆ. ಒಂದು ...ಯಂತೂ ತರಗತಿಯಲ್ಲಿ ನಾನು ಪಾಠ ಮಾಡುವ ... ರಸ್ತೆಯಲ್ಲಿ ಯಾವುದೋ ಒಂದು ವಾಹನ ಚೊಂಯ್.. ...ಮ ತೀಕ್ಷ್ಣವಾಗಿ ಬ್ರೇಕ್ ಹಾಕಿದ್ದೇ ನಾನು ಪ್ರಜ್ಞಾತೀತನಾಗಿ ...ಲ್ಲಿಯ ಪುಸ್ತಕವನ್ನೇ ಬಿಟ್ಟೆ' ಎಂದು ಹೇಳಿ ಕಣ್ಣುಮುಚ್ಚಿ ...ತ. ಒಂದು ದೀರ್ಘವಾದ ಉಸಿರು.. ನಿಟ್ಟುಸಿರು. ...ರ್ ಪ್ರದೀಪ ಶಿವಪ್ರಕಾಶ ಹೇಳಿದ್ದನ್ನು ಮತ್ತು ಅವನ ...ಖದಲ್ಲಿಯ ಹಾವಭಾವವನ್ನು ಅತ್ಯಂತ ಸೂಕ್ಷ್ಮವಾಗಿ ...ನಿಸಿದ. ಅವಶ್ಯಕ ಎನಿಸಿದ್ದನ್ನು ಎದುರಲ್ಲಿರುವ ...ರ್‌ಹೆಡ್‌ನಲ್ಲಿ ನೋಟ್ ಮಾಡಿಕೊಂಡಿದ್ದ. ಶಿವಪ್ರಕಾಶ ... ಕಥೆಯನ್ನೆಲ್ಲಾ ಕೇಳಿ ಮುಗಿಸಿದ ಮೇಲೆ ಡಾಕ್ಟರ್ ... ಕೈಯಲ್ಲಿಯ ಪೆನ್ನನ್ನು ಹಾಗೇ ಕೈಬಿಟ್ಟು ಹಿಂದೆ ...ಆರಾಮ ಕುರ್ಚಿಯ ಮೇಲೆ ಕುಳಿತು ತಿರುಗುತ್ತಿರುವ ...ನ್ನು ದಿಟ್ಟಿಸುತ್ತಾ ಏನನ್ನೋ ಯೋಚಿಸುತ್ತಿದ್ದ. ನಂತರ ...ಪ್ರಕಾಶನೆಡೆಗೆ ನೋಡಿ 'ಹೀಗೆ ನಿಮಗೆ ಕನಸು ...ವುದು; ಡ್ರೈವಿಂಗ್ ಮಾಡುವಾಗ ಭಯವಾಗುವುದು ...ವಾಗಿನಿಂದ ಶುರುವಾಗಿದೆ..?'

'ಹೆಚ್ಚೂಕಡಿಮೆ ಒಂದು ವರ್ಷ ಆಗಿರಬೇಕು.'

'ನಿಖರವಾಗಿ ದಿನ.. ತಿಂಗಳು.. ಏನಾದರೂ..'

'...ದೇ ದಿನ ಅಂತ ಗೊತ್ತಿಲ್ಲ, ಕಳೆದ ಫೆಬ್ರವರಿ ... ಅಂತ ಗೊತ್ತಿದೆ.'

'ನಥಿಂಗ್ ಟು ವರಿ ಪ್ರೊಫೆಸರ್, ಇದು ನಗರಗಳಲ್ಲಿ ಈಗ ಮಾಮೂಲು.. ನೀವು ಫೋಬಿಯಾ ಅಂತ ಕೇಳಿದ್ದಿರಾ..?'


'ಹೌದು ಕೇಳಿರುವೆ.'

'ಅದೇ ಇದು. **A fear becomes phobia when an object or a situation is so dreaded that an individual goes to almost any length to avoid it.** ಬೇಸಿಕಲೀ ಹೇಳಬೇಕಂದ್ರೆ ಬಹುಶಃ ನಿಮಗೆ ಕಂಫರ್ಟ್ ಆಗಿ ಕಾರ್ ಡ್ರೈವಿಂಗ್ ಮಾಡಲಾಗಲಿಕ್ಕಿಲ್ಲ, ಇಜ್ ಇಟ್ ರೈಟ್..?' ಅಂತ ಕೇಳುತ್ತಿರುವಂತೆ ಶಿವಪ್ರಕಾಶ 'ಹೌದು ಹೌದು.. ಈಗಂತೂ ಭಯ ಇನ್ನೂ ಜಾಸ್ತಿ.'

'ಅದನ್ನೇ ನಾನೂ ಹೇಳ್ತಾ ಇರೋದು. ಈ ಸ್ಥಿತಿಯನ್ನು ನಾವು ಮನೋವಿಜ್ಞಾನದಲ್ಲಿ ಅಮಾಕ್ಸೋ ಫೋಬಿಯಾ ಎನ್ನುತ್ತೇವೆ. ಅಂದರೆ **fear of automobiles** ಅಂತ. ನೀವು ಹೇಳುವುದನ್ನೆಲ್ಲಾ ಕೇಳಿದರೆ ಇದರ ಜೊತೆಗೆ ನಿಮ್ಮಲ್ಲಿ ಸೋಶಿಯಲ್ ಫೋಬಿಯಾದ ಕೆಲ ಲಕ್ಷಣಗಳೂ ಇವೆ ಎನಿಸುತ್ತದೆ. ಇಲ್ಲಿ ನೀವು ಬರೆದಿರೋ ಆ ಕಥೆ ಒಂದು ನೆಪಮಾತ್ರ. ಹೆದರಬೇಡಿ, ಏನೂ ಆಗಲ್ಲ, ತಕ್ಷಣದಿಂದಲೇ ಟ್ರೀಟಮೆಂಟ್ ಶುರು. ಸದ್ಯಕ್ಕೆ ಈ ಮಾತ್ರೆಗಳನ್ನು ದಿನಕ್ಕೆ ಎರಡರಂತೆ ತಗೊಳ್ಳಿ. ಒಂದು ವಾರ ಬಿಟ್ಟು ಬನ್ನಿ. ಕೂಲಾಗಿ ಡ್ರೈವ್ ಮಾಡಿ. ಏನೂ ಆಗಲ್ಲ ಹೆದರಿಕೋಬೇಡಿ. ಸಿಟಿಯೊಳಗೆ ಸರ್ಕಲ್ ಇರೋ ಜಾಗೆಯಲ್ಲಿ ಕಾರ್ ಓಡಿಸುವಾಗ ಭಯ ಬೇಡ. ಆರಾಮಾಗೆ ಓಡಿಸಿ. ಒಂದು ವಾರ ಕಳೀಲಿ.. ಮುಂದಿನ ಸೋಮವಾರ ಬನ್ನಿ' ಎನ್ನುತ್ತ ಮಾತ್ರೆ ಚೀಟಿಯನ್ನು ಶಿವಪ್ರಕಾಶನ ಕೈಗಿಟ್ಟರು.

*******

ಡಾಕ್ಟರ್ ಸಲಹೆಯಂತೆ ದಿನಾಲು ಬೆಳಗ್ಗೆ ಒಂದು ಸುತ್ತು ಮತ್ತು ಸಿಟಿಯಲ್ಲಿ ಮೂರು ರಸ್ತೆ ಸೇರುವ ಸರ್ಕಲ್‌ಗಳಲ್ಲಿ ಕಾರ್ ಓಡಿಸತೊಡಗಿದ. ಡ್ರೈವ್ ಮಾಡುವಾಗ ತುಂಬಾ ಅಲರ್ಟ್ ಆಗಿರುತ್ತಿದ್ದ. ರಸ್ತೆಯನ್ನು ಬಿಟ್ಟರೆ ಯಾವುದನ್ನೂ ಗಮನಿಸುತ್ತಿರಲಿಲ್ಲ. ಮೊದಲಿನ ಹಾಗೆ ಹೆದರಿಕೆಯಾಗಲೀ, ಆ ಬಗೆಯ ಅಪಘಾತದ ಕನಸುಗಳಾಗಲೀ ಅವನನ್ನು ಕಾಡಲಿಲ್ಲ. ಶಿವಪ್ರಕಾಶ ಈಗ ತುಸು ಗೆಲುವಾಗಿದ್ದ ಎನ್ನುವುದನ್ನು ಅವನ ಮನೆಯವರೆಲ್ಲರೂ ಗುರುತಿಸಿದರು. ಆ ದಿನ ರವಿವಾರ ಹೀಗೇ ಒಂದೆರಡು ಸುತ್ತು ಕಾರನ್ನು ಓಡಿಸಿ, ಮನೆಯ ಕಾಂಪೌಂಡಲ್ಲಿ ಅದನ್ನು ಹಚ್ಚುವಾಗ ಗೇಟಿಗೆ ಕಾರು ತಾಗಿ ಅದರ ಮುಂಭಾಗ ಕೊಂಚ ವಿಕಾರವಾಯಿತು. ಅತ್ಯಂತ ಕಾಳಜಿಯಿಂದ ಇಲ್ಲಿಯವರೆಗೆ ಒಂದೇ ಒಂದು ಗೆರೆ ಕೂಡ ಕಾರ್ ಮೇಲೆ ಮೂಡದಂತೆ ಎಚ್ಚರಿಕೆ ವಹಿಸಿದ್ದ ಶಿವಪ್ರಕಾಶನಿಗೆ ಆ ದಿನದ ಘಟನೆಯಿಂದ ತುಂಬಾ ಬೇಜಾರಾಯಿತು. ಇಡೀ ದಿನ ಅದೇ ಯೋಚನೆ ತಲೆ ಸುತ್ತಿದಂತಿತ್ತು, ಮನಸು ಗಟ್ಟಿ ಮಾಡಿಕೊಂಡ. ಹೆದರಿದರೆ ಇನ್ನೂ ಕಷ್ಟ. ತಾನು ಆ ಅಮಾಕ್ಸೊ ಫೋಬಿಯಾದಿಂದ ಹೊರಬರಲೇಬೇಕು ಎಂದೆಲ್ಲಾ ಯೋಚಿಸಿ ಆ ದಿನ ಬೆಳಗ್ಗೆ ಡ್ರೈವ್‌ಗೆಂದು ಹುಬ್ಬಳ್ಳಿ ಧಾರವಾಡ ಬೈಪಾಸ್ ಕಡೆ ಕಲಘಟಗಿ ರಸ್ತೆಯ ಮೇಲೆ ಹೋದ. ಮನೆಯಲ್ಲಿ ಹಾಗೆಂದು ಹೇಳಿರಲಿಲ್ಲ, ಅದೇನಾಗುತ್ತೋ ನೋಡೋಣ ಎಂದು ಹೊರಟಿದ್ದ. ಸೀಟ್ ಬೆಲ್ಟ್ ಧರಿಸಿ ತುಂಬಾ ಫ್ರೀ ಆಗಿ ಡ್ರೈವಿಂಗ್ ಮಾಡತೊಡಗಿದ. ಕಾರು ರಸ್ತೆಯನ್ನು ಹಾಗೇ ನುಂಗುತ್ತಲೇ ಇತ್ತು. ನುಗ್ಗಿಕೇರಿ ಕ್ರಾಸ್ ದಾಟುವವರೆಗೂ ಎಲ್ಲವೂ ವ್ಯವಸ್ಥಿತವಾಗಿಯೇ ಇತ್ತು. ಬೈಪಾಸ್ ಹತ್ತಿರ ಬರುತ್ತಿದ್ದಂತೆ ಅದೇನಾಯಿತೋ ಏನೋ.. ಶಿವಪ್ರಕಾಶ ಕಾರಲ್ಲಿ ಎ.ಸಿ. ಇದ್ದರೂ ವಿಪರೀತ ಬೆವರತೊಡಗಿದ. ಅವನಿಗೆ ಇದ್ದಕ್ಕಿದ್ದಂತೆ ತನ್ನ ಕಥೆಯ ಪ್ರತಿಮೆಗಳು.. ಸನ್ನಿವೇಶಗಳು.. ನಿಚ್ಚಳವಾಗಿ ನೆನಪಾಗತೊಡಗಿದವು. ಮನಸನ್ನು ಬೇಡ ಬೇಡ ಎಂದು ತಡೆದರೂ ಅದು ಕಥೆಯೊಳಗಿನ ಅಪಘಾತದ ಜಾಗ, ಜಜ್ಜಿ ಹೋದ ಕಾರು, ಹೆತ್ತವರ ಆಕ್ರಂದನ, ಗಿಡಕ್ಕೆ ಜಜ್ಜಿದ ಟ್ರಕ್, ಚೆಲ್ಲಿದ ರಕ್ತ ಎಲ್ಲವೂ ನೆನಪಾಗಿ ತಟ್ಟನೇ ವಾಸ್ತವಕ್ಕೆ ಬರುವುದರೊಳಗಾಗಿ ಎಡಬದಿಯ ತಿರುವಿನಿಂದ ಜೋರಾಗಿ ಬಂದ ಟ್ರಕ್ಕೊಂದು 'ಏಂಯ್..!' ಎಂದು ಶಿವಪ್ರಕಾಶ ಚೀರುವುದರೊಳಗೆ ಆತನ ಕಾರನ್ನು ಜೋರಾಗಿ ಅಪ್ಪಳಿಸಿಯೇ ಬಿಟ್ಟಿತು. ಕಾರು ಆ ಹೊಡೆತಕ್ಕೆ ರಸ್ತೆಯ ಅಂಚಿನ ಹತ್ತಾರಿ ಆಳದ ತಗ್ಗಿಗೆ ಮುಖ ಕೆಳಗಾಗಿ ಅಂಗಾತ ಬಿದ್ದುಕೊಂಡಿತು. ಜನರೆಲ್ಲಾ ಓಡಿಬಂದರು. ಡ್ರೈವರ್ ಬದಿಯ ಬಾಗಿಲ ಸಂದಿಯಿಂದ ರಕ್ತ ಹನಿಹನಿಯಾಗಿ ವಸರುತ್ತಿತ್ತು



ತಲ್ಲಣಿಸದಿರು ಮನವೇ

# ಕಠಾರಿವೀರ ಪ್ರತಿಭಟನಾಕಾರರ ಮನಸ್ಥಿತಿ ಕನಿಕರ ಹುಟ್ಟಿಸುತ್ತದೆ

## ಒಂದು ಪತ್ರ

ಇಂದಿಗೆ ಸರಿಸುಮಾರು 25 ವರ್ಷಗಳ ಹಿಂದೆ, ನವರಾತ್ರಿ ಹಬ್ಬವೆಂದರೆ ಸಾಕು, ಪುರಾಣದ ದೇವಾನುದೇವತೆಗಳೆಲ್ಲ ಧರೆಗಿಳಿದು ಬೀದಿಬೀದಿಗಳಲ್ಲಿ ಕಾಣಿಸಿಕೊಳ್ಳುವ ಒಂದು ದಿನ ಮಂಗಳೂರಿನ ಕಂಕನಾಡಿ ರಸ್ತೆಯಲ್ಲಿ ಈಶ್ವರ ಮತ್ತು ಪಾರ್ವತಿ ಪ್ರತ್ಯಕ್ಷರಾಗಿದ್ದರು. ಆಧುನಿಕ ಕಾಲದ ಅಮರಪ್ರೇಮಿಗಳಂತೆ ಪಾರ್ವತಿಯನ್ನು ಮುಂದಿನ ರಾಡ್‌ನಲ್ಲಿ ಕೂರಿಸಿಕೊಂಡು ಈಶ್ವರ ವೇಗವಾಗಿ ಸೈಕಲ್ ಹೊಡೆಯುತ್ತಿದ್ದ ಪರಿಗೆ ರಸ್ತೆ ಬದಿಯಲ್ಲಿದ್ದ ನೋಡುಗರೆಲ್ಲ ಬಿದ್ದು ಬಿದ್ದು ನಗುತ್ತಿದ್ದರು. ಕಲಾವಿದರ ಕಲ್ಪನಾ ಸಾಮರ್ಥ್ಯ ಮತ್ತು ಕರಾವಳಿ ಜನತೆಯ ವಿಶಾಲ ಮನೋಭಾವದ ಒಂದು ಅದ್ಭುತ ರೂಪಕದಂತಿತ್ತು ಆ ದೃಶ್ಯ. ಒಂದು ವೇಷವನ್ನು ವೇಷವಾಗಿಯೇ ನೋಡುವ, ನೋಡಿ ಸಂಭ್ರಮಿಸುವ ಹೃದಯವಂತಿಕೆ ಹೊಂದಿದ್ದ ಜನತೆಗೆ ಪಾರ್ವತಿಯನ್ನು ಈಶ್ವರ ಹೀಗೆ ಸೈಕಲ್ಲಿನಲ್ಲಿ ಕೂರಿಸಿಕೊಂಡು ಸಾಗುತ್ತಿದ್ದುದು ದೇವರ ಅವಹೇಳನವಾಗಿ ಕಂಡಿರಲಿಲ್ಲ. ಅಷ್ಟರಮಟ್ಟಿಗೆ ದೇವರು ಮತ್ತು ದೇವರ ವೇಷದ ನಡುವಣ ವ್ಯತ್ಯಾಸವನ್ನು ಗುರುತಿಸುವ ವಿವೇಚನಾಶಕ್ತಿಯನ್ನು ಅವರು ಹೊಂದಿದ್ದರು. ಇತರ ಮತೀಯರ ಆಚರಣೆಗಳನ್ನು ಸಹಿಸಿಕೊಳ್ಳುವುದು ಮಾತ್ರವಲ್ಲ, ಅವನ್ನು ಗೌರವಿಸುವ, ಅವುಗಳಲ್ಲಿ ತಾವೂ ಪಾಲ್ಗೊಂಡು ಸಂಭ್ರಮಿಸುವ ದೊಡ್ಡಗುಣವನ್ನು ಹೊಂದಿದ್ದರು. ಹಾಗಾಗಿಯೇ ಕರಾವಳಿಯ ಹಬ್ಬ ಹರಿದಿನಗಳೆಂದರೆ, ವರ್ಣಮಯ, ವೈವಿಧ್ಯಮಯ ಸಂಭ್ರಮದ ಪ್ರತೀಕವಾಗಿತ್ತು; ಒಳಗಿನವರು ಹೆಮ್ಮೆ ಪಡುವಂತಿತ್ತು, ಹೊರಗಿನವರು ಮತ್ಸರ ಪಡುವಂತಿತ್ತು.



ಆದರೆ ಎಂಭತ್ತರ ದಶಕದ ಕೊನೆಯ ಭಾಗದ ಬಾಬ್ರಿ ಮಸೀದಿ – ರಾಮಜನ್ಮಭೂಮಿ ಕೋಲಾಹಲ ತೀವ್ರಗೊಳ್ಳುತ್ತಲೇ ಕರಾವಳಿಯ ಸಾಮಾಜಿಕ ಸಾಂಸ್ಕೃತಿಕ ಚರ್ಯೆಯಲ್ಲಿ ಆತಂಕಕಾರಿ ಬದಲಾವಣೆ ಆರಂಭವಾಯಿತು. ದಳಗಳು, ವೇದಿಕೆಗಳು, ಪರಿಷತ್ತುಗಳು, ಸೇನೆಗಳು ಹೀಗೆ ನಾನಾ ಹೆಸರಿನ ಸ್ವಯಂಘೋಷಿತ ಸನಾತನ ಸಂಸ್ಕೃತಿ ರಕ್ಷಣಾ ಗ್ಯಾಂಗುಗಳೆಲ್ಲ ಅಖಾಡಕ್ಕೆ ಇಳಿದು, ಇಡೀ ಕರಾವಳಿಯ ಸಾಂಸ್ಕೃತಿಕ ಆಡಳಿತವನ್ನು ಕೈವಶಮಾಡಿಕೊಂಡು, ಒಂದು ರೀತಿಯ ಭೀತ ಸ್ಥಿತಿಯನ್ನು ನಿರ್ಮಿಸಿಬಿಟ್ಟವು. ನವರಾತ್ರಿಯಲ್ಲಿ ದೇವತೆಗಳ ವೇಷ ಹಾಕಕೂಡದು ಎಂದು ಕಟ್ಟಪ್ಪಣೆ ಹೊರಡಿಸಿದ್ದು ಮಾತ್ರವಲ್ಲ, ಈ ಆಜ್ಞೆಯನ್ನು ಮೀರಿದವರಿಗೆ 'ಪರಿಸ್ಥಿತಿ ನೆಟ್ಟಗಿರಲಿಕ್ಕಿಲ್ಲ' ಎಂಬ ಧಮಕಿಯನ್ನೂ ಹಾಕಲಾಯಿತು. ಚಿತ್ರಕಲಾವಿದರಿಗೆ ಸಾಧ್ಯತೆಯ ಲೋಕವನ್ನೇ ತೆರೆದಿಟ್ಟ ಗಣೇಶನನ್ನು ಸೃಜನಶೀಲ ಗಾಳಿಪಟವಾಗಿಸಿ ಹಾರಿಬಿಟ್ಟರೆ, ದೇವರ ಅವಹೇಳನ ಎಂದು ಬೆದರಿಸಿ ಅದನ್ನು ಬಾನಿನಿಂದ ಇಳಿಸಲಾಯಿತು. ಏಸುವನ್ನು ಕುರಿತ ಯಕ್ಷಗಾನ ಆಡಕೂಡದು ಎಂದು ಬೆದರಿಸಿ ಕೊನೆಯ ಕ್ಷಣದಲ್ಲಿ ಪ್ರದರ್ಶನ ರದ್ದುಗೊಳಿಸುವಂತೆ ಮಾಡಲಾಯಿತು, ಗಣೇಶನನ್ನು ಮನಬಂದಂತೆಲ್ಲ ಚಿತ್ರಿಸಕೂಡದು ಅದು ಒಂದೇ ರೀತಿಯಲ್ಲಿ ಹೀಗೆಯೇ ಇರಬೇಕು ಎಂದು ಚಿತ್ರಕಲಾವಿದರಿಗೆ ನಿರ್ದೇಶನ ನೀಡಲಾಯಿತು. ಹೀಗೆ ಒಟ್ಟಾರೆಯಾಗಿ ವೈವಿಧ್ಯವನ್ನೇ ಉಸಿರಾಗಿದ್ದ ಕರಾವಳಿಯ ಸಂಸ್ಕೃತಿಯ ಬುಡಕ್ಕೇ ಕೊಡಲಿ ಏಟು ಹಾಕಲಾಯಿತು. ಎಲ್ಲೆಡೆ ಏಕರೂಪಿ ಸಂಸ್ಕೃತಿಗೆ ಒತ್ತು, ಬಹುತ್ವಕ್ಕೆ ವಿದಾಯ. ಧಾರ್ಮಿಕ ಕಾರ್ಯಕ್ರಮಗಳೆಂದರೆ ಅಲ್ಲಿ ವೇದಿಕೆ, ಬ್ಯಾನರ್ ಕೊನೆಗೆ ಕುರ್ಚಿಯೂ ಕಡ್ಡಾಯವಾಗಿ ಕೇಸರಿ ಬಣ್ಣದ್ದು; ನೋಡಿದವರಿಗೆ ಅಲ್ಲಿನ ಏಕ ಬಣ್ಣದಿಂದಲೇ ಮನಸು ರೋಗಗ್ರಸ್ತವಾಗುವ ಸ್ಥಿತಿ!

'ಕಠಾರಿವೀರ ಸುರಸುಂದರಾಂಗಿ' ಚಿತ್ರದ ವಿರುದ್ಧ ಸ್ವಾಮೀಜಿಯೊಬ್ಬರ ನೇತೃತ್ವದಲ್ಲಿ ಭಜರಂಗದಳ, ವಿಶ್ವ ಹಿಂದೂ ಪರಿಷತ್, ಶ್ರೀರಾಮ ಸೇನೆ ಮೊದಲಾದ ಸಂಘಟನೆಗಳು ಬೀದಿಗಿಳಿದು ದಾಂಧಲೆ ಮಾಡಿದ್ದು ಕರಾವಳಿಯಲ್ಲಿ ಸೃಷ್ಟಿಯಾಗಿರುವ ಈ ಅಸಹಿಷ್ಣುತೆಯ ಸಂಸ್ಕೃತಿ ಮತ್ತು ನೈತಿಕ ಪೊಲೀಸ್‌ಗಿರಿ ಇನ್ನೊಂದು ಮಜಲನ್ನು ಪ್ರವೇಶಿಸಿರುವ ಸಂಕೇತ. ಪುರಾಣ ಎಂಬುದರ ಅರ್ಥವನ್ನು ಗ್ರಹಿಸುವಷ್ಟು ಸಾಮರ್ಥ್ಯವನ್ನೂ ವ್ಯವಧಾನವನ್ನೂ ಹೊಂದಿರದ ಈ ಮಂದಿಗೆ ದೇವತೆಗಳು ಹೀಗೆಯೇ ಇದ್ದರೆಂದು ಹೇಳಿದವರಾರೋ, ದೇವತೆಗಳ ಮಾನ ರಕ್ಷಣೆಯ ಗುತ್ತಿಗೆಯನ್ನು ಈ ಮಂದಿಗೆ ವಹಿಸಿಕೊಟ್ಟವರಾರೋ ಒಂದೂ ತಿಳಿಯದು. ಒಂದು ಕತೆಯನ್ನು ಕತೆಯಾಗಿ ನೋಡಲಾಗದ, ಸಿನಿಮಾವನ್ನು ಸಿನಿಮಾವನ್ನಾಗಿಯಷ್ಟೇ ನೋಡಿ ನಕ್ಕು ಹಗುರಾಗಲಾಗದ ಇವರ ಮನಸ್ಥಿತಿ ಬಗ್ಗೆ ನಿಜಕ್ಕೂ ಕನಿಕರವೆನಿಸುತ್ತದೆ.


ಸದರಿ ಚಿತ್ರದ ವಿವಾದದ ಸಂದರ್ಭದಲ್ಲಿ ವಾಹಿನಿಯೊಂದು ನಡೆಸಿದ ಚರ್ಚೆಯಲ್ಲಿ ಚಿತ್ರದ ನಿರ್ಮಾಪಕ, ಓರ್ವ ಚಿತ್ರಕತೆಗಾರ ಮತ್ತಿಬ್ಬರು ಕಾವಿಧಾರಿಗಳು ಭಾಗವಹಿಸಿದ್ದರು. ತಾನು ಎಲ್ಲವನ್ನೂ ತಿಳಿದುಕೊಂಡಿದ್ದೇನೆ ಎಂದು ತಪ್ಪಾಗಿ ತಿಳಿದುಕೊಂಡಿರುವ ಸಂತೋಷ ಎಂಬ ಹೆಸರಿನ ಕಾವಿಧಾರಿಯೊಬ್ಬರು ಇಡೀ ಚರ್ಚೆಯನ್ನು ಹೈಜಾಕ್ ಮಾಡಿದರು. ಪುರಾಣವನ್ನು ಪುರಾಣ ಎಂದು ಒಪ್ಪಿಕೊಳ್ಳದ ಆ ಮನುಷ್ಯ ಅದನ್ನು ಚರಿತ್ರೆ, ಅದು ನಡೆದಂಥದು ಎಂದೆಲ್ಲ ವಿತಂಡವಾದವನ್ನು ಮಂಡಿಸುತ್ತಾ ಹೋದರು. ಸಾಲದೆಂಬಂತೆ 'ಹೀಗೆ ದೇವತೆಗಳನ್ನು ಅವಹೇಳನ ಮಾಡಿದವರು ದೇವತೆಗಳ ಕೋಪಕ್ಕೆ ಈಡಾಗುವುದರಲ್ಲಿ ಅನುಮಾನವಿಲ್ಲ' ಎಂದೂ ಎಚ್ಚರಿಸಿದರು. ಇದೇ ಸಂದರ್ಭದಲ್ಲಿ ದೂರವಾಣಿಯ ಮೂಲಕ ಚರ್ಚೆಯಲ್ಲಿ ಪಾಲ್ಗೊಂಡ ಶೀರೂರು ಶ್ರೀಗಳಂತೂ '(ಉಪೇಂದ್ರ) ಬ್ರಾಹ್ಮಣನಾಗಿಯೂ ಹೀಗೆ ಮಾಡುವುದಾ?' ಎಂದು ಜಾತಿ ರಾಜಕಾರಣವನ್ನು ಎಳೆತಂದುದೇ ಅಲ್ಲದೆ, 'ಹೇಗೆ ಪ್ರತಿಭಟಿಸಬೇಕೆಂದು ನಮಗೆ ಗೊತ್ತು' ಎಂದು ಅಪ್ಪಟ ಭಜರಂಗದಳದ ಕಾರ್ಯಕರ್ತನ ಮಾದರಿಯಲ್ಲಿ ಧಮಕಿ ಹಾಕಿದರು. ಸ್ವಾಮೀಜಿಯ ಧಮಕಿಯ ಮಾತುಗಳನ್ನು ಕೇಳುವಾಗ ಶ್ರೀರಾಮಸೇನೆಯ ಶರಣ್ ಪಂಪ್‌ವೆಲ್, ಮುತಾಲಿಕ್ ಮೊದಲಾದವರ ಮಾತಿನ ಧಾಟಿ ಬೇಡವೆಂದರೂ ನೆನಪಾಗುವಂತಿತ್ತು.


ಈ ಬಾರಿಯ ಕರ್ನಾಟಕ ಬಜೆಟ್ ಮಂಡನೆಗೆ ಕೊಂಚ ಪೂರ್ವದಲ್ಲಿ ತಮ್ಮ ಹಕ್ಕೊತ್ತಾಯವನ್ನು ಮಂಡಿಸಲು ಕಾವಿಧಾರಿಗಳ ದೊಡ್ಡ ಗುಂಪೊಂದು ಮುಖ್ಯಮಂತ್ರಿಗಳನ್ನು ಭೇಟಿಯಾಗಿದ್ದು, ಇದರಲ್ಲಿದ್ದವರೆಲ್ಲ ಅಸಲಿ ಸ್ವಾಮೀಜಿಗಳಲ್ಲ, ಕೆಲವು ಕಾವಿ ವೇಷಧಾರಿಗಳೂ ಇದ್ದರು ಎಂದು ಇತ್ತೀಚೆಗೆ ಸ್ವತಃ ಓರ್ವ ಮಠಾಧೀಶರೇ ಸುದ್ದಿಸ್ಫೋಟ ಮಾಡಿದ್ದಾರೆ. ಬಿಜೆಪಿ ಆಡಳಿತದ ಕರ್ನಾಟಕದಲ್ಲಿ ಮತಾಂಧಶಕ್ತಿಗಳು ಸಾಂವಿಧಾನಿಕ ಹಕ್ಕುಗಳು, ಕಾನೂನು, ನೀತಿ, ನಿಯಮಗಳಿಗೆಲ್ಲ ಸವಾಲೆಸೆಯುತ್ತಾ ವಿಜೃಂಭಿಸುತ್ತಿರುವ ಪರಿಯನ್ನು ನೋಡುವಾಗ ಯಾರು ನಿಜವಾದ ಸನ್ಯಾಸಿಗಳು, ಯಾರು ನಕಲಿ ಸನ್ಯಾಸಿಗಳು, ಯಾರು ಭಜರಂಗಿಗಳು, ಯಾರು ಶ್ರೀರಾಮಸೇನೆಯ ಕಾರ್ಯಕರ್ತರು ಒಂದೂ ತಿಳಿಯುತ್ತಿಲ್ಲ. ತಾವು ಹೇಳಿದ್ದೇ ಸತ್ಯ, ತಮ್ಮ ಅಪ್ಪಣೆಗಳಿಗೆ ಅನುಗುಣವಾಗಿ ಇತರರು ನಡೆದುಕೊಳ್ಳಬೇಕು ಎಂಬ ಇವರ ಸಾಮಾನ್ಯ ಅಜೆಂಡಾದ ಕಾರಣವಾಗಿ ಇವರನ್ನು ಪ್ರತ್ಯೇಕಿಸುವ ಗೆರೆಗಳೇ ತೆಳ್ಳಗಾಗಿಬಿಟ್ಟಿವೆ. ಚಿತ್ರವೊಂದರ ಬಗ್ಗೆ ತೀರ್ಮಾನಿಸುವುದಕ್ಕೆಂದೇ ಕಾನೂನಿನ ಅಡಿಯಲ್ಲಿ ರಚಿತವಾದ ಸೆನ್ಸಾರ್ ಮಂಡಳಿ ಇದ್ದೂ ಅಂತಿಮ ತೀರ್ಪು ನೀಡುವ ಪ್ರೇಕ್ಷಕ ಬಳಗವೆಂಬ ಮಹಾಜನತೆಯಿದ್ದೂ ಜನರು ಏನನ್ನು ನೋಡಬೇಕು ಏನನ್ನು ನೋಡಕೂಡದು ಎಂದು ತೀರ್ಮಾನಿಸುವ ಹೊಣೆಯನ್ನು ತಾವೇ ಹೊತ್ತು [illegible] ಮಠಾಧೀಶರೇ ಕಾನೂನನ್ನು ಕೈಗೆತ್ತಿಕೊಳ್ಳುವ ಕೆಲಸಕ್ಕೆ ಮುಂದಾದ ಮೇಲೆ ಇನ್ನು ಉಳಿದುದಾದರೂ ಏನು?

ಶ್ರೀನಿವಾಸ ಕಾರ್ಕಳ, ಮಂಗಳೂರು

# ಕೊನೆ ಹೋಳಿಗೆ ಊಟ

ಮನೆಯ ಹಾಲ್‌ನಲ್ಲಿ ಒಂದು ಮಂಚದ ಮೇಲೆ ಲಂಕೇಶರನ್ನು ಮಲಗಿಸಿದ್ದರು. ಅವರ ಹತ್ತಿರ ಕೂತು ಅವರ ಹಣೆಯ ಮೇಲೆ ನನ್ನ ಕೈ ಇಟ್ಟೆ. ಅವರು ಕಣ್ಣು ಮುಚ್ಚಿ ಮಲಗಿದ್ದರು. ಮುಖ ಎಂದಿನಂತೆಯೇ ಇತ್ತು. ಯಾವ ನೋವಿನ ಛಾಯೆಯೂ ಇರಲಿಲ್ಲ. ಅವರು ಶಾಂತವಾಗಿ ಮಲಗಿದ್ದಾರೆ ಎನಿಸಿತು ಅವರನ್ನು ನೋಡಿದಾಗ.






• ಇಂದಿರಾ ಲಂಕೇಶ್

1999 ಅಂತ್ಯಗೊಂಡು ಹೊಸ ಶತಮಾನ ಪ್ರಾರಂಭವಾಗುತ್ತಿತ್ತು. ಪ್ರಪಂಚದೆಲ್ಲೆಡೆ ಎಲ್ಲರೂ ಹೊಸ ಶತಮಾನವನ್ನು ಸ್ವಾಗತಿಸುತ್ತಿರುವಾಗ ಲಂಕೇಶರು ಮಾತ್ರ ಯಾವ ಸಂಭ್ರಮವೂ ಇಲ್ಲದೆ ಸುಮ್ಮನಿದ್ದರು. ಲಂಕೇಶರ ದೈಹಿಕಶಕ್ತಿ ಕುಸಿದಿತ್ತು. ಹೊಸ ವರ್ಷವನ್ನು, ಯುಗವನ್ನು ಸ್ವಾಗತಿಸಲು ಎಂದಿನಂತೆ ಪಾರ್ಟಿ ಏರ್ಪಡಿಸುವ ಯೋಚನೆ ಯಾರ ತಲೆಯಲ್ಲೂ ಇರಲಿಲ್ಲ. ಲಂಕೇಶರು 1999ರ ಕೊನೆ ಸಂಜೆಯನ್ನು ತಮ್ಮ ಗೆಳೆಯರೊಂದಿಗೆ ಆಫೀಸಿನಲ್ಲಿ ಇಸ್ಪೀಟು ಆಡುತ್ತ ಕಳೆದರು. ಮಧ್ಯರಾತ್ರಿಯ ಆಗಮನಕ್ಕೆ ಕಾಯದೆ ಸುಮ್ಮನೆ ಮನೆಗೆ ಬಂದು ನಿದ್ರಿಸಿದರು.

ತಂಗಿಯ ಪ್ರಥಮ ಸಿನಿಮಾ, ಹುಟ್ಟಿದಹಬ್ಬ ಮತ್ತು ಹೊಸ ವರ್ಷಾಚರಣೆ ಎಂದು ಬೆಂಗಳೂರಿಗೆ ಬಂದಿದ್ದ ಗೌರಿ ಜನವರಿ ನಾಲ್ಕರಂದು ದೆಹಲಿಗೆ ಹೊರಟು ನಿಂತಳು. ಆಗ ಲಂಕೇಶರು "ದೆಹಲಿಯಲ್ಲಿ ಈಗ ತುಂಬಾ ಚಳಿ. ಈ ನನ್ನ ಸ್ವೆಟರ್ ತಗೊಂಡು ಹೋಗು" ಎಂದು ತಾವು ತೊಟ್ಟಿದ್ದ ಕೋಬಾಲ್ಟ್ ಬ್ಲೂ ಬಣ್ಣದ ಸ್ವೆಟರ್ ತೆಗೆದು ಕೊಡಲು ಮುಂದಾದರು. ಆಗ ಗೌರಿ "ನನ್ನ ಹತ್ತಿರ ಸಾಕಷ್ಟು ಸ್ವೆಟರ್ಸ್ ಇವೆ. ಇದು ನಿನ್ನ ಪ್ರೀತಿಯ ಸ್ವೆಟರ್. ನೀನೇ ಇಟ್ಟುಕೊ" ಎಂದಳು.

*******

ಲಂಕೇಶರಿಗೆ ಬಿಸಿಬಿಸಿ ರೊಟ್ಟಿ ಮತ್ತು ಹೋಳಿಗೆ ಎಂದರೆ ಬಹಳ ಇಷ್ಟ. ಎಷ್ಟರಮಟ್ಟಿಗೆಂದರೆ ರೊಟ್ಟಿ ಮತ್ತು ಹೋಳಿಗೆಯನ್ನು ಹೆಂಚಿನಿಂದ ಸೀದಾ ಅವರ ತಟ್ಟೆಗೆ ಹಾಕಬೇಕಿತ್ತು. ರೊಟ್ಟಿ ಮತ್ತು ಎಣ್ಣೆಗಾಯಿ ಅವರಿಗೆ ಎಷ್ಟು ಪ್ರಿಯವಾಗಿತ್ತೋ ಅಷ್ಟೇ ಪ್ರಿಯವಾಗಿತ್ತು ಹೋಳಿಗೆಯೊಂದಿಗಿನ ಬಿಸಿತುಪ್ಪ. ಮಾವಿನ ಸೀಸನ್ ಬಂದರಂತೂ ಹೋಳಿಗೆಯೊಂದಿಗೆ ಸೀಕರಣೆ ಇರಲೇಬೇಕಿತ್ತು.

2000 ಜನವರಿ 14ರಂದು ಸಂಕ್ರಾಂತಿ ಹಬ್ಬ ಬಂತು. ಸಾಮಾನ್ಯವಾಗಿ ಸಂಕ್ರಾಂತಿ ಹಬ್ಬಕ್ಕೆ ಎಲ್ಲರ ಮನೆಯಲ್ಲಿ ಪೊಂಗಲ್ ಮಾಡುತ್ತಾರೆ. ಆದರೆ ನಮ್ಮ ಮನೆಯಲ್ಲಿ ಹಾಗಲ್ಲ, ಯಾವುದೇ ಹಬ್ಬ ಬಂದರೂ ಲಂಕೇಶರಿಗೆ ಇಷ್ಟವಾದ ಹೋಳಿಗೆಯನ್ನೇ ಮಾಡುತ್ತಿದ್ದೆ. ಅವತ್ತು ನಾನು ಮಾಡುತ್ತಿದ್ದ ಹೋಳಿಗೆಯ ಸುವಾಸನೆ ಲಂಕೇಶರ ರೂಮಿಗೂ ಮುಟ್ಟಿ ಅವರು ಖುಷಿಯಿಂದ "ಹಾ ಹೋಳಿಗೆ" ಎನ್ನುತ್ತಾ ರೂಮಿನಿಂದ ಇಳಿದು ಡೈನಿಂಗ್ ಟೇಬಲ್‌ಗೆ ಬಂದರು. ಅವರು ಹೋಳಿಗೆಗೆ ಕಾಯುತ್ತಿದ್ದಾರೆ ಎಂದು ನನಗೆ ಗೊತ್ತಿತ್ತು.

"ಇವತ್ತು ಶುಗರ್ ಎಷ್ಟಿದೆ? ಹೋಳಿಗೆ ತಿನ್ನಬಹುದಾ?" ಎಂದೆ. "ಎಲ್ಲಾ ಸರಿ ಇದೆ ಕಣೆ. ಹೋಳಿಗೆ ಕೊಡು" ಎಂದರು. ನಾನು ಒಂದಾದನಂತರ ಒಂದರಂತೆ ಅವರ ತಟ್ಟೆಗೆ ಬಿಸಿಬಿಸಿಯಾದ ಎರಡು ಹೋಳಿಗೆ ಹಾಕಿದೆ. ಅವನ್ನು ಅವರು ಸಂತೋಷದಿಂದ ತಿಂದ ನಂತರ "ಟಿಫನ್ ಬಾಕ್ಸ್‌ಗೂ ಒಂದೆರಡು ಹೋಳಿಗೆ ಹಾಕು" ಎಂದರು. ನಾನು "ಬೇಡ ಕಣ್ರಿ, ಶುಗರ್ ಜಾಸ್ತಿ ಆಗುತ್ತೆ" ಎಂದರೂ ಅವರು ಕೇಳಲಿಲ್ಲ. "ಹೋಳಿಗೆ ಕೊಡೆ" ಎಂದರು. ವಿಧಿ ಇಲ್ಲದೆ ಅವರ ಟಿಫನ್ ಬಾಕ್ಸ್‌ನಲ್ಲಿ ಒಂದು ಹೋಳಿಗೆ ಇಟ್ಟು ಕಳುಹಿಸಿದೆ.

ಲಂಕೇಶರು ತಮ್ಮ ಜೀವನದಲ್ಲಿ ತಿನ್ನುವ ಕೊನೆ ಹೋಳಿಗೆ ಅದು ಎಂದು ನಾನು ಕನಸು ಮನಸ್ಸಿನಲ್ಲೂ ಎನಿಸಿರಲಿಲ್ಲ.

*******

ಸಂಕ್ರಾಂತಿ ಹಬ್ಬ ಬಂದುಹೋದ ಹತ್ತು ದಿನಗಳ ನಂತರ ನನ್ನ ಚಿಕ್ಕಮ್ಮನ ಮಗಳಾದ ಶಾಂತಾ ಮತ್ತು ಆಕೆಯ ಗಂಡ ಶಶಿಧರ ಗೋವಾಗೆ ಟ್ರಿಪ್ ಹೊರಟರು. ಅದಕ್ಕೂ ಮುನ್ನ ಅವರು ಬೇರೆಡೆಗೆ ಟ್ರಿಪ್ ಹೋದಾಗ ನಾನೂ ಅವರೊಂದಿಗೆ ಹೋಗುವ ಆಶಯ ವ್ಯಕ್ತಪಡಿಸಿದ್ದೆ. ಆದರೆ ಲಂಕೇಶರ ಆರೋಗ್ಯ ಕೆಟ್ಟಿದ್ದರಿಂದ ಅವರೊಂದಿಗೆ ಹೋಗುವುದನ್ನು ರದ್ದು ಮಾಡಿದ್ದೆ. ಈ ಬಾರಿ ಅವರೊಂದಿಗೆ ಹೋಗುವುದೋ ಬೇಡವೋ ಎಂದು ಯೋಚಿಸುತ್ತಿದ್ದೆ. ಆಗ ನಮ್ಮ ಮಗಳು ಬೇಬಿ "ಅಪ್ಪನ ಆರೋಗ್ಯ ಈಗ ಪರವಾಗಿಲ್ಲ. ನೀನು ಬಹಳ ದಿನಗಳಿಂದ ಗೋವಾ ನೋಡಬೇಕು ಅಂತ ಆಸೆ ಇಟ್ಟುಕೊಂಡಿದ್ದೀಯ. ಎರಡು ದಿನ ತಾನೇ? ಹೋಗಿ ಬಾ" ಎಂದಳು. ನಾನು ಎರಡು ಮನಸ್ಸಿನಲ್ಲಿಯೇ ಜನವರಿ 24ರಂದು ಗೋವಾಗೆ ಹೋದೆ.

*******

ಜನವರಿ 23ರಂದು ಬೇಬಿ ತನ್ನ ಅಪ್ಪನ ಆಫೀಸಿಗೆ ಹೋದಳು. ಲಂಕೇಶರಿಗೆ ಸಣ್ಣದಾಗಿ ಜ್ವರ ಬಂದಿತ್ತು. ಅದನ್ನು ಗಮನಿಸಿದ ಬೇಬಿ "ಡಾಕ್ಟರ್ ಹತ್ತಿರ ಚೆಕ್‌ಅಪ್‌ಗೆ ಹೋಗಬೇಕು. ನಾಳೆ ಅಪಾಯಿಂಟ್‌ಮೆಂಟ್ ತಗೋತೀನಿ. ಫ್ರೀ ಮಾಡಿಕೊಂಡಿರು" ಎಂದಳು. ಆಗ ಲಂಕೇಶರು "ನಾಳೆ ಸೋಮವಾರ. ಪತ್ರಿಕೆ ಪ್ರಿಂಟಿಗೆ ಹೋಗುವ ದಿನ. ಅದಕ್ಕೆ ನಾಳೆ ಬೇಡ. ನಾಡಿದ್ದು ಹೋಗೋಣ" ಎಂದರು.

ಜನವರಿ 23 ಮತ್ತು 24ರಂದು ಎಂದಿನಂತೆ ಲಂಕೇಶರು ಪತ್ರಿಕೆಗೆ ತಮ್ಮ ಅಂಕಣಗಳನ್ನು ಬರೆದು ಮುಗಿಸಿದರು. ಜ್ವರ ಅವರನ್ನು ಸುಸ್ತು ಮಾಡಿತ್ತು. ಜನವರಿ 24ರಂದೇ ಅಜಿತು ಸಂಪಾದಕನಾಗಿದ್ದ 'ಆಲ್‌ರೌಂಡರ್' ಪತ್ರಿಕೆಯೂ ಅಚ್ಚಿಗೆ ಹೋಗಬೇಕಿತ್ತು. ಅಜಿತು ತನ್ನ ಕೆಲಸದಲ್ಲಿ ತೊಡಗಿದ್ದ. ಲಂಕೇಶರು ಮನೆಗೆ ಹೊರಟಾಗ ಅವರ ಕಾರ್‌ವರೆಗೂ ಅಜಿತು ಅವರೊಂದಿಗೆ ಹೋದ. ತಮ್ಮ ಮಗನ ಹೆಗಲ ಮೇಲೆ ಕೈಹಾಕಿದ ಲಂಕೇಶರು "I don't think I will come out alive this time" ಎಂದರು. ಮನೆಗೆ ಬಂದ ಲಂಕೇಶರು ಊಟ ಮಾಡುವಾಗ ನಾನು ಮನೆಯಲ್ಲಿಲ್ಲದ್ದನ್ನು ಗಮನಿಸಿ "ಅಮ್ಮ ಯಾವಾಗ ವಾಪಸ್ ಬರುತ್ತೆ" ಎಂದು ಅಡುಗೆ ಮಾಡುವ ಲತಾಳನ್ನು ಕೇಳಿದರು. ಆನಂತರ ಅವರು ತಮ್ಮ ರೂಮಿಗೆ ಹೋದರು. ಅವರು ಆಡಿದ ಕೊನೆ ಮಾತು ಅದಾಯಿತು...

*******

ಜನವರಿ 24ರ ಸಂಜೆ ನಾನು, ಶಾಂತ ಮತ್ತು ಆಕೆಯ ಗಂಡ ಶಶಿಧರ, ಮೂವರೂ ಕಾರ್‌ನಲ್ಲಿ ಗೋವಾ ಸೇರಿದೆವು. ಮಾರನೆಯ ದಿನ ಬೆಳಗ್ಗೆ ಸುತ್ತಾಡಲು ಹೋಗೋಣವೆಂದು ನಾವೆಲ್ಲ ರೆಡಿಯಾಗಿ ಇನ್ನೇನು ಹೋಟೆಲ್‌ನಿಂದ ಹೊರಡಬೇಕು. ಆ ಕ್ಷಣ ಹೋಟೆಲ್ ರಿಸೆಪ್ಷನ್‌ಗೆ ಒಂದು ಕರೆ ಬಂತು. ಅದು ನಮ್ಮ ಮಗಳು ಬೇಬಿ ಮಾಡಿದ್ದ ಕರೆ. ಆಕೆ "ಅಪ್ಪನಿಗೆ ಸೀರಿಯಸ್ ಆಗಿದೆ. ಕೂಡಲೇ ಹೊರಟು ಬಾ" ಎಂದಳು.

ಬೇಬಿಯ ದನಿಯಲ್ಲಿದ್ದ ಗಾಬರಿಯನ್ನು ಗಮನಿಸಿದ ನನಗೆ ಅನುಮಾನ ಶುರುವಾಗಿ "ಅಪ್ಪನಿಗೆ ಏನಾಗಿದೆ? ಸರಿಯಾಗಿ ಹೇಳು" ಎಂದೆ. ಆಗ ಆಕೆ ಅಳಲು ಶುರುಮಾಡಿದಳು. ಆಕೆ ಅಳುತ್ತಿದ್ದದ್ದನ್ನು ಕೇಳಿದ ನನಗೆ ಲಂಕೇಶರಿಗೆ ಏನೋ ಆಗಿದೆ ಎಂದು ಅರಿವಾಗಿ ನಾನೂ ಅಳಲು ಶುರುಮಾಡಿದೆ. ಆಗ ನನ್ನ ತಂಗಿಯ ಗಂಡ ಶಶಿಧರ ಫೋನ್‌ಅನ್ನು ನನ್ನಿಂದ ಕಿತ್ತುಕೊಂಡ. ಆತ ಬೇಬಿಯೊಂದಿಗೆ ಮಾತನಾಡಿದ ನಂತರ "ನಾವೆಲ್ಲ ತಕ್ಷಣ ಬೆಂಗಳೂರಿಗೆ ಹೋಗಬೇಕು" ಎಂದ. ಆದರೆ ಕಾರ್‌ನಲ್ಲಿ ಬೆಂಗಳೂರಿಗೆ ವಾಪಸ್ ಬಂದರೆ ಲೇಟಾಗುತ್ತದೆ ಎಂದು ನಿರ್ಧರಿಸಿ ನಾವೆಲ್ಲ ಕಾರ್‌ಅನ್ನು ಅಲ್ಲಿಯೇ ಬಿಟ್ಟು ಏರೋಪ್ಲೇನ್ ಹತ್ತಿದೆವು.

ನನ್ನ ತಲೆ ಸಂಪೂರ್ಣವಾಗಿ ಖಾಲಿಯಾಗಿತ್ತು. ಏನೂ ತೋಚದವಳಂತೆ ಆಗಿದ್ದೆ. ಲಂಕೇಶರಿಗೆ ಏನಾಗಿದೆಯೋ ಎಂಬ ಯೋಚನೆ ನನ್ನನ್ನು ಕಾಡುತ್ತಿತ್ತು. ಅಳುತ್ತಲೇ ಇದ್ದೆ.

ನಾನು ಗೋವಾಗೆ ಬಂದಿದ್ದಕ್ಕೆ ನನ್ನನ್ನೇ ನಾನು ಸಾವಿರಾರು ಬಾರಿ ಶಪಿಸಿಕೊಳ್ಳುತ್ತಿದ್ದೆ. ಈ ಹೊತ್ತಿನಲ್ಲೇ ನಾನು ಯಾಕೆ ಗೋವಾಕ್ಕೆ ಹೋಗಬೇಕಿತ್ತು? ತೆಪ್ಪಗೆ ಮನೆಯಲ್ಲಿ ಇರಲು ಏನಾಗಿತ್ತು ನನಗೆ. ನನ್ನಂತಹ ಶ[illegible] ಈ ಜಗತ್ತಿನಲ್ಲೇ ಇನ್ನೊಬ್ಬಳು ಇರಲಿಕ್ಕಿಲ್ಲ ಎಂದು ನನ್ನನ್ನು ನಾನೇ ನಿಂದಿಸಿಕೊಳ್ಳುತ್ತಾ ಅಳುತ್ತಿದ್ದೆ. ನಾವಿದ್ದ ವಿಮಾನ ಯಾಕಿಷ್ಟು ಲೇಟ್ ಆಗುತ್ತಿದೆ, ಇನ್ನೂ ಯಾಕೆ ಬೆಂಗಳೂರು ಬಂದಿಲ್ಲ ಎಂದು ಚಡಪಡಿಸುತ್ತಿದ್ದೆ. ಕೊನೆಗೂ ನಾವೆಲ್ಲ ಬೆಂಗಳೂರು ತಲುಪಿದೆವು.

ವಿಮಾನ ನಿಲ್ದಾಣದ ಹೊರಗೆ ಲಂಕೇಶರ ಡ್ರೈವರ್ ರೇವಣ್ಣ ಎಸ್ಟೀಮ್ ಕಾರ್‌ನೊಂದಿಗೆ ನನಗಾಗಿ ಕಾಯುತ್ತಿದ್ದ. ಆತ ನನ್ನನ್ನು ಕಂಡಕೂಡಲೇ ಆ ಕಾರಿನ ಹಿಂದಿನ ಸೀಟಿನ ಬಾಗಿಲು ತೆರೆದ. ಆ ಕಾರು ನನ್ನ ಲಂಕೇಶರದ್ದು. ಅವರು ಪ್ರತಿದಿನ ಮನೆಯಿಂದ ಆಫೀಸಿಗೆ, ಆಫೀಸಿನಿಂದ ಮನೆಗೆ ಆ ಕಾರಿನಲ್ಲಿ ಮಲಗಿಕೊಂಡು ಹೋಗುತ್ತಿದ್ದರು. ಲಂಕೇಶರ ದಿಂಬು ಇನ್ನೂ ಆ ಕಾರಿನ ಹಿಂದಿನ ಸೀಟಿನಲ್ಲೇ ಇತ್ತು. ಅವರು ಕೂರುತ್ತಿದ್ದ, ಮಲಗುತ್ತಿದ್ದ ಜಾಗದಲ್ಲಿ ಕೂರಲು ನನ್ನಿಂದ ಸಾಧ್ಯವಾಗಲಿಲ್ಲ. ಅವರ ಪ್ರತಿನಿತ್ಯ ಉಪಯೋಗಿಸುತ್ತಿದ್ದ ದಿಂಬನ್ನು ಕಂಡಕೂಡಲೇ "ನಾನು ಅಲ್ಲಿ ಕೂರುವುದಿಲ್ಲ" ಎಂದು ಹೇಳಿದೆ.

ವಿಮಾನ ನಿಲ್ದಾಣಕ್ಕೆ ಭಾರತಿ ಗೌಡ ತನ್ನದೇ ಕಾರಿನಲ್ಲಿ ಬಂದಿದ್ದಳು. ಅವಳ ಕಾರಿನಲ್ಲಿ ನಾನು ನಮ್ಮ ಮನೆಗೆ ಬಂದೆ. ನಮ್ಮ ಮನೆಯನ್ನು ಪ್ರವೇಶಿಸಿದಾಗ ನನ್ನ ಎದೆ ಜೋರಾಗಿ ಹೊಡೆದುಕೊಳ್ಳುತ್ತಿತ್ತು. ಮನೆಯ ಹಾಲ್‌ನಲ್ಲಿ ಒಂದು ಮಂಚದ ಮೇಲೆ ಲಂಕೇಶರನ್ನು ಮಲಗಿಸಿದ್ದರು.

ಅವರ ಹತ್ತಿರ ಕೂತು ಅವರ ಹಣೆಯ ಮೇಲೆ ನನ್ನ ಕೈ ಇಟ್ಟೆ. ಅವರು ಕಣ್ಣು ಮುಚ್ಚಿ ಮಲಗಿದ್ದರು. ಮುಖ ಎಂದಿನಂತೆಯೇ ಇತ್ತು. ಯಾವ ನೋವಿನ ಛಾಯೆಯೂ ಇರಲಿಲ್ಲ. ಅವರು ಶಾಂತವಾಗಿ ಮಲಗಿದ್ದಾರೆ ಎನಿಸಿತು ಅವರನ್ನು ನೋಡಿದಾಗ.

ಅವರು ನಿಜವಾಗಿಯೂ ಹೋಗಿಬಿಟ್ಟಿದ್ದಾರೆ ಎಂದು ನನಗೆ ನಂಬಲಾಗಲಿಲ್ಲ. ಆದರೆ ಅವರ ದೇಹ ತಣ್ಣಗಾಗಿತ್ತು. ಅಳುವುದನ್ನು ಬಿಟ್ಟು ನನಗೆ ಬೇರೇನೂ ಉಳಿದಿರಲಿಲ್ಲ...


ಜನವರಿ 24ರ ರಾತ್ರಿ ನಿದ್ರೆ ಮಾಡಲು ಹೋದವರು ಶಾಶ್ವತವಾಗಿ ಮಲಗಿಬಿಟ್ಟರು.

ನಾನು ಇನ್ನೂ ಇಲ್ಲೇ ಇದ್ದೇನೆ. ಯಾವಾಗ ನಾನು ಹೋಗುತ್ತೇನೆ ಎಂಬುದರ ಬಗ್ಗೆ ನನ್ನಲ್ಲಿ ಉತ್ತರ ಇಲ್ಲ.

ನನ್ನ ಹುಳಿಮಾವು ಮಾತ್ರ ತನ್ನ ಪ್ರೀತಿಯ ಹುಳಿಮಾವಿನ ಮರದಡಿ ಚಿರನಿದ್ರೆಯಲ್ಲಿದ್ದಾರೆ...

(ಮುಗಿಯಿತು)

## ಮಾಂಟೋನ ಪ್ರಾರ್ಥನೆ



ಹೇ ದೇವ! ಜಗತ್ಪಾಲಕನೇ! ದಯಾಮೂರ್ತಿಯೇ!
ಪಾಪಕೂಪದಲಿ ಮುಳುಗಿರುವ ಪಾಮರರು, ನಾವು,
ನಿನ್ನ ಪಾದಪದ್ಮಗಳಿಗೆ ಸಾಷ್ಟಾಂಗವೆರಗಿ ಬೇಡುವೆವು:
ಪುಣ್ಯಾತ್ಮನಾಗಿದ್ದ ಗುಲಾಮ್ ಹಸನ್ ಮಾಂಟೋ
ಅವರ ಅನಿಷ್ಟ ಪುತ್ರ ಸದಾತ್ ಹಸನ್ ಮಾಂಟೋ

ಈತನಿಗೆ ಪರಿಮಳವೆಂದರೆ ಹೇವರಿಕೆ - ಸದಾ ಕೊಳಕಿನ ಬಯಕೆ;
ಈತ ಸೂರ್ಯದೇವನ ಪ್ರಕಾಶ ಪ್ರಸಾದದ ದ್ವೇಷಿ - ಅನವರತ ಕತ್ತಲಕೂಪದ ಆನಂದವಾಸಿ.
ಸಜ್ಜನ-ಶೀಲವಂತರಿಗೆ ಈತ ದುರ್ವಾಸಮುನಿ- ಬೆತ್ತಲಾಗಿರುವ ನಿರ್ಲಜ್ಜರ ಮೋಹದಲ್ಲಿ ಬಿದ್ದಿರುವ ಶನಿ. ಸಿಹಿಯಾದುದೆಲ್ಲಾ ಇವನಿಗೆ ಕಾಲು ಕಸ- ಕಹಿಯೆಲ್ಲ ಇವನಿಗೆ ಪ್ರಾಣರಸ.
ಗರತಿಯರ ಸಂಗ ಇವನಿಗೆ ನರಕ-ಸೂಳೆಯರ ತೆಕ್ಕೆಯಲ್ಲಿ ಸ್ವರ್ಗದ ಪುಳಕ.
ಸ್ವಚ್ಛ ನಿರ್ಜರಿಣಿಯನ್ನು ಕಂಡು ಬೆಚ್ಚುವನಿವನು- ಮಡುಗಟ್ಟಿದ ಕೊಳಚೆಯಲ್ಲಿ ಸದಾ ಈಜುವನು.
ಲೋಕ ನಗುವಾಗ ಬಿಕ್ಕಿ ಅಳುವನೀತ- ಲೋಕ ಅಳುವಾಗ ಗಹಗಹಿಸಿ ನಗುವ ಪ್ರೇತ.
ಕೆಡಕು ಮೆತ್ತಿದ ಮುಖಗಳು ಇವನನ್ನು ಸೆಳೆಯುವ ಚುಂಬಕ
ಬೆಚ್ಚಗೆ ಸವರುತ್ತ ಕೆಡಕನ್ನು ತೊಳೆದು ನಿಜರೂಪ ತೋರುವುದೇ ಇವನ ಪ್ರಿಯ ಕಾಯಕ.

ದೇವಾ! ನಿನ್ನ ಕುರಿತು ಇವನಿಗಿಲ್ಲ ಇನಿತು ಭಕ್ತಿ!
ನಿನ್ನನ್ನು ಧಿಕ್ಕರಿಸಿದ ರಾಕ್ಷಸರಲ್ಲೇ ಇವನಿಗನುರಕ್ತಿ!

ಸ್ವಾಮಿ ದೇವನೇ! ಇವನ್ನೊಮ್ಮೆ ಲೋಕಕ್ಕೆ ಕಂಟಕ
ಪಾಶ ಬಿಗಿದು ಎಳೆದೊಯ್ಯೋ ಜಗದೋದ್ಧಾರಕ!

ಮೂಲ: ಸೌದತ್ ಹಸನ್ ಮಾಂಟೊ
ರೂಪಾಂತರ: ಕೆ.ಫಣಿರಾಜ್

## ಚರ್ಮ ವ್ಯಾಖ್ಯೆ

"ಇಗೋ ಮಾಂಟೊ ಮಣ್ಣಾಗಿದ್ದಾನೆ
ಇಲ್ಲಿ
ಅವನೆದೆಯಲ್ಲಿ ಭದ್ರವಾಗಿರುವ ಕತೆ
ನೇಯುವ ಕುಸುರಿ ಕಲೆಯೂ
ಮಣ್ಣಾಗಿದೆ.
ಮಣ್ಣು ಹೊದ್ದು ಮಲಗಿರುವ ಮಾಂಟೊ
ಯೋಚಿಸುತ್ತಿದ್ದಾನೆ
ಕತೆಗಾರಿಕೆಯ ಸರದಾರನ್ಯಾರು-
ತಾನೋ! ದೇವರೋ!"

ಅನುವಾದ:
ಬಾಗೇಶ್ರೀ
ಮತ್ತು ಕೆ.ಫಣಿರಾಜ್

# ...ಲಂಕೇಶತ್ರ ಇದ್ದೋರು ರಾಮುಲು ಹತ್ರ ಹೋದ್ರಂತೆ

...ಆಮಿ ನೇಗಿಲು ಕೇಳುವ ಸಮಯ. ಆದರೆ ಊರ ...ಟ್ರ್ಯಾಕ್ಟರ್‌ಗಳು ಸದ್ದು ಮಾಡುತ್ತಿದ್ದವು. ನಿಜವಾದ ...ಮತ್ರರು ಮಾತ್ರ ತಮ್ಮ ಸ್ವಂತ ನೇಗಿಲಿನಿಂದ ...ಮ ಮಾಡುತ್ತಿದ್ದರು. ಮುಂಗಾರು ಯತ್ಲೊ ಏನೊ ...ಆತಂಕ ಮನೆ ಮಾಡಿತ್ತು, ಇತ್ತ ರಾಜಕಾರಣದಲ್ಲೂ ...ಬ್ಬರು ಯಾವ ಭರವಸೆಯೂ ಇಲ್ಲದೆ ...ಯುತ್ತಿರುವುದು ಉಗ್ರಿಯ ಅರಿವಿಗೆ ಬಂದು,

"...ಸಿಯ ಗೊತ್ತಾಯ್ತೆ ಮಾವ?" ಎಂದು ನಕ್ಕ.

...ವನ ನಗುವಿನಲ್ಲೇ ಸ್ವಾರಸ್ಯ ಗ್ರಹಿಸಿದ ಕಾಳಮಾವ, "...ಅದ್ಯಾವುದಪ್ಪ ವಸ ಸುದ್ದಿ?" ಎಂದ.

"...ನಿನಿಗೆ ಗೊತ್ತಿರಂಗೆ ವಟ್ಟೆ ಮುದ್ದಣ್ಣ ಏನು ಮಾಡಿದ ...?"

"ಅದು ಹಳೆ ಸುದ್ದಿ ಅಲವೇನ್ಲ, ಅದ ತಗಂಡೇನು ... ನೀನು."

"...ಇರ್‍ಲಿ ಹೇಳು."

"...ಹೇಳದಿನ್ನೇನು, ನಿನಿಗೂ ಗೊತ್ತಲವೆ. ಮನೆ ...ದ್ದಕಂಡು, ಹಾಲು ಕೇಳದಕಿಂತ ಮದ್ದೆಯ ಮೂಲೇಲಿ ... ಬೇಸಿಕಂಡು ತಿನ್ನಕ್ಕೆ ಸುರು ಮಾಡಿದ್ದೂ ಅಲ್ದೆ ...ನೆ ವಡದು ಬಚ್ಚಲುಮನೆ ಮಾಡಿಕಂಡಿದ್ದ."

"ಈಗ ಎಡೂರಪ್ಪನೂ ಅಂಗೇ ಮಾಡಿಕಂಡವುನೆ. ...ಲಿದ್ದಕಂಡೆ ಬ್ಯಾರೆ ಆಪೀಸು ಮಾಡಿಕಂಡವುನೆ. ಅವುನ ... ಬ್ಯಾರೆ, ಅವುನ ಯವಾರನೆ ಬ್ಯಾರೆ ಕಣಮಾವ. ಆ ...ವುಕೆ ಪಾಪ ಇವುನ್ನ ಇಟಗಳಂಗಿಲ್ಲ, ಸುಮ್ಮನಿರಂಗಿಲ್ಲ ...ಗ್ಯದೆ."

"...ಹಾಲು ಹ್ವಡದ ಮ್ಯಾಲೆ, ಮನಸು ಹ್ವಡದ ಮ್ಯಾಲೆ ...ಗದಿಲ್ಲ ಬುಡು."

"...ಅದೇನೋ ನಿಜ. ಇನ್ನೇನಿದ್ರು ಎಡೂರಪ್ಪ ಬಿ.ಜೆ.ಪಿ. ...ಧ್ಧನೆ ಹೋರಾಡ್ತನೆ. ಯಲ್ಲಾರ ಜಾತಗನೂ ಬಿಚ್ಚತನೆ."

"...ಬಿಚ್ಚಿದ್ರು ಅವೇನು ಅಲ್ಲಾಡದಿಲ್ಲ ಬುಡ್ಲ, ಕಿವಿ ಕಿತ್ತ ...ಗರಕನನ್ನ ಮಗನವು" ಎಂದ ಸೀರ.

"...ಎಡೂರಪ್ಪೇನೋ ಕಾಂಗ್ರೆಸ್ಸಿಗೆ ಬತ್ತನೆ ಅಂತಿದ್ರಲ್ಲಾ" ...ಳು ಜುಮ್ಮಿ.

"...ಅವುನ ಬಂದ್ರೂ ಇವುರು ಸೇರಸಬೇಕಲ್ಲೆ, ಅವುನ ...ರೇನು ಒಸಿ ಕೇಸಿದವೆ. ಅವುನೊಂತರ ಸವುದ ... ಇದ್ದಂಗೆ. ಈ ಕಡೆ ವಲ್ದರೆ ಆ ಕಡೆ ಹರಕತ್ತದೆ, ಆ ...ವಲ್ದರೆ ಈ ಕಡೆ ಬಿಚ್ಚಗತ್ತದೆ. ಅಂಗಾಗ್ಯದ ಅವುನ ..."

"...ಸೋನಿಗಾಂಧಿ ಫೋಟಾ ತಗಂಡೋಗಿ ...ಕಂಡಿದ್ನಂತೆ ನಿಜವೆ?"

"...ಏನೋ ಅಂಗಂದ್ರಪ್ಪ, ಜನಗಳೇನು ಡವುಟು ಮಾಡಿದ್ರು ..., ಸಿಬಿಐ ತನಿಖೆ ತಂಡ ಕೇಂದ್ರ ಸರಕಾರದ ಕೈಲಿದಂತೆ. ...ದ ಸೋನಿಗಾಂಧಿ ಫೋಟೋ ಹಾಯ್ಕಂಡ್ರೆ ಅವುಳು ...ರೆ ತಡವಾಡಬವುದು. ಹಿಂಗೆ ಏನೇನೊ ...ಲೊಚನೆ ಮಾಡಿಕಂಡು ಆಫೀಸಲ್ಲಿ ಅವುಳ ಫೋಟಾ ...ದ್ದನಂತೆ. ಟಿವಿ ನನ್ನ ಮಗನವು ಅದ್ನೆ ದೊಡ್ಡ ಸುದ್ದಿ ...ದಿದವಂತೆ. ಅದ್ಕೆ ತಗದಾಕಿದನಂತೆ."

"ಜನ ಯಂಗೆ ಬದ್ಲಾಯ್ತರೆ ಅಂತ ಹೇಳಕ್ಕೆ ಬರದಿಲ್ಲ ಕಂಡ್ರ."


"ಎಛ್ಚಾಟ್ಲಿ ಕರಟ್ ದೊಡಪ್ಪ, ನೋಡು, ಲಂಕೇಶ್ ಜೊತೆ ಇದ್ದೊರ್‍ಯಲ್ಲ ಆ ಶ್ರೀರಾಮುಲು ಜೊತೆ ಸೇರಿಕಂಡಿದ್ದರಂತೆ" ಎಂದುಕೊಂಡು ವಾಟಿಸ್ಸೆ ಬಂದ.

"ಅದ್ಯಾರು ಸೇರಿಕಂಡಿದ್ದರೋ?"

"ಯಾರೊ ನನ್ನಂಗೆ ನಿನ್ನಂಗೆ ಇದ್ದ ಇಬ್ರು ಸೇರಿಕಂಡಿದ್ದರಂತೆ ಕಣೊ ಉಗ್ರಿ."

"ಅಲ್ಲಾ ಲಂಕೇಶ್ ಎಲ್ಲಿ, ರಾಮುಲು ಎಲ್ಲಿ? ಅದ್ಯಂಗೋಗಿ ಸೇರಿಕತ್ತರೊ?"

"ಲಂಕೇಶ್ ಇಲವಲ್ಲೋ ಈಗ ಅದ್ಕೆ ಹೋದ್ರು ಅತ್ತಗೆ."



"ಅಂಗರೆ ಇವುರು ಲಂಕೇಶ್ ಸಾಯಲಿ ಅಂತ ಕಾಯ್ಕಂಡಿದ್ದೊರು ಅನ್ನಂಗಾಯ್ತು."

"ಊ ಮತ್ತೆ ಲಂಕೇಶನ ಸವಾಸದಿಂದ ಇವರು ನೆಟ್ಟಗಿರಬೇಕಿತ್ತು. ಕ್ಯಟ್ಟ ಕ್ಯಲಸ ಮಾಡಂಗಿರಲಿಲ್ಲ. ವ್ಯಭಿಚಾರಕ್ಕೆ ಪರಮಿಷನ್ನಿತ್ತೆ ವರತು ಭ್ರಷ್ಟ ಕ್ಯಲಸಕ್ಕೆ, ಜಾತಿವಾದಕ್ಕೆ, ರಾಜಕಾರಣಿಗಳತ್ರ ಭಟ್ಟಂಗಿ ಕ್ಯಲಸ ಮಾಡಕ್ಕೆ ಪರಮಿಷನ್ ಇರಲಿಲ್ಲವಂತೆ. ಪಾಪ ಈ ಮುಂಡೆಮಕ್ಕಳು ಕಷ್ಟಪಟ್ಟುಕಂಡು ಅದನ್ನೆಲ್ಲ ಅದಿಮಿಕಂಡು ಸುಮ್ಮನಿದ್ರು. ಯಾವಾಗ ಲಂಕೇಶ್ ತೀರಕಂಡನೊ. ಇವುರು ಹಗ್ಗ ಮೂಗುದಾರ ಹರಕಂಡ ಪೋಲಿ ದನಿನಂಗಾದ್ರು."

"ರಾಮುಲು ಅತ್ರಹೋದ್ರೆ ದುಡ್ಡು ಕೊಡ್ತನಂತೆ, ನಿಜವೆ?"

"ದುಡ್ಡಷ್ಟೇ ಅಲ್ಲ, ಯಲ್ಲಾನು ಕೊಡ್ತಾನಂತೆ ಕಣೊ. ಯಾಕೆ ಅಂದ್ರೆ ಅವುರು ಯಲ್ಲಾನು ದುಡ್ಡಿನಿಂದ್ಲೆ ಅಳದೋರು. ಅಂಗಾಗಿ ಅಲ್ಯಾವ ರಾಜಕಾರಣನೂ ಇಲ್ಲ, ತಲೆ ಮದ್ದೆಯಿಲ್ಲ ಮುಂಡೆವುಕೆ. ಅದ್ಕೆ ತಲೆಯಿದ್ದೊರ ಕೊಳ್ತಾಯಿದ್ದನಂತೆ."

## ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಅವುನೇನೋ ಪಾದಯಾತ್ರೆ ಬತ್ತಾಯಿದ್ದನಂತಲ್ಲಾ."

"ಊ ಕಣಕ್ಕ, ನೀನು ಹೋಗಿ ಜಾಯಿನಾಗಬವುದಿತ್ತು. ನೋಡಾಗ್ಲೆ ಪ್ರೇಮನೆಂದ್ತಿ ಇನ್ನೂ ಯಾರ್‍ಯಾರೊ ನ್ಯಡೀತಾಯಿದ್ದರಂತೆ."

"ಪಾದಯಾತ್ರೆ ಯಾಕ್ ಮಾಡ್ತನ?"

"ಅದವುನಿಗೂ ಸರಿಯಾಗಿ ಗೊತ್ತಿಲ್ಲ ದ್ವಡಪ್ಪ ಯಾವ್ನೊ ಹೇಳಿಕೊಟ್ಟವೆ. ಪಾಪ ನ್ಯಡಿಯಕ್ಕೆ ಶುರುಮಾಡಿಬುಟ್ಟವನೆ. ಈಗ ಯಾಕಾದ್ರು ಇಂತ ಕ್ಯಲಸಕ್ಕೆ ಕೈ ಹಾಕಿದ್ನೊ ಅನ್ನಂಗಾಗ್ಯದೆ."

"ಅಂತು ಅವುನೂ ಬಿಜೆಪಿಗೆ ವಡತ ಕೊಡ್ತನೆ."

"ಊಕಣೊ ಉಗ್ರಿ. ಅವುನ ರೆವಿನ್ಯೂ ಜಾಗದಲ್ಲಿ ಯಾರು ಗೆಲ್ತರೆ ಯಾರು ಸೊಲ್ತರೆ ಅಂತ ಹೇಳಕ್ಕೆ ಬರದಿಲ್ಲ. ಅವುಂದು ಒಂಥರಾ ದಿಕ್ಕು ತಪ್ಪಿದ ರಾಜಕಾರಣ. ಹೇಳಿಕೆ ಮಾತಿಗೆ ಹಂಡತಿ ಬಿಟ್ಟೊನ ಪಜೀತಿ ಆಗ್ಯದೆ ಅವುಂದು."

"ಅಲ್ಲಾ, ಅವುನು ಗಣಿ ಲೂಟಿ ಮಾಡಿದೊನು, ಮೈಮ್ಯಾಲೆ ಐದಾರು ಕೇಸದೆ, ಅಂಥವತ್ರಕೆ ಲಂಕೇಶ್ ಜೊತೆ ಇದ್ದವ್ರು ಹೊಯ್ತವೆ ಅಂದ್ರೆ ಅವಿನ್ಯಂಥ ಗತಿಗೆಟ್ಟವ್ರು."

"ನನಿಗೂ ಅದೇ ಯೋಚನೆ ಕಣೊ ಉಗ್ರಿ. ಆ ರಾಮುಲು ಲೀಡ್ರು ಇನ್ನ ಜೈಲಲ್ಲವುನೆ. ಅವುನು ಹೊರಿಕೆ ಬಂದಾಗ ಇಬ್ರು ಜೋಡೆತ್ತಿನಂಗೆ ಜೊತೆ ಆಯ್ತರೆ. ಆಗ ಇವುರ ಕತೆ ಏನೂ ಅಂತ. ಅಂಗೇನಾರ ಮಾಡಬೇಕು ಅನ್ನದಾದ್ರೆ ಎಡೂರಪ್ಪನ ಪ್ಯಾಂಟಿಗೆ ಕೈಹಾಕಿ, ಹಿಸಗತಾಯಿರೊ ಹಿರೇಮಠನ ಜೊತೆ ಸೇರಿಕಬವುದಿತ್ತು, ಬ್ಯಾಡ, ಸಂತೋಷ್ ಹೆಗಡೆ ಜೊತೆ ಸೇರಿಕಬವುದಿತ್ತು, ಅದೂ ಬ್ಯಾಡ ನೀವೆ, ಜನಗಳಿಗೆ ಹೇಳಿಕೊಂಡು ಹೋಗಬೇಕಾಗಿತ್ತು, ಯಂಗಿದ್ರು ಅಹಿಂದ ಸಂಸ್ಥಾಪಕರ ಜೊತೆ ನಾವು ಇದ್ದೊ ಅಂತಾರಲ್ಲಾ ನಾಚಿಗಾಗದಿಲವೆ ಇವುರಿಗೆ."

"ಜನ ಕ್ಯಟ್ಟ ಮನುಸುರಿಗೂ ಬ್ಯಲೆ ಕೊಡ್ತಾಯಿರದರಿಂದ ನಾಚಿಗಾಗದಿಲ್ಲ ಕಣೊ. ಕಾರೊಳಗಡೆ ಕುತಗಂಡು ಕಪ್ಪುಗಾಜ ಏರಿಸಿಗಂಡ್ರೆ ಮುಗೀತು."

"ನಿಜ ಕಣೊ ಉಗ್ರಿ. ಮನುಷ್ಯ ಬಂಡಬಿದ್ದಂಗೂ ಬಂಡತನದಲ್ಲೇ ಉತ್ತರ ಕೊಡ್ತನೆ. ತಿಳಕಂಡಿರೊ ಜ್ಞಾನೆಲ್ಲಾ ಉತ್ತರ ಕೊಡಕ್ಕೆ ಬೇಕ್ತನೆ. ಜಾಸ್ತಿ ಓದಿಕಂಡಂಗೂ" ಮುಂಡೆ ಮಕ್ಕಳು ಕೆಟು ಕ್ಯರ ಹಿಡದೋಯ್ತಾ ಅವ್ರೆ. ಸಣ್ಣೊಂಥೊರ ಸ್ವಾಭಿಮಾನನೂ ಇವುರತ್ರ ಇಲ್ಲ" ಎಂದ ವಾಟಿಸ್ಸೆ.

"ಅದಿಮಿಕಂಡು ಕುತಗಳ್ಳ ಕಂಡಿದ್ದಿನಿ" ಎಂದಳು ಜುಮ್ಮಿ. ಶಾಕ್ ಆದ ವಾಟಿಸ್ಸೆ,

"ಯಾಕಕ್ಕ ಅಂಗಂತೀ?"

"ನಿನ್ನ ಮಾತ್ಯಲ್ಲ ಹಗಲೊತ್ತಿನವು ಕಂಡ್ರ. ಸಂಧ್ಯಾಯ್ತು ಅಂದ್ರೆ ವರಸೆ ಬದ್ಲು ಮಾಡ್ತಿ, ದುಡ್ಡು ಕಾಸು ಇರೋರನೆ ಒಂಥರಾ ಮಾತಾಡುಸ್ತಿ, ಇಲ್ದೊರನ್ನ ಒಂಥರಾ ಅಂತಿ. ನಾನು ಕಂಡುಲವೆ ನಿನ್ನ."

"ಅಕ್ಕಾ ಕಂಡೆಂ ಮಾಡಬ್ಯಾಡ. ನಾನು ಯಣ್ಣೆ ಯೇಟಿಗೆ ಅಂಗೆ ಮಾತಾಡಬಹುದು. ಆದ್ರೆ ಪತ್ತರಿಕೆ ತಿರಗ ಮದ್ದಿಲ್ಲದಂಗೆ ಆಯ್ತೀನಿ. ಅದೇತರ ಮಾತಾಡ್ತಿನಿ. ಯಾವ ಪಾರ್ಟಿಯವರೂ ನನ್ನ ಕೊಂಡಕಳಕ್ಕಾಗಿಲ್ಲ, ಅಷ್ಟೇ ಅಲ್ಲ ಯಾವ ದುಡ್ಡಿರೋನು ನನ್ನ ಕೊಳ್ಳಕ್ಕಾಗಿಲ್ಲ."

"ಹಿಡಕಂಡು ಬಂದ ನಾಯಿ ಮಲ ಹಿಡದತೇನ್ಲಾ, ನಿನ್ನಂಥೊನ್ನ ತಗಂಡೋಗಿ ಅದ್ಯಾವನು ಕಟ್ಟಾಯ್ಕಂಡನೂ" ಎಂದ ಕಾಳಮಾವ.

"ನಾನೇಳದು ಅದೇ ದೊಡ್ಡಪ್ಪ, ಯಾರೂ ನಮ್ಮನ್ನ ಕಟ್ಟಾಯ್ಕಳಂಗೆ ಇರಬಾರ್ದು. ಅದರಲ್ಲೂ ಜಗತ್ತಿಗೇ ನೀತಿ ಹೇಳೊ ಜನ ಕೇರಾಗಿರಬೇಕು. ಜನ ನಮ್ಮನ್ನ ಗಮನಸ್ತಾ ಅವುರೆ ಅನ್ನದನ್ನ ಯೋಚನೆ ಮಾಡಬೇಕು. ಲಂಕೇಶ್ ಬದುಕಿರೊವರಿಗೂ ವಿರೋಧಪಕ್ಷದ ಕ್ಯಲಸ ಮಾಡಿದ್ರು. ಟೀಕೆ ಮಾಡೊ ಹಕ್ಕನ್ನು ಸಾಯೋವರಿಗೂ ಉಳಿಸಿಗಂಡಿದ್ರು. ಅದ್ಕೆ ಅಲವೆ ಜನ ಇವತ್ತಿಗೂ ಏನೇ ಆಗ್ಲಿ ಅವುನಿದ್ದಿದ್ರೆ ಏನು ಮಾಡೋನಪ್ಪ ಅಂತರೆ. ಯಾಕೇಳು?"

"ಕಾಳಮಾವನೂ ಅಂಗೆ ಅಲವೇನೊ ಬದುಕಿದ್ದು."

"ಇರಬವುದು. ಒಂದು ಸಣ್ಣ ಐಬೇನಪ್ಪ ಅಂದ್ರೆ, ದ್ಯಾವೇಗೌಡ್ರು ತಪ್ಪು ಕ್ಯಲಸ ನಾವು ಮಾತಾಡುವಾಗ ಸೈಲೆಂಟಾಗಿರತನೆ ನಮ್ಮ ದೊಡಪ್ಪ"

"ಅದೇನಂತ ಇದಲ್ಲ ಬುಡೊ. ಯಂಥಾ ಮನುಸನಲ್ಲು ಒಂದೈಬು ಇದ್ದೇ ಇರತದೆ. ಆದ್ರೆ ಎಡೂರಪ್ಪನಂಗಿರೋನು ಅವುನೊಬ್ಬನೆಯ."

"ಅದ್ಯಾಕ್ಲ ಅಂಗಂತಿ?"

"ದಾರಿತಪ್ಪಿದ ಮಸ್ನ ದಡ ಸೇರದಿಲ್ಲ ಕಣೆ."

"ರಾಮುಲುನು ಅಂಗೆ ಅಲವೆ."

"ಅಂಗರವುನತ್ರಹೋದವು ಓಡಿಬತ್ತವೆ."

"ಡೆಪನೆಟ್ಲಿ, ಶೂರರ್ಲಿ, ಸರ್ಟನ್ಲಿ!!!"

## ...ಹೆಸರಲ್ಲಿ ಏನಿದೆ?

...ಮಕ್ಕಳಿಗಿಡುವ ಹೆಸರುಗಳನ್ನು ನೋಡಿ. ವಿನಿತ, ...ನಿತ, ಪಿಂಕಿ, ಎಂಕಿ, ನಿಟಿ, ಗಿಟಿ ಏನೇನೋ ...ಸರುಗಳು.... ಕೇಳಿದರೆ ಹೆತ್ತವರಿಗೇ ಅರ್ಥ ...ಗೊತ್ತಿರುವುದಿಲ್ಲ. ಹೀಗಾಗಿ ಪಾರ್ವತಿ, ಸರಸ್ವತಿ, ಗೌರಿ, ..., ಸೀತೆ, ರೋಹಿಣಿ, ಅಶ್ವಿನಿ, ವನಜ ಮುಂತಾದ ...ರುಗಳೆಲ್ಲ ಮರೆವ್ರ ಸೇರಿರುತ್ತವೆ. ಶ್ರೀನಿವಾಸ, ಪರಮೇಶ, ...ಶ್ವರ, ರಾಮು, ಕೃಷ್ಣ ಪರಶುರಾಮ, ಗಂಗಾಧರ ಮುಂತಾದ ...ರೆಲ್ಲ ಹೇಳಹೆಸರಿಲ್ಲದಂತೆ ಆಗಿರುತ್ತವೆ. ಹೆತ್ತವರಿಗೆ ...ಪ್ಪೂ ಅರ್ಥಪೂರ್ಣ ಹೆಸರು ಇಡುವ ಆಶೆ. ...ರ್ಣಚಂದ್ರ, ತೇಜಸ್ವಿ, ಕೋಕಿಲೋದಯ ಚೈತ್ರ, ...ಕೋತ್ತರ ಶರ್ಮ, ವಿಜಯ ರಾಮಕೃಷ್ಣ ಲಕ್ಷ್ಮೀಪಾರ್ವತಿ ಸರಸ್ವತಿ ವಗ್ಯೆರೆ ಹೆಸರುಗಳೆಲ್ಲ ...ದದ್ದು ಹಾಗೆ. ಆದರೆ ಇದ್ದಕ್ಕಿದ್ದಂತೆ ಒಂದು ಹೆಸರು ಎಲ್ಲೆಲ್ಲೂ ಜನರ ಕಿವಿಗೆ ಬೀಳುತ್ತದೆ. ಆ ...ರನ್ನು ಅನೇಕರು ಮಕ್ಕಳಿಗೆ ಇಡುತ್ತಾರೆ. 'ಪಲ್ಲವಿ'ಗೆ ಆದದ್ದು ಹಾಗೆ. ನಾನು ಅಕಸ್ಮಾತ್ ...ದೊಂದು ಚಿತ್ರಕ್ಕೆ 'ಪಲ್ಲವಿ' ಎಂದು ಹೆಸರಿಟ್ಟೆ. ಅದನ್ನಿಟ್ಟ ಕೆಲವು ತಿಂಗಳಲ್ಲೇ ಬೆಂಗಳೂರಿನ ...ದು ಥಿಯೇಟರ್‌ಗೆ, ಹತ್ತಾರು ಮನೆಗಳಿಗೆ, ನೂರಾರು ಹೆಣ್ಣುಮಕ್ಕಳಿಗೆ ಈ ಹೆಸರು ಬಂತು. ...ಲಬಾ ತೀರಿಕೊಂಡ ಕೆಲವು ದಿನಗಳಲ್ಲೇ ಅನೇಕ ಹೆಣ್ಣುಮಕ್ಕಳು ಸ್ನೇಹಾ ಆದರು. ಅದು ...ಯ ಹೆಸರು. ನನ್ನ ಫೇವರಿಟ್ ಹೆಸರುಗಳು ಗಂಗಾ, ರೋಹಿಣಿ ಮತ್ತು ವನಿತಾ. ಆದರೆ ...ಗೆ ಒಂದು ಪದ ತುಂಬ ಸುಂದರ ಅನ್ನಿಸಿ ಅದನ್ನು, ಹೆಚ್ಚು ಬಳಸಿದರೆ ಸವೆದುಹೋಗುತ್ತದೆ ...ದು ಜಿಪುಣ ಚಿನ್ನದ ನಾಣ್ಯಗಳನ್ನು ಶೇಖರಿಸುವಂತೆ ಅದನ್ನು ಸುಮ್ಮನೇ ಇಟ್ಟುಕೊಂಡೆ. ..., ಅಪ್ಪರ್ಣ, ಆನಂದ, ರೋಮಾಂಚನ, ಚಕಿತ ಎಂದು ಬಳಸುವಾಗಲೆಲ್ಲ ಇದನ್ನು ಬಳಸಬಹುದು. ...ಲೆ ನಾನು ಮತ್ತೆಮತ್ತೆ ಅದನ್ನು ಬಳಸುವುದೇ ಇಲ್ಲ, ಇದನ್ನು ನೋಡಿಕೊಂಡು ನನಗೆ ಈ ...ದ ಬಗ್ಗೆ ವಿಶೇಷ ಆಸಕ್ತಿ ಮೂಡುತ್ತದೆ.



'ವಿಸ್ಮಯ' ಹೆಣ್ಣುಮಕ್ಕಳಿಗೆ ಒಳ್ಳೆಯ ಹೆಸರು ಅಲ್ಲವೆ?

## ಕನಸಿನ ಮಾಧ್ಯಮ

ಸಿನಿಮಾ ಎಂಬುದು ಮಾಯಾಲೋಕ. ಒಂದು ಮಟ್ಟದಲ್ಲಿ ಇದು ದಾಖಲೆ. ಇನ್ನೊಂದು ಮಟ್ಟದಲ್ಲಿ ಭ್ರಾಮಕ. ಮನುಷ್ಯನ

ಮನಸ್ಸನ್ನು ಪೂರ್ತಿ ಆವರಿಸಿಬಿಡಬಲ್ಲ ಈ ಸಿನಿಮಾ ಬಗ್ಗೆ ಇನ್ನೊಮ್ಮೆ ಯೋಚಿಸಿ. ನೀವು ಒಂದು ಮನೆಯ ಫೋಟೋ ತೆಗೆದರೆ ಅದು ಫೋಟೋ: ಮನೆಯಲ್ಲ. ಆ ಚಿತ್ರ ತನ್ನ ವಿವಿಧ ಆಯಾಮಗಳಿಂದ ನಿಮ್ಮನ್ನು ಮುತ್ತುತ್ತದೆ. ಮನೆಯ ಬಗ್ಗೆ ಸಿನಿಮಾದಲ್ಲಿ ಕತೆ ಹೇಳಿದರೆ ಅದು ಇನ್ನೂ ಆಳಕ್ಕೆ ಇಳಿದು ನಿಮ್ಮನ್ನು ಸೇರುತ್ತದೆ. ಈಚೆಗೆ ಟಿಬೆಟ್‌ನ ಧರ್ಮಗುರು ದಾಲೈ ಲಾಮಾ ಹಾಲಿವುಡ್ ಸಿನಿಮಾದವರ ಮೂಲಕ ಟಿಬೆಟ್‌ನ ದುರಂತವನ್ನು ಜಗತ್ತಿನ ಎದುರು ಮಂಡಿಸುತ್ತಿದ್ದಾರೆ.

ಇವತ್ತು ಹಾಲಿವುಡ್‌ನಲ್ಲಿ ಯಾರನ್ನು ಕೇಳಿದರೂ ಟಿಬೆಟ್ ವಾತಾವರಣದ ಸಿನಿಮಾ ತೆಗೆಯುವುದಾಗಿ ಹೇಳುತ್ತಿದ್ದಾರೆ. ಚೈನಾ ಟಿಬೆಟ್ಟನ್ನು ಆಕ್ರಮಿಸಿಕೊಂಡ ಮೇಲೆ ಟಿಬೆಟ್‌ಗೆ ಆದದ್ದು ಅಮೆರಿಕಾ ಟಿಬೆಟ್‌ನ ನೆರವಿಗೆ ಬಂದದ್ದು, ಟಿಬೆಟ್‌ನ ಮಹಾ ಸಾಧುಸ್ವಭಾವದ ಜನ. ಅವರನ್ನು ಹಿಂಸಿಸಿದ ರಾಕ್ಷಸರು.

ಇದೆಲ್ಲದಕ್ಕಿಂತ ನನಗೆ ಕುತೂಹಲಕರವಾಗಿ ಕಂಡದ್ದು ಈ ಸಿನಿಮಾ ದಾಲೈ ಲಾಮಾರ ಮೇಲೆ ಬೀರಬಹುದಾದ ಪ್ರಭಾವ. ಅದೆಷ್ಟೇ ಸೂಕ್ಷ್ಮವಾಗಿ ತೆಗೆದರೂ, ಕಠೋರ ದೃಶ್ಯಗಳನ್ನು ಅಳವಡಿಸಿಕೊಂಡರೂ ಈ ಸಿನಿಮಾ ಮಹಾ ಕನಸುಗಳ ಪ್ರಪಂಚ. ಅಪ್ಸರೆಯಂಥ ಕನ್ಯೆ ಅಪ್ಸರೆಯಾಗಿಯೇ ಸಿನಿಮಾದಲ್ಲಿ ಬಂಧಿತಳಾಗುವುದು. ಸಿನಿಮಾದ ಹೊರಗೆ ಅವಳು ದುರಂತಮಯವಾಗಿ ವೃದ್ಧೆಯಾಗುವುದು. ಬದುಕಿನಲ್ಲಿನ ಪರಿವರ್ತನೆ, ಬದುಕಿನ ಕ್ಷಣಿಕತೆ ಮತ್ತು ರೋಮಾಂಚನ... ಎಲ್ಲವನ್ನೂ ತೋರುವ ಸಿನಿಮಾ ಪ್ರಯೋಗಶಾಲೆಯ ವಸ್ತು. ಸೆಕೆಂಡ್‌ಗೆ ಇಪ್ಪತ್ನಾಲ್ಕು ಫ್ರೇಮ್‌ಗಳಲ್ಲಿ ಓಡಿ ಜೀವನದ ಚಲನೆಯನ್ನು ಸೃಷ್ಟಿಸುವ ಇದು ವಿಚಿತ್ರವಾದದ್ದು.




ಸಿನಿಮಾ ಮೂಲಕ ಟಿಬೆಟ್‌ಗೆ ಇಡೀ ಜಗತ್ತಿನ ಕಾಳಜಿ ದೊರಕಿಸಿಕೊಳ್ಳಬೇಕೆನ್ನುವ ದಾಲೈ ಲಾಮಾ ಇದೆಲ್ಲದರ ಅಂತ್ಯದಲ್ಲಿ ಏನಾಗುತ್ತಾರೋ ಎಂದು ಆತಂಕವಾಗುತ್ತದೆ.

ಯಾಕೆಂದರೆ ನಾವು ನೋಡುವ ಮನುಷ್ಯ ಭೌತಿಕ, ರಕ್ತಮಾಂಸದ ಜೀವಿ. ಆದರೆ ನಾವು ನೋಡದಿರುವ ಆತನ ನೆನಪು, ಕಾತರ, ಕನಸು ಮುಂತಾದವು ಅವನನ್ನು ದಂಗುಬಡಿಸಬಲ್ಲವು.

ಕನವರಿಕೆಯನ್ನೇ ತೆಗೆದುಕೊಳ್ಳಿ. ನಾವು ಗೊರಕೆ ಹೊಡೆಯುವುದೇ ನಮಗೆ ಗೊತ್ತಿರುವುದಿಲ್ಲ, ಇನ್ನು ಕನವರಿಕೆ ಹೇಗೆ ನಮ್ಮ ಹತೋಟಿಯಲ್ಲಿರಬೇಕು? ದಾಲೈ ಲಾಮಾ ಇದ್ದಕ್ಕಿದ್ದಂತೆ ಸ್ವಪ್ನಗಳನ್ನು ನೆನೆದು ಕನವರಿಸತೊಡಗಿದರೆ...

ಅವರ ಶಿಷ್ಯರು ಸುತ್ತ ನಿಂತು ಮೌನ ತಾಳುವುದನ್ನು ಕಲ್ಪಿಸಿಕೊಳ್ಳಬಲ್ಲೆ.

ಮೇ 28, 1997



# ಸ್ವಾಮಿಗಳು ಬ್ಲೂಫಿಲಂ ನೋಡ್ತಾರಾ ಸಾ



ಎಚ್.ಎಲ್. ಕೇಶವಮೂರ್ತಿ

## ಅಣಕ

ಇದು ಯುಗಧರ್ಮವೇ ಇರಬಹುದು. ಹಿಂದೂ ದೇವರುಗಳ, ಅವರ ಸಂಪ್ರದಾಯಗಳ ಅವಹೇಳನ ನಿರಂತರವಾಗಿ ನಡೆಯುತ್ತಲೇ ಇದೆ. ಇಂತಹ ಧರ್ಮವಿನಾಶದ ಪಿತೂರಿಯತ್ತ ಆಸ್ತಿಕ ಮಹಾಶಯರು ಗಮನಹರಿಸದೇ ಇರುವುದು, ಪ್ರತಿಭಟನೆಗೆ ಮುಂದಾಗದೇ ಇರುವುದು ನೋವಿನ, ದುಃಖದ ಸಂಗತಿ ಆಗಿದೆ. ಇದರ ಬಗ್ಗೆ ಎಚ್ಚರಿಸಲು ಕೆಲವು ವಾಹಿನಿಗಳಾದರೂ ಶ್ರಮಿಸುತ್ತಿರುವುದು ಆಶಾದಾಯಕವಾಗಿದೆ. ಇತ್ತೀಚೆಗೆ ಒಂದು ವಾಹಿನಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಒಂದು **panel discussion** ಏರ್ಪಡಿಸಿತ್ತು. ತಮ್ಮ ಮನೋಧರ್ಮ ಬಿಂಬಿಸಲು ಇಂತಹವುಗಳನ್ನು ಏರ್ಪಡಿಸ ಲಾಗುತ್ತದೆ ಎಂದು ಲಘುವಾಗಿ ಮಾತನಾಡುವವರೂ ಇದ್ದಾರೆ. ಅಂತಹವರ ಮಾತನ್ನು ಬದಿಗೊತ್ತಿ ಅಲ್ಲಿ ಹೊರಬಂದ ವಿಷಯಗಳನ್ನು ನನ್ನದೇ ಆದ ರೀತಿಯಲ್ಲಿ ವಿವರಿಸುವ ಪ್ರಯತ್ನ ಮಾಡುತ್ತೇನೆ.

ಒಂದು ಊರು. ಅಲ್ಲೊಂದು ಮನೆ. ಅದಕ್ಕೆ ಕಾಂಪೌಂಡು ಗೋಡೆ ಇತ್ತು, ಈ 'ಅವಸರ' ಅನ್ನೋದು ಯಾವಾಗ ಯಾರಿಗೆ ಎಲ್ಲಿ ಆಗುತ್ತೆ ಎಂದು ಹೇಳಲು ಬರುವುದಿಲ್ಲ, ಮೂತ್ರಾಲಯಗಳಿಗೆ ಹೋಗೋಣ ಅಂದರೂ ಎಲ್ಲ ಕಡೆಯೂ ಇರುವುದಿಲ್ಲ, ಇದ್ದರೂ ಒಳಕ್ಕೆ ಹೋಗಲು ಸಾಧ್ಯವೇ ಆಗದ ಹಾಗೆ ಅದರ ನಿರ್ವಹಣೆ ಇರುತ್ತೆ ಎನ್ನುವುದು ಎಲ್ಲರ ಅನುಭವ. ಆ ಮನೆಯ ಮುಂದೆ ಹೋಗುವವರಿಗೆ ಕೆಲವೊಮ್ಮೆ 'ಅವಸರ' ಆಗೋದು. ಅವರು ಗೋಡೆ ಕಡೆ ಮುಖ ಮಾಡಿ 'ಅವಸರ' ನೀಗಿಸಿ ಕೊಳ್ಳುತ್ತಿದ್ದರು. ಈ 'ಅವಸರ' ಅನ್ನೋದು ಅಂಟು ಜಾಡ್ಯ, ಒಬ್ಬರಿಗೆ ಆದರೆ ಎಲ್ಲರಿಗೂ ಆಗುವುದು ಸಾಮಾನ್ಯ. ಹೀಗಾಗಿ ಆ ಮನೆಯ ಕಾಂಪೌಂಡು ಗೋಡೆಗೆ ಪ್ರೋಕ್ಷಿಸಿದ ತೀರ್ಥದಿಂದ ಮನೆಯವರಿಗೆ ಎರಡು ರೀತಿಯ ತೊಂದರೆ ಆಯಿತು. ಒಂದು ಅಸಹನೀಯ ಗಬ್ಬು ವಾಸನೆಯದ್ದು. ಇನ್ನೊಂದು ಬೆಳಗ್ಗೆ ಆದರೆ ಗೋಡೆಗೆ 'ಅವಸರ' ತೀರಿಸಲು ನಿಂತಿರುವವರ ದರ್ಶನ ಭಾಗ್ಯ! ಹೇಳಿ ನೋಡಿದರು. ಕೇಳಲಿಲ್ಲ. 'ಇಲ್ಲಿ ಮೂತ್ರ ವಿಸರ್ಜನೆ ಮಾಡಬಾರದು' ಎಂದು ಬರೆಸಿದರು. ಓದಲು ಬಾರದವರಿಗೆ ಮನೆಯವರು ನಿಷೇಧ ಹೇರಿದ್ದಾರೆ ಎಂಬುದು ಅರಿವಿಗೇ ಬರಲಿಲ್ಲ. ಇನ್ನು ವಿದ್ಯಾವಂತ ಮಹಾಶಯರದ್ದು ಮತ್ತೊಂದು ರೀತಿ. ಅದನ್ನು ಓದಿ ಏನನ್ನೋ ಮರೆತವರಂತೆ ತಕ್ಷಣ 'ಅವಸರ' ಕ್ರಿಯೆಗೆ ಮುಂದಾಗುತ್ತಿದ್ದರು!

ಮನೆಯವರಿಗೆ ಮನೆಯೇ ನರಕ ಆಯಿತು. ಮನೆ ಬದಲಾಯಿಸುವ ಹಾಗಿಲ್ಲ, ಸ್ವಂತ ಮನೆ. ಸಂಕಟದಲ್ಲಿರುವವರಿಗೆ ವೆಂಕಟರಮಣ ಬಂದ. ಕಾಂಪೌಂಡು ಗೋಡೆಯ ಮೇಲೆ ದೇವರ ಚಿತ್ರವನ್ನ ಸೊಗಸಾಗಿ ಬಿಡಿಸಿದ. ಸೂಚನಾವಾಕ್ಯ ಮಾಡಲಾಗದ್ದನ್ನು ದೇವರು ಮಾಡಿದ್ದ! ದೇವರ ಮುಖಕ್ಕೆ ಮೂತ್ರ ವಿಸರ್ಜನೆಯೆ? ಎಂತಹ ನಾಸ್ತಿಕನ ಮನಸ್ಸೂ ಒಪ್ಪದ ಸಂಗತಿ ಅಲ್ಲವಾ. ಮಹಾಶಯರುಗಳ ತೀರ್ಥ ಪ್ರೋಕ್ಷಣಾ ಕಾರ್ಯ ಬಂದ್ ಆಯಿತು. ನಿರಾಳವಾಯಿತು ಮನೆಯವರ ಮನಸ್ಸು.

ಮುಗಿಯಿತೆ ಅವರ ಸಂಕಟ? ನಿರಾಳವಾಯಿತೆ ಅವರ ಮನಸ್ಸು?

ಅಯ್ಯೋ ರಾಮನೇ ಏನೆಂದು ಹೇಳಲಿ?




ಸಿಡಿದೆದ್ದರು ಭಜರಂಗಿಗಳು!

ಮಕ್ಕಳ ತಡೆಯಲು ನಿರೋಧ್ ಬಳಸಿದಂತೆ ಉಚ್ಚೆ ಉಯ್ಯುವುದ ತಡೆಯಲು ದೇವರು ಬಳಸುತ್ತಿದ್ದಾರಲ್ಲಾ, ಆ ಸರ್ವಾಂತರ್ಯಾಮಿ ಇವರಿಗೆ ನಿರೋಧ್ ರೀತಿ ಬಳಕೆ ಆದನಲ್ಲ, ಅವನನ್ನು ಹಾಗೆ ಬಳಸಿಕೊಂಡಿದ್ದಾರಲ್ಲಾ ಎಂಬುದು ಅವರ ಆಕ್ರೋಶ. ಮನೆಯವರ ತಂತ್ರಕ್ಕೆ ರೂಪಿತವಾಯಿತು ಭಜರಂಗಿಗಳ ಪ್ರತಿತಂತ್ರ! ಹೇಗೋ ಮನೆಯವರ ಭಾವಚಿತ್ರ ಸಂಪಾದಿಸಿದರು. ಅವನ್ನ ಅದೇ ಕಾಂಪೌಂಡು ಗೋಡೆಯ ಮೇಲೆ ಚಿತ್ರಿಸಿದರು!

ಈಗ ಏನಾಯಿತು ನೋಡಿ. ಅವತ್ತಿನಿಂದ ಮನೆಯವರ ಮುಖದ ಮೇಲೇ 'ಅವಸರ'ದ ತೀರ್ಥ ಪ್ರೋಕ್ಷಣೆ! ಈ ದೃಶ್ಯ ಮನೆಯವರಿಗೆ ಅಸದಳ ನೋವುಂಟು ಮಾಡಿತು. ಗಾಬರಿ ಬಿದ್ದ ಅವರು ತಮ್ಮ 'ಮುಖ' ಉಳಿಸಿಕೊಳ್ಳಲು ಕಾಂಪೌಂಡು ಗೋಡೆಗೆ ಬಣ್ಣ ಹೊಡೆಸಬೇಕಾಯಿತು!

ಅದು ಸರಿ. ಆದರೆ ಮನೆಯವರಿಗೆ ಹೊಡೆಯುತ್ತಿದ್ದ ಕಟುವಾಸನೆ; ಅಸಹನೀಯ ಬದುಕು ಸರಿಹೋಯಿತೆ?

ಅದರ ಪ್ರಶ್ನೆ ಬೇಡ. ದೇವರಿಗೆ ಆಗುವ ಅವಮಾನ ನಿಂತಿತಲ್ಲ ಅದು ಸಾಕು!

ಇದು ಭಜರಂಗಿ ನ್ಯಾಯ!

*******

ಮತ್ತೊಂದು ಚರ್ಚೆಯ ವಿಷಯ-ಮಾತಾ ಬಿಯರ್!

ವಿದೇಶೀ ಕಂಪನಿಯ ಬಿಯರ್ ಬ್ರಾಂಡ್ ಅಂತೆ ಅದು!

ಇದರಿಂದ ಏನು ತೊಂದರೆ ಅಂದರೆ-ಕಾಳಿಮಾತಾಗೆ ಅವಮಾನ ಆಗಿದೆ!

ಸ್ವಾರಸ್ಯಕರ ಆಗಿದೆ. 'ರಾಘವೇಂದ್ರ ವೈನ್‌ಸ್ಟೋರ್' ಅಂದರೆ ರಾಘವೇಂದ್ರನಿಗೆ ಅವಮಾನವೆ?' 'ವೆಂಕಟೇಶ್ವರ ಹಂದಿಮಾಂಸದ ಅಂಗಡಿ' ಎಂದರೆ ಏಳು ಬೆಟ್ಟದ ಮೇಲೆ ಕುಳಿತಿರೋ ತಿಮ್ಮಪ್ಪನಿಗೆ ಮಾಡಿದ ಅವಮಾನವೆ?

ಹೌದು ಅನ್ನುವವರೂ ಇರಬಹುದು. ಇಲ್ಲ ಎನ್ನುವವರೂ ಇರಬಹುದು.

ಯಾಕೆ ಇಲ್ಲ?

ಮೊಕದ್ದಮೆ ದಾಖಲಿಸಿದಿರಿ ಅನ್ನಿ, ಆರೋಪಿ 'ಆ ದೇವರ ಕೃಪೆಯಿಂದಲೇ ನನ್ನ ವ್ಯಾಪಾರ ವೃದ್ಧಿಸಿದೆ' ಎನ್ನಬಹುದು! ನ್ಯಾಯಾಲಯ ಅದನ್ನು ಪುರಸ್ಕರಿಸಲೂಬಹುದು. ಅಲ್ಲಿಗೆ ಏನಾಯಿತು. ಲಾಭ ಬರುವಂತಿದ್ದರೆ ದೇವರು ಅವಮಾನ ಸಹಿಸಿಕೊಳ್ಳುತ್ತಾನೆ ಅಂದ ಹಾಗಾಯಿತು! ಅಥವಾ ನ್ಯಾಯಾಲಯವೇ ಯಾರಿಗೆ ಅಪಮಾನ ಆಗಿದೆಯೋ ಅವರೇ ಮೊಕದ್ದಮೆ ಹೂಡಲಿ ಎನ್ನಬಹುದು. ಆಗ ಎಲ್ಲಿಂದ ಕರೆದು ತರುವುದು ದೇವರನ್ನ? ಇವರೇನು ಭಕ್ತ ಪ್ರಹ್ಲಾದರೆ!?

*******

ಇನ್ನು ಶ್ರೀರಾಮಚಂದ್ರ.

ಏನು ಮಹಿಮೆ ಆತನದ್ದು!

ದುರುಳ ರಾವಣ ಸೀತಾಮಾತೆಯನ್ನು ಕದ್ದು ಹೊಯ್ದಿದ್ದ. ಆ ಮಾತೆಯನ್ನು ಕರೆತರಲು ಲಂಕೆಗೆ ಹೋಗಬೇಕಿತ್ತು, ಸಮುದ್ರ ಅಡ್ಡ ಇತ್ತು, ರಾಮಚಂದ್ರ ಸೇತುವೆ ನಿರ್ಮಿಸಿದ. ಶ್ರೀರಾಮನ ಪಾದ ಸ್ಪರ್ಶಿಸಿದ ಆ ರಾಮಸೇತುವೇ ಪವಿತ್ರ ಹಿಂದೂಗಳ ಯಾತ್ರಾಸ್ಥಳ. ಇದೆಲ್ಲದರ ಅರಿವಿದ್ದೂ ಕರುಣಾನಿಧಿ ಎಂಬ ಪಾಷಂಡಿ 'ರಾಮನೇ ಹುಟ್ಟಿರಲಿಲ್ಲ, ಹಾಗಾದಾಗ ರಾಮಸೇತು ಎಲ್ಲಿ ಬಂತು' ಎಂದು ಕೇಳು[...] ಉದ್ಧಟತನ ತೋರಿದ್ದಾನೆ. 'ರಾಮ ಯಾವ ಇಂಜಿನಿಯರು? ಅವನು ಯಾವ, ಕಾಲೇಜಿನಲ್ಲಿ ಡಿಗ್ರಿ ತಗಂಡ' ಎಂದು ಪ್ರಶ್ನಿಸುತ್ತಿದ್ದಾನೆ. ಆ ಶತಮೂರ್ಖನಿಗೆ ತ್ರೇತಾಯುಗದಲ್ಲಿ ಕಾಲೇಜುಗಳು ಇರಲಿಲ್ಲ ಎಂಬ ಅರಿವೂ ಇಲ್ಲ, ಬಹುಸಂಖ್ಯಾತ ಹಿಂದೂಗಳ ಮನಸ್ಸಿಗೆ ನೋವಾಗು[...] ಮಾತನಾಡುತ್ತಿದ್ದಾನೆ.

ಕರುಣಾನಿಧಿಯ ಮಾತು ಅಕ್ಷಮ್ಯ ಅಪರಾಧ. ನಮ್ಮದು ಪ್ರಜಾಪ್ರಭುತ್ವ. ನಿರಂಕುಶ ಪ್ರಭುತ್ವ ಅಲ್ಲ, ಬಹುಜನ[...] ಮಾತಿಗೇ ಇಲ್ಲಿ ಬೆಲೆ ಸಿಗಬೇಕು. ಇದಕ್ಕಾಗಿ ಓರ್ವ 'ಸ್ವಾಭಿಮಾನಿ' ನ್ಯಾಯಮೂರ್ತಿಗಳು ನ್ಯಾಯಾಲಯದ ಮೆಟ್ಟಿಲು ಏರಿದ್ದಾರಂತೆ. ಆದರೆ ಏನು ಮಾಡುವುದು ನ್ಯಾಯಾಲಯದ್ದು ಯಾವಾಗಲೂ ಆಮೆಯ ನಡಿಗೆ ಧಾರ್ಮಿಕಹೀನ ಪ್ರಚೋದನೆಗಳಿಗೆ ಕಾರಣವಾದ ಇಂತಹ ವಿಷಯಗಳನ್ನು ತುರ್ತಾಗಿ ಪರಿಗಣಿಸಬೇಕು. ಆದ್ಯತೆ ಮೇಲೆ ತೀರ್ಪು ನೀಡಬೇಕು. ಆದರೇನು ಮಾಡೋಣ. ಈ ಹಿಂದೂ ನ್ಯಾಯಮೂರ್ತಿಗಳಿಗೆ ಇರುವ 'ಸ್ವಾಭಿಮಾನ' ನ್ಯಾಯಾಧೀಶರಿ[...] ಇಲ್ಲವಲ್ಲಾ ಎಂಬುದು ಅವರ ಕೊರಗು. ಹೀಗಾಗಿ [...] ಮೊಕದ್ದಮೆ ನ್ಯಾಯಾಲಯದಲ್ಲಿಯೇ ಕೊಳೆಯುತ[...] ಬಿದ್ದಿದೆಯಂತೆ!

ಎಂತಹ ವಿಪರ್ಯಾಸ!

*******


ಇವನ್ನೇ ಮೆಲುಕು ಹಾಕುತ್ತಾ ಇದ್ದೆ. ಕ್ಯಾತೇಗೌಡ ಒಕ್ಕರಿಸಿದ. ಅವನ ಮುಖ ನೋಡಿದೆ. ಖಂಡುಗ ಪ್ರಶ್ನೆಗಳ ದರ್ಶನ ಮಾಡಿದ ಹಾಗಾಯಿತು.

'ಸ್ವಾಮಿಗೋಳು ಸಿನಿಮಾ ನೋಡಬಹುದಾ ಸಾ' ಅಂ[...] ಕೇಳಿದ.

'ಯಾವ ಸ್ವಾಮಿಗೋಳು?'

# ಕರ್ತವ್ಯ ಮರೆತ ಕನ್ನಡ ಚಿತ್ರೋದ್ಯಮ


ಹಿಂದಿ ಚಿತ್ರನಟ ಅಮಿರ್ ಖಾನ್‌ನ 'ಸತ್ಯಮೇವ ಜಯತೆ' ಟಿ.ವಿ. ಶೋ ಬಗ್ಗೆ ಬರೆಯಲೇಬೇಕಾಗಿದೆ. ಹೆಣ್ಣು ಭ್ರೂಣಹತ್ಯೆ ಮತ್ತು ಮಕ್ಕಳ ಮೇಲಿನ ಲೈಂಗಿಕ ಶೋಷಣೆಯ ಬಗ್ಗೆ ಆತ ನಡೆಸಿಕೊಟ್ಟ ಕಾರ್ಯಕ್ರಮ ಅತ್ಯಂತ ಉಪಯುಕ್ತವಾಗಿತ್ತು ಮತ್ತು ಪ್ರತಿಯೊಬ್ಬರೂ ನೋಡಲೇಬೇಕಾದ ಕಾರ್ಯಕ್ರಮವಾಗಿತ್ತು, ನಮ್ಮ ಅಕ್ಕಪಕ್ಕದ ಭಾಷೆಯವರು ಈ ಕಾರ್ಯಕ್ರಮವನ್ನು ತಮ್ಮದೇ ಭಾಷೆಯಲ್ಲಿ ನೋಡಿದರೆ ಕನ್ನಡಿಗರಿಗೆ ಆ ಭಾಗ್ಯ ಇರಲಿಲ್ಲ, ಕನ್ನಡದ ಡಬ್ಬಿಂಗ್ ವಿರೋಧಿ ನೀತಿಯಿಂದಾಗಿ ಕನ್ನಡ ಮಾತ್ರ ಅರ್ಥಮಾಡಿಕೊಳ್ಳಬಲ್ಲ ನಮ್ಮ ಶೇಕಡಾ 60 ರಷ್ಟು ಜನತೆ ಉತ್ತಮ ಕಾರ್ಯಕ್ರಮವೊಂದನ್ನು ನೋಡುವ ಅವಕಾಶದಿಂದ ವಂಚಿತವಾಯಿತು ಅಥವಾ ಕಾರ್ಯಕ್ರಮ ನೋಡುವ ಅವರ ಹಕ್ಕನ್ನು ಕಿತ್ತುಕೊಳ್ಳಲಾಯಿತು.




ಪರಭಾಷೆಯಿಂದ ಡಬ್ ಮಾಡಿದರೆ ಕನ್ನಡ ಸಿನಿಮಾಗಳು ಓಡುವುದಿಲ್ಲವೆಂಬುದು ಕನ್ನಡ ಚಿತ್ರರಂಗದವರ ಕೊರಗು. ಹಾಗಾಗಿ ಕನ್ನಡದಲ್ಲಿ ಡಬ್ಬಿಂಗ್ ನಿಷೇಧ! ಬೇರೆ ಭಾಷೆಯ ಚಿತ್ರಗಳನ್ನು, ಕಾರ್ಯಕ್ರಮಗಳನ್ನು ಕನ್ನಡಕ್ಕೆ ತರಲು ನಿಷೇಧಿಸಿದ ಮೇಲೆ ಪರಭಾಷೆಯ ಚಿತ್ರಗಳ-ಕಾರ್ಯಕ್ರಮಗಳ ಗುಣಮಟ್ಟಕ್ಕೆ ಸಮನಾಗಿ ಕನ್ನಡ ಚಿತ್ರಗಳನ್ನು ಮತ್ತು ಕಾರ್ಯಕ್ರಮಗಳನ್ನು ಮಾಡಬೇಕಾಗಿದ್ದುದು ಉದ್ಯಮದವರ ಕರ್ತವ್ಯವಾಗಿತ್ತು. ಆದರೆ ಕನ್ನಡದಲ್ಲಿ ಅದಾಗಲೇ ಇಲ್ಲ, ಡಬ್ಬಿಂಗ್ ವಿರೋಧಿಸಿದವರೇ ರೀಮೇಕ್ ಮೂಲಕ ಕನ್ನಡ ಸೊಗಡನ್ನು ಕೆಡಿಸುತ್ತಾ ಬಂದರು. ಮಾತೆತ್ತಿದರೆ ಕನ್ನಡಾಭಿಮಾನದ ಹೆಸರಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾ ಬಂದರು. ಉತ್ತಮ ಚಿತ್ರಗಳನ್ನು, ಕಾರ್ಯಕ್ರಮಗಳನ್ನು ಮಾಡಿದರೆ ಕನ್ನಡಿಗರು ನೋಡೇ ನೋಡುತ್ತಾರೆಂಬ ಸತ್ಯವನ್ನು ಚಿತ್ರೋದ್ಯಮದವರು ಅರ್ಥಮಾಡಿಕೊಳ್ಳಬೇಕು. ಯಾವಾಗಲೂ ಸೀಮಿತ ಮಾರುಕಟ್ಟೆಯ ಬ[...] ಮಾತನಾಡುವ ಇವರು ಮಾರುಕಟ್ಟೆ ವಿಸ್ತರಣೆಗೆ ಎದೆಗಾರಿಕೆ ತೋರಬೇಕಾಗಿ[...] ಕನಿಷ್ಠ ಸಾಮಾಜಿಕ ಕಾಳಜಿಯನ್ನುಳ್ಳ ಚಿತ್ರಗಳನ್ನು ಮತ್ತು ಕಾರ್ಯಕ್ರಮಗಳನ್ನಾದರು[...] ಕನ್ನಡಕ್ಕೆ ಡಬ್ಬಿಂಗ್ ಮಾಡುವ ಅವಕಾಶವಿರಬೇಕು. ಇಲ್ಲದಿದ್ದಲ್ಲಿ ನಮ್ಮಲ್ಲಿರು[...] ಮಹಾನ್ ನಟರುಗಳು-ನಿರ್ದೇಶಕರು ಆಮೀರ್ ಖಾನ್ ರೀತಿಯಲ್ಲಿ ಸಾಮಾಜಿ[...] ಹೊಣೆಗಾರಿಕೆ ನಿಭಾಯಿಸುವಂತಹ ಕಾರ್ಯಕ್ರಮಗಳನ್ನು ಮಾಡುವತ್ತ ಪ್ರಯ[...] ನಡೆಸಬೇಕು. ಇಲ್ಲದಿದ್ದರೆ ಕನ್ನಡಿಗರು ಬೇರೆ ಭಾಷೆಗಳತ್ತ ಸಂಪೂರ್ಣವಾ[...] ವಾಲುತ್ತಾರೆ. ಇನ್ನಾದರೂ ಕನ್ನಡದ ನಟ-ನಿರ್ದೇಶಕರು, ಸಾಹಿತಿಗಳ[...] ಬುದ್ಧಿಜೀವಿಗಳು, ಉದ್ಯಮದವರೆಲ್ಲರೂ ಸಾಮಾಜಿಕ ಬದ್ಧತೆಯನ್ನು[...] ಗಂಭೀರವಾದ ಚಿತ್ರಗಳನ್ನು, ಕಾರ್ಯಕ್ರಮಗಳನ್ನು ಮಾಡುವತ್ತ ಗಮನಹರಿಸ[...]

- ಕು.ಸ. ಮಧುಸೂದನ್, ಚಿಕ್ಕಮಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.




## ತಪ್ಪು ಸರಿಮಾಡಿಕೊಳ್ಳಿ



ತಮ್ಮ 'ಪತ್ರಿಕೆ' ಪ್ರಾರಂಭವಾದಾಗಿನಿಂದ ತಪ್ಪದೇ ಓದುತ್ತಾ ಬಂದಿದ್ದೇನೆ. ಪತ್ರಿಕೆ ತುಂಬಾ ಸ್ವಾರಸ್ಯಕರವಾಗಿರುತ್ತದೆ.

ಪತ್ರಿಕೆಯ ಮೇ 9, 2012ರ ಸಂಚಿಕೆಯಲ್ಲಿ, ಪುಟ-15 ರಲ್ಲಿ '1955ರಲ್ಲಿ ನಡೆದ ಮೈಸೂರು ಆಕಾಶವಾಣಿ ಸಮಾರಂಭದಲ್ಲಿ ಈ ಅಪರೂಪದ ದೃಶ್ಯವನ್ನು ಕ್ಲಿಕ್ಕಿಸಿದವರು ಬಿ.ಎಸ್.ನಾಗರಾಜನ್' ಎಂದು ತಿಳಿಸುತ್ತಾ ಏಳು ಮಹನೀಯರ ಫೋಟೊಗಳನ್ನು ತೋರಿಸಿದ್ದೀರಿ. ಎಲ್ಲಾ ಸರಿಯಾಗಿದೆ. ಆದರೆ ಆ ಫೋಟೋದಲ್ಲಿರುವ ನಾಲ್ಕನೆಯವರು 'ವೀ. ಸೀತಾರಾಮಯ್ಯ'ನವರು. ಆದರೆ ನೀವು 'ಎಂ.ವೀ.ಸೀತಾರಾಮಯ್ಯ'ನವರು ಎಂದು ಪ್ರಿಂಟ್ ಮಾಡಿದ್ದಿರಿ. ವಿ.ಸೀ ಬೇರೆ, ಎಂ.ವಿ.ಸೀ ಬೇರೆ.

ದಯವಿಟ್ಟು ಮುಂದಿನ ಸಂಚಿಕೆಯಲ್ಲಿ ಇದನ್ನು ಸರಿಪಡಿಸಿ ಪ್ರಕಟಿಸಿ.

- ಎ. ಗೋಪಾಲಸ್ವಾಮಿ, ಬೆಂಗಳೂರು

## ಎದೆ ಝಲ್ ಎನಿಸುವ ಮಾಂಟೊ

ಒಂದೇ ಗುಕ್ಕಿಗೆ ಆತ್ಮಬಂಧು ಮಾಂಟೋನನ್ನು ಓದಿಕೊಂಡೆ. ಕೋಮು ದಳ್ಳುರಿಗಳು ತುಂಬಿತುಳುಕುತ್ತಿದ್ದ ಮತ್ತು ದೇಶ ವಿಭಜನೆಯ ಕಾಲದ ತೀವ್ರ ಯಾತನೆಯೊಂದಿಗೆ ಬರೆದ ಆತ ತನ್ನ ಕಥೆಗಳ ಮೂಲಕ ಚಿರಸ್ಥಾಯಿ ಆಗಿದ್ದಾನೆ. ಸಾದತ್ ಹಸನ್ ಮಾಂಟೋನ ಹಲವು ಕಥೆಗಳು ಓದಿದಾಗ ಎದೆ ಝಲ್ ಅನ್ನುತ್ತದೆ. ಆತನ ನಾಟಕಗಳು ಕಾಡದೇ ಇರವು.

'ಅದೇ ಸಾ ಕಾವಿ ಬಟ್ಟೆ ಹಾಕಿರೋರು.'
'ಯಾಕೆ ಅವರು ಮನುಷ್ಯರಲ್ವಾ?'
'ಮನುಷ್ರೇ ಸರಿ ಸಾ. ಆದ್ರೆ ಅವರು ಯಲ್ಲಾನೂ ...ಟ್ಟೋರಲ್ವ ಸಾ?'
...ಹಲ್ಕಾ ಸಹವಾಸ. ಅವನ ಮಾತೆಲ್ಲ ಹೀಗೆ. ಹಿಂದೆ ...ದು ದಿವಸ ಬಂದಿದ್ದ, ಬಂದವನೇ 'ಯತಿಗಳು ಅಂದ್ರೆ ...ರು ಸಾ' ಅಂತ ಕೇಳಿದ್ದ. 'ಸರ್ವಸಂಗ ಪರಿತ್ಯಾಗಿಗಳು. ...ವನ್ನೂ ತ್ಯಜಿಸಿದವರು' ಅಂದಿದ್ದೆ. ಆದ್ರೆ ಆವನು 'ಮಾನ ...ರ್ಯಾದೆನೂವ ಸಾ' ಅಂತ ಕೇಳಿದ್ದ. ಈಗ ಹೀಗೇ ...ುತ್ತಿದ್ದಾನೆ. ಬೇಸರ ಆಯಿತು. ಅದನ್ನು ತೋರಿಸಿಕೊಂಡೆ.
'ತಪ್ಪು ತಿಳೀಬ್ಯಾಡಿ ಸಾ. ಸ್ವಾಮಿಗೋಳು ಅಂದ್ರೆ ನಮ್ಗಿಂತ ...ಲಿರೋರು ಅಲ್ವಾ. ಅದ್ಕೆ ಅಂಗಂದೆ ಸಾ. ಅಷ್ಟೇಯ. ...ರು ಸಿನಿಮಾ ನೋಡಬೋದ ಸಾ?'
'ನೋಡ್ಲಿ ಬುಡು. ನಿಮ್ಮಪ್ಪನ ಗಂಟೇನೋಯ್ತದೆ?'
'ಹಂಗಲ್ಲ ಸಾ. ದೇವರ ಬಯ್ದಿರೋ ಸಿನಿಮಾ ಸಾ.'
'ಅಂತೋವ ಕಡ್ಡಾಯ ನೋಡ್ಲೇಬೇಕು. ಯಾಕೆಂತೀಯಾ ...ಹೆಂಗೆ ಯಾವಾಗ ದೇವರ ಹೀಯಾಳಿಸಿದಾರೆ ಅನ್ನೊದ ...ಂಡು ಭಕ್ತರಿಗೆ ಇಂತಿಂತ ಕಡೆ ಹಿಂಗಿಂಗೆ ದೇವರಿಗೆ ...ಮಾನ ಮಾಡವ್ರೆ. ನಾವು ಆದನ್ನ ನೋಡಿದ್ದೀವಿ. ನೀವು ...ೀಡಬ್ಯಾಡಿ. ಬ್ಯಾರೆಯವರು ನೋಡೋಕೂ ಬುಡಬ್ಯಾಡಿ ...ತೆಲ್ಲ ತಿಳಿಸಬೇಕಲ್ಲ ಅದ್ಕೆ.'
'ನೋಡಬಾರದ ಸೀನ, ಸಿನಿಮಾವ ತಡೆಯಾಕೆ ಸೆನ್ಸಾರೇ ...ಲ್ಲ ಸಾ.'
'ಅವೆ ನಿಜ ಕಣೊ ಕ್ಯಾತ. ಸೆನ್ಸಾರ್ ಬೋರ್ಡ್‌ನಲಿ ...ವ ಯಾವ ಜಾತಿಯೋವ್ರೋ ಕುಂತಿರ್ತವೆ. ಅವ್ಕೆ ಹಿಂದಿಲ್ಲ ...ಂದಿಲ್ಲ ಎಂತೆಂತವ್ರೋ ಓಕೆ ಅನ್ತವೆ. ಅದ್ಕೇ ತಿಳಿವಳಿಕೆ ...ೋ ಜನಬೇಕು. ಆ ಕೆಲ್ಸಾವ ಇವರು ಮಾಡ್ತಾ ಅವ್ರೆ.'
'ಹಂಗಾರೆ ಇದೊಂತರ ನೈತಿಕ ಸೆನ್ಸಾರು ಅನ್ನಿ ಸಾ.'
'ಹಂಗೆ ಅನ್ಕೊ.'
'ಸರಿ ಸಾ' ಎಂದವನೇ ಏನೋ ಹೊಳೆದವನಂತೆ ...ಿದ- 'ಹಂಗಾರೆ ಅಶ್ಲೀಲ ಸಿನಿಮಾನೂ ನೋಡಬೇಕಲ್ಲಾ ...'
'ನೋಡಬೇಕು. ಯಾವುದು ಶೀಲ ಯಾವುದು ಅಶ್ಲೀಲ ...ನ್ನೋದ ಅರ್ಥೈಸಬೇಕಲ್ಲಾ.'
'ಹಂಗಾರೆ.... ಹಂಗಾರೆ....'
'ಅದೇನು ಹೇಳಲಾ?'
'ಹಂಗಾರೆ ಸ್ವಾಮಿಗೋಳು ಬ್ಲೂ ಫಿಲಂನೂ ನೋಡ್ತಾರಾ ...?'
ಥೂ ಹಲ್ಕಾ ಸಹವಾಸ. ಸೆನ್ಸಾರ್ ಆಗಿರೋ ಸಿನಿಮಾ ...ೀಡ್ತಾರೆ ಅಂದ್ರೆ ಸೆನ್ಸಾರ್ ಆಗದಿರೋ ಸಿನಿಮಾನೂ ...ೀಡ್ತಾರಾ ಅಂತ ಹೇಳಿದ್ರೆ.... ಇದೇನು ಅವನ ಕುಚೋದ್ಯ ...ನ್ನೋಣವೊ ಅಥವಾ ದಡ್ಡತನ ಅನ್ನೋಣವೇ ಅನ್ನೋದೆ ...ವಲ್ಲಾಗದಲ್ಲಾ....



'ಅಭ್ಯ' ಚಿತ್ರದಲ್ಲಿ 'ದುನಿಯಾ' ವಿಜಿಯೊಂದಿಗೆ ಮೂತಿಗೆ ಮೂತಿ ಕೊಟ್ಟು ಮುತ್ತಿಡಿಸಿಕೊಂಡಿದ್ದೇ ಬಂತು, ನಾಯಕಿ ಸ್ಮಿತಾಳಿಗೆ ಆನಂತರ ಬಂದಿದ್ದು ಸರಿಸುಮಾರು ಇಪ್ಪತ್ತೈದು ಆಫರ್‌ಗಳು! ಎಲ್ಲವೂ ಇಂಥ ಮುತ್ತು-ಗಮ್ಮತ್ತಿನ ಪಾತ್ರಗಳೇ. ಏನಾದರೂ ಮಾಡಿ ಇಮೇಜು ಬದಲಿಸಿಕೊಳ್ಳಬೇಕು ಎಂದು ತೀರ್ಮಾನಿಸಿದ ಸ್ಮಿತಾ ತನ್ನ ಹೆಸರನ್ನು ನಿವೇದಿತಾ ಎಂದು ಬದಲಿಸಿಕೊಂಡಳು. ನಂತರ 'ಪರಿ' ಚಿತ್ರದಲ್ಲಿ ಕಾಣಿಸಿಕೊಂಡಳು. ಈಗ ಇಮೇಜು ಮೊದಲಿಗಿಂತಲೂ ಹೆಚ್ಚು ಬದಲಾಗಿದೆ! ಯಾಕೆಂದರೆ, 'ಅಭ್ಯ'ದಲ್ಲಿ ಬರೀ ಚುಂಬಿಸುವ ದೃಶ್ಯಗಳಷ್ಟೇ ಇತ್ತು, 'ಪರಿ'ಯಲ್ಲಿ ಯರ್ರಾಬಿರ್ರಿ ಮಲಗಿ ಏಳುವ ದೃಶ್ಯಗಳೇ ಹೆಚ್ಚು! ಈಗ ಸ್ಮಿತಾ ಮತ್ತೊಮ್ಮೆ ಹೆಸರು ಬದಲಿಸಿಕೊಳ್ಳುತ್ತಾಳಾ ಅನ್ನೋದು ಪ್ರಶ್ನೆ!!





* * * *

ಸದ್ಯ ರಾಜ್ಯಸಭೆ ಸದಸ್ಯನಾಗಿ ಪ್ರಮಾಣವಚನ ಸ್ವೀಕರಿಸಿರುವ ಸಚಿನ್ ತೆಂಡೂಲ್ಕರ್‌ಗೆ ಈಗ ಸಿನಿಮಾ ಹುಚ್ಚೂ ಹೊಕ್ಕಿದಂತಿದೆ! ಸದ್ಯದಲ್ಲೇ ಬಿಡುಗಡೆಯಾಗಲಿರುವ ವಿಧು ವಿನೋದ್ ಚೋಪ್ರಾರವರ 'ಫೆರಾರಿ ಕಿ ಸವಾರಿ' ಎಂಬ ಚಿತ್ರದಲ್ಲಿ ಸಚಿನ್‌ಗೂ ಒಂದು ಪಾತ್ರವಿದೆಯಂತೆ. ಕ್ರಿಕೆಟ್ಟು, ಜಾಹಿರಾತು, ಪಾಲಿಟಿಕ್ಸು, ಈಗ ಪಿಚ್ಚರು... ಎತ್ತೆತ್ತಲೋ ಸಾಗುತ್ತಿದೆ ಸಚಿನ್ ಸವಾರಿ.



* * * *



ಅಪ್ಪ-ಮಗಳು ಇಬ್ಬರೂ ಸಖತ್ ಬ್ಯುಸಿಯಾಗಿದ್ದಾರೆ. ಒಬ್ಬರು ಹಿರಿತೆರೆಯಲ್ಲಿ ಇನ್ನೊಬ್ಬರು ಕಿರುತೆರೆಯಲ್ಲಿ! ಯಾರು ಅಂತೀರಾ? ನಿರ್ದೇಶಕ ಓಂ ಪ್ರಕಾಶ್ ರಾವ್ ಮತ್ತು ಅವರ ಮಗಳು ರಿಷಿ.

ರವಿ ಗರಣಿ ನಿರ್ದೇಶಿಸುತ್ತಿರುವ ಯಶಸ್ವಿ ಧಾರಾವಾಹಿ 'ಕೃಷ್ಣ ರುಕ್ಮಿಣಿ' ಸೇರಿದಂತೆ ರಿಷಿ ಅನೇಕ ಧಾರಾವಾಹಿಗಳಲ್ಲಿ ನಟಿಸುತ್ತಿದ್ದಾಳೆ. ಹಾಗೆಯೇ ಓಂ ಪ್ರಕಾಶ್ ಕೂಡಾ ವರ್ಷಕ್ಕೆ ಮೂರ್‍ನಾಲ್ಕು ಕಮರ್ಷಿಯಲ್ ಸಿನಿಮಾಗಳನ್ನು ನಿರ್ದೇಶಿಸುತ್ತಾ ಮೈತುಂಬ ಕೆಲಸ ಮೆತ್ತಿಕೊಂಡಿದ್ದಾರೆ. ತನ್ನ ತಾಯಿ ರೇಖಾದಾಸ್‌ರೊಂದಿಗೆ ವಾಸಿಸುತ್ತಿರುವ ರಿಷಿ ಎಲ್ಲೂ ತನ್ನ ಅಪ್ಪನ ಹೆಸರನ್ನು ಬಳಸಿಕೊಳ್ಳದೇ, ಅಮ್ಮನ ಸಹಾಯ ಪಡೆಯದೇ ಅವಕಾಶ ಪಡೆಯುತ್ತಿದ್ದಾಳೆ ಅನ್ನೋದೇ ವಿಶೇಷ.

* * * *




ಬಾಲಿವುಡ್‌ನಲ್ಲಿ ಯಾವುದು ದೀರ್ಘ ಸಮಯದ ಸಿನಿಮಾ? ಅದು ಜೆ.ಪಿ. ದತ್ತಾ ನಿರ್ದೇಶಿಸಿದ್ದ 'ಎಲ್‌ಓಸಿ' ಸಿನಿಮಾವಂತೆ. ಬಾಲಿವುಡ್‌ನ ಅಜಯ್ ದೇವಗನ್, ಸಂಜಯ್ ದತ್, ಸೈಫ್ ಅಲಿ ಖಾನ್, ಅಭಿಷೇಕ್ ಬಚ್ಚನ್, ರಾಣಿ ಮುಖರ್ಜಿ, ಕರೀನಾ ಕಪೂರ್ ಅಲ್ಲದೆ ತೆಲುಗಿನ ಅಕ್ಕಿನೇನಿ ನಾಗಾರ್ಜುನ ಕೂಡ ನಟಿಸಿ 2003ರಲ್ಲಿ ಬಿಡುಗಡೆಗೊಂಡಿದ್ದ ಈ ಸಿನಿಮಾದ ಅವಧಿ ಬರೋಬ್ಬರಿ 4 ಗಂಟೆ 4 ನಿಮಿಷ. ಆ ಕಾರಣಕ್ಕೇ ಇರಬೇಕು ಈ ಸುದೀರ್ಘ ಸಿನಿಮಾ ನೋಡುವುದು ಬಲು ತ್ರಾಸದಾಯಕ ಎಂದು ಅದು ಬಹಳ ದಿನಗಳ ಕಾಲ ಥಿಯೇಟರುಗಳಲ್ಲಿ ಉಳಿಯಲಿಲ್ಲ!



* * * *


ಕನ್ನಡದ ಕಿಚ್ಚ ಸುದೀಪ್ ನಟಿಸಿರುವ, ತೆಲುಗಿನ ಸ್ಟಾರ್ ಡೈರೆಕ್ಟರ್ ರಾಜಮೌಳಿ ನಿರ್ದೇಶಿಸಿರುವ ಬಹುನಿರೀಕ್ಷೆಯ ಬಹುಭಾಷಾ ಚಿತ್ರ 'ಈಗ' ಮೇ 30ಕ್ಕೆ ರಿಲೀಸಾಗುತ್ತಿಲ್ಲ, ಯಾಕೆಂದರೆ ಈ ಚಿತ್ರದ ಗ್ರಾಫಿಕ್ಸ್ ಕೆಲಸ ಇನ್ನೂ ಮುಗಿದಿಲ್ಲ, ಕಡೇ ಪಕ್ಷ ಬಾಕಿ ಕೆಲಸ ಮುಗಿದು ಈ ಚಿತ್ರ ಬಿಡುಗಡೆಯಾಗಬೇಕಾದರೆ ಇನ್ನೂ ಒಂದು ತಿಂಗಳು ಬೇಕಾಗಬಹುದು.

'ಈಗ' ಬಿಡುಗಡೆ ಮುಂದಕ್ಕೆ ಹೋಗುತ್ತಿರುವುದು ಇದೇ ಮೊದಲಲ್ಲ, ಈ ಹಿಂದೆ ಒಂದೆರಡು ಬಾರಿ ಇದರ ಬಿಡುಗಡೆಯ ದಿನಾಂಕವನ್ನು ಘೋಷಿಸಲಾಗಿತ್ತು. ಆದರೆ ಆಗ ಆದದ್ದೇ ಈಗಲೂ ಆಗಿದೆ ಅಷ್ಟೇ!



* * * *

ಪೇಜ್ 3 ಫೋಟೋಗಳು, ವಿಜಯ ಮಲ್ಯನ ಕಿಂಗ್‌ಫಿಶರ್ ಜಾಹೀರಾತಿನ ಅರೆಬೆತ್ತಲೆ ಬೆಡಗಿಯರ ಕ್ಯಾಲೆಂಡರುಗಳ ಮೂಲಕ ಜನಪ್ರಿಯನಾಗಿರುವ ಫ್ಯಾಷನ್ ಫೋಟೋಗ್ರಾಫರ್ ಅತುಲ್ ಕಸ್ಬೇಕರ್ ಈಗ ತನ್ನದೇ ಒಂದು ಫೋಟೋ ಕಂಪೆನಿ ತೆರೆದಿದ್ದಾನಂತೆ. ಬಹುಶಃ ಈತನ ಹೊಸ ಕಚೇರಿಯ ಗೋಡೆಗಳ ತುಂಬಾ ಈತನೇ ತೆಗೆದ ಅರೆಬೆತ್ತಲೆ ಬೆಡಗಿಯರ ಮಾದಕ ಫೋಟೋಗಳೇ ತುಂಬಿರಬಹುದು!



...ಮಡಿವಂತಿಕೆಯವರ ಸೋಗನ್ನು ...ಡಾಖಂಡಿತವಾಗಿ ಖಂಡಿಸಿದ ...ಾಂಟೋ, ಧರ್ಮದ ನಶೆ ...ರಿಸಿಕೊಂಡು ಮತಿಗೆಟ್ಟ ಜಗತ್ತಿಗೆ ...ನ ಕತೆ, ನಾಟಕಗಳ ಮೂಲಕವೇ ...ಡಿ ಏಟು ಕೊಟ್ಟ. ಆದಕ್ಕಾಗಿ ...ನೆಲ್ಲಾ ಸಂಕಷ್ಟಗಳನ್ನು ...ದುರಿಸಬೇಕಾಯಿತು.

ಜಾತಿಧರ್ಮಗಳ ಆಚೆ ನಿಂತು ಮಾನವೀಯ ...ಲೆಯಲ್ಲಿ ಹೊಸತನ್ನು ಕೊಟ್ಟ ಜೀವಪರ ಕಾಳಜಿಯ ...ಾಂಟೋನ ಇಡೀ ಜೀವನದ ಬಗ್ಗೆ ಮೆಲುಕು ಹಾಕಿ ...ಮತ್ತೆ ಮತ್ತೆ ಓದಲು ಪ್ರೇರೇಪಿಸುವಂತೆ ಮಾಡಿರುವ ...ಹೋದರ ಇಸ್ಮತ್ ಘಜೀರ್ ಅವರಿಗೆ ...ಧನ್ಯವಾದಗಳು.

*- ಬಸವರಾಜ ಹಳ್ಳಿ ಹಸಮಕಲ್ (ಸಿಂಧನೂರು)*

## ...ಕಾಂಗ್ರೆಸ್ ಪಕ್ಷದ ಪಂಚರಂಗಿ ಆಟ

2012ರ ಮೇ 23 ರ ಸಂಚಿಕೆ ತುಂಬಾ ಚೆನ್ನಾಗಿ ...ಂದಿದೆ.

'ಕುರುಬರ ಕಹಳೆ ಸಿದ್ದು ಮೇಲುಗೈ' ...ವರದಿಯನ್ನು ಓದಿದೆ. ಕಳೆದ ನಲವತ್ತು ...ವರ್ಷಗಳಿಂದ ಕಾಂಗ್ರೆಸ್ ರಾಜಕೀಯವನ್ನು ...ನೋಡಿದ್ದೇನೆ. ಅಲ್ಲಿ ಹೈಕಮಾಂಡಿನಿಂದ ...ಹೆಸರು ನೀಡಲು ಸಣ್ಣ ಬ್ರೀಫ್‌ಕೇಸಿನಲ್ಲಿ ...ಮೂರು ಚೀಟಿಗಳು ಇರುತ್ತವೆ. ಮೂರು ...ಚೀಟಿಗಳಲ್ಲೂ ಒಬ್ಬರ ಹೆಸರೇ. ಉದಾ ...ರಣೆಗೆ ... ಬ್ರೀಫ್‌ಕೇಸು ... ಆಯ್ಕೆ ಮಾಡಿ ... ಮೂರು ಚೀಟಿಗಳಲ್ಲಿ ... ಇತ್ತು, ಇದು ಕಾಂಗ್ರೆಸ್‌ನ ಪಂಚರಂಗಿ ಆಟ. ಒಂದು ವೇಳೆ ಕಾಂಗ್ರೆಸ್ ಮೆಜಾರಿಟಿಗೆ ಬಂದರೆ ಸಿದ್ದು ಮುಖ್ಯಮಂತ್ರಿ ಆಗುವುದು ಹಗಲುಕನಸು. ಈ ಸಾರಿ ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರ ಗ್ಯಾರಂಟಿ. ಗಣಿ ಹಾಗೂ ಲಂಚದ ಬಗ್ಗೆ ತಲೆಕೆಡಿಸಿಕೊಂಡಿರುವವರು ಪತ್ರಿಕೆ ಓದುವವರು ಮಾತ್ರ.


*- ತೋರಗಲ್ ಉಮೇಶ್, ರಾಮದುರ್ಗ*

ಪತ್ರಿಕೆಯ ಮೇ 32, 2012ರ ಸಂಚಿಕೆ ತುಂಬಾ ಚೆನ್ನಾಗಿ ಮೂಡಿಬಂದಿದೆ. ಸಿದ್ಧರಾಮಯ್ಯನವರ ಸಾಮಾಜಿಕ ಬದ್ಧತೆ, ಸಾಮಾಜಿಕ ನ್ಯಾಯದ ಕಳಕಳಿಯನ್ನು ಪ್ರತಿಬಿಂಬಿಸಿದ್ದೀರಿ. ಧನ್ಯವಾದಗಳು.

*- ಸಂಗಮೇಶ್ ಎಲ್.ಕೆ. ಬಿಜಾಪುರ*

ಜನಪ್ರಿಯ ಕಲಾವಿದರು ಎಷ್ಟೇ ಲಿಬರಲ್‌ಗಳಾದರೂ ಮನಸ್ಸಿನೊಳಗೆ ಜಾತಿ ಸಮರ್ಥನೆಯ ವಿಷಮ ಬುದ್ಧಿ ಜಾಗೃತವಾಗಿರುತ್ತದೆ. ಇದಕ್ಕೆ ಮಾಸ್ಟರ್ ಹಿರಣ್ಣಯ್ಯನವರೂ ಹೊರತಲ್ಲ.

- ಪ್ರಕಾಶ್, ಕಡೂರು




ತಾವು ಅಡ್ಡಡ್ಡ ಮಲಗಿಸಲು ತೀವ್ರವಾಗಿ ಪ್ರಯತ್ನಿಸಿದ 'ಅಣ್ಣಾ ಬಾಂಡ್' ಬಾಕ್ಸ್ ಆಫೀಸಿನಲ್ಲಿ ಎದೆ ಉಬ್ಬಿಸಿ ನಿಂತಿದೆ. ಆದೇರೀತಿ ಎತ್ತಿ ನಿಲ್ಲಿಸಲು ತಾವು ತೀವ್ರವಾಗಿ ಪ್ರಯತ್ನಪಟ್ಟ 'ಕಠಾರಿವೀರ' ಬಾಕ್ಸ್ ಆಫೀಸಿನಲ್ಲಿ ಅಡ್ಡಡ್ಡ ಮಲಗಿ ಮಣ್ಣು ಮುಕ್ಕಿದ್ದಾನೆ.

ಪ್ಲೀಸ್, ಈ ಬಗ್ಗೆ ನಿಮ್ಮ ಕಾಮೆಂಟ್ಸ್???

*- ಶ್ರೀಧರ್, ಚಿತ್ರದುರ್ಗ*

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 06-06-2012



## ಡರ್ಟಿ ಹುಡುಗಿಗೆ ವೀಸಾ ಪ್ರಾಬ್ಲಂ!

ಕನ್ನಡದ 'ಡರ್ಟಿ ಪಿಕ್ಚರ್'ನಲ್ಲಿ ನಟಿಸಬೇಕಿದ್ದ ಪಾಕಿಸ್ತಾನಿ ಸೆಕ್ಸ್ ಬಾಂಬ್ ವೀಣಾ ಮಲ್ಲಿಕ್ ಕರ್ನಾಟಕಕ್ಕೆ ಕಾಲಿಡಲು ವೀಸಾದ ವಿಘ್ನ ಎದುರಾಗಿದೆ.

ನಿರ್ಮಾಪಕ ವೆಂಕಟಪ್ಪ ತನ್ನ ಮಗನ ಸಿನಿಮಾಕ್ಕೆಂದು ವೀಣಾ ಮಲ್ಲಿಕ್‌ಗೆ ಎಂಬತ್ತೈದು ಲಕ್ಷ ರೂ. ಸಂಭಾವನೆ ನೀಡಲು ಒಪ್ಪಿದ್ದರು. ಅಷ್ಟೆ! ಅಲ್ಲ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಫೋಟೋ ಶೂಟ್‌ಗೆಂದು ವಿಶೇಷ ಸೆಟ್ ಕೂಡ ಹಾಕಿಸಿದ್ದರು. ಆದರೆ ಮೇ 17ಕ್ಕೆ ನಡೆಯಬೇಕಿದ್ದ ಫೋಟೋ ಶೂಟ್ ಈಗ ಕ್ಯಾನ್ಸಲ್ ಆಗಿದೆ. ಬೇರೆ ಚಿತ್ರೀಕರಣಕ್ಕೆ ಸ್ಟುಡಿಯೋ ಬಿಟ್ಟುಕೊಡಬೇಕಿರುವುದರಿಂದ ಸೆಟ್ ಹೆಚ್ಚುಕಡಿಮೆ ಗುಜರಿ ಸೇರಲಿದೆ. ಮಾತ್ರವಲ್ಲ, ವೀಣಾ ಮತ್ತು ಆಕೆಯ ಸಹಾಯಕರಿಗೆಂದು ಫೈವ್ ಸ್ಟಾರ್ ಹೊಟೇಲ್ ಕೂಡ ಬುಕ್ ಮಾಡಲಾಗಿತ್ತು, ಇವೆಲ್ಲದರಿಂದ ನಿರ್ಮಾಪಕ ವೆಂಕಟಪ್ಪನವರಿಗೆ ಆರೂವರೆ ಲಕ್ಷ ರೂಪಾಯಿ ಕೈಬಿಟ್ಟುಹೋಗಿದೆ.

ಭಾರತದ ವೀಸಾ ರೂಲ್ಸುಗಳಂತೆ ಪಾಕಿಸ್ತಾನೀಯರು ಭಾರತದಲ್ಲಿ ಎಲ್ಲೆಂದರಲ್ಲಿ ತಿರುಗುವಂತಿಲ್ಲ, ಯಾವ ರಾಜ್ಯಕ್ಕೆ ಹೋಗಬೇಕಿದ್ದರೂ, ಸಂಬಂಧಪಟ್ಟ ತನಿಖಾ ಸಂಸ್ಥೆಗಳಿಂದ ಅನುಮತಿ ಪಡೆಯಬೇಕು. ಹೀಗಾಗಿ ಕರ್ನಾಟಕ ಮತ್ತು ಗೋವಾಗಳಿಗೆ ಹೋಗಲು ವೀಣಾ ಅನುಮತಿ ಕೋರಿದ್ದಳು. ಗೋವಾದಿಂದ ಅನುಮತಿ ಸಿಕ್ಕಿದೆಯಾದರೂ ಕರ್ನಾಟಕದಿಂದ ಇನ್ನೂ ಒಪ್ಪಿಗೆ ಪತ್ರ ರವಾನೆಯಾಗಿಲ್ಲ.



## ಕಿಚ್ಚನ ಕಿರುಚಿತ್ರ!

"ಚುಟ್ಟದೊಂದು ಕ... ಅಥವಾ ಸಣ್ಣ ಎಳೆಯನ್ನು... ಹಿಗ್ಗಾಮುಗ್ಗಾ ಎಳೆದು ... ಎರಡೂವರೆ ಗಂಟೆಯ ... ಮಾಡುತ್ತೇವೆ. ಇದರಿಂದ... ಜನರಿಗೆ ಬೋರ್ ಆಗದ... ಮತ್ತಿನ್ನೇನಾಗುತ್ತೆ..." ಎಂ... ಇತ್ತೀಚೆಗಷ್ಟೇ ಉಪೇಂದ್ರ ... ಹೇಳಿದ್ದರು. ಅದರರ್ಥ, ... ಒಂದೋ ಹೆಚ್ಚು ಕಂಟೆಂ... ಇರುವ ಕಥೆ ಸೆಲೆಕ್ಟ್ ಮ... ಜನ ನೋಡುವಂತಹ ಸಿನಿಮಾ ಮಾಡಬೇಕು ಅಥವಾ ಸಣ್ಣ ಕಥೆಯನ್ನೇ ... ಬಳಸಿಕೊಂಡು ಚಿಕ್ಕದಾದ ಚಿತ್ರವನ್ನು ರೂಪಿಸಬೇಕು ಎನ್ನುವುದು.

ಈಗ ಕಿಚ್ಚ ಸುದೀಪ್ ಉಪ್ಪಿ ಮಾತನ್ನು ಶಿರಸಾ ಪಾಲಿಸಲು ಮುಂದಾ... ಏನಾದರೊಂದು ಹೊಸತನ್ನು ಮಾಡುತ್ತಲೇ ಇರುವ ಸುದೀಪ್ ಈಗ ... ಜೊತೆಗಿರುವ ಯುವಕರ ತಂಡದೊಂದಿಗೆ ಕಿರುಚಿತ್ರವೊಂದನ್ನು ರೂಪಿಸು... ಕ್ರಿಕೆಟ್ ಟೂರ್ನಮೆಂಟುಗಳಲ್ಲಿ ಸುದೀಪ್‌ಗೆ ಸಾತ್ ನೀಡಿದ್ದ 'ಜಾಲಿಡೇಸ್'ನ ಪ್ರದಿ... ಈ ಕಿರುಚಿತ್ರದ ಹೀರೋ. ಚಿರಂಜೀವಿ ಸರ್ಜಾ ಈ ಬಾರಿ ನಟನೆಯ ... ಸಹಾಯಕ ನಿರ್ದೇಶಕನ ಜವಾಬ್ದಾರಿ ವಹಿಸಿಕೊಂಡಿದ್ದಾನೆ. ರಾಜೇಶ್ ರಾಮ... ಮ್ಯೂಸಿಕ್ ಕೊಡುತ್ತಿದ್ದಾರೆ. ಸದ್ಯ ದಕ್ಷಿಣ ಭಾರತದಲ್ಲಿ ಬೇಡಿಕೆಯ ವಿಲನ್ ಆ... ರವಿಶಂಕರ್ ಕೂಡಾ ಈ ಚಿತ್ರದಲ್ಲಿ ನಟಿಸುತ್ತಿದ್ದಾರೆ.


ಇದು ಕಡಿಮೆ ಬಜೆಟ್‌ನಲ್ಲಿ ಸಿನಿಮಾ ಮಾಡುವ ಪ್ರಯೋಗವಂತೆ. ಸಾ... ಕ್ಯಾಮರಾದಲ್ಲೇ ಸ್ವಲ್ಪ ಭಾಗವನ್ನು ಚಿತ್ರೀಕರಣ ಮಾಡಿ, ಅದನ್ನು ಪರೀಕ್ಷೆಗೊಳ... ದೊಡ್ಡ ಪರದೆಯಲ್ಲಿ ಅದನ್ನು ನೋಡಬಹುದು ಎನ್ನುವುದು ಖಾತ್ರಿಯ... ಅದೇ ಕ್ಯಾಮರಾದಲ್ಲಿ ಶೂಟಿಂಗ್ ಮುಂದುವರೆಸುತ್ತಾರಂತೆ.

ಅಲ್ಲಿಗೆ ಈ ಎಕ್ಸಪರಿಮೆಂಟು ಕ್ಲಿಕ್ ಆದರೆ, ಕಿಚ್ಚನ ಕಿರುಚಿತ್ರ ಥಿಯೆ... ಬರೋದು ಗ್ಯಾರೆಂಟಿ!

## 'ಡ್ರಾಮಾ'ದಿಂದ ಪ್ರಕಾಶ್ ರೈ ಹೊರಗೆ!

ಯೋಗರಾಜ್ ಭಟ್ ನಿರ್ದೇಶಿಸುತ್ತಿರುವ 'ಡ್ರಾಮಾ' ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ನಟಿಸುತ್ತಿದ್ದೇನೆ ಎಂದು ಖುದ್ದು ಪ್ರಕಾಶ್ ರೈ ಹಲವು ಕಡೆ ಹೇಳಿಕೊಂಡಿದ್ದರು. ಆದರೆ ಈಗ ರೈ ಸ್ಥಾನಕ್ಕೆ ತಮಿಳಿನ ಶರತ್ ಕುಮಾರ್ ಅಥವಾ ಹಿಂದಿಯ ಅತುಲ್ ಕುಲಕರ್ಣಿ ನಿಕ್ಕಿಯಾಗುವ ಸಾಧ್ಯತೆಯಿದೆ. ಪ್ರಕಾಶ್ ರೈ ಈಗ ಇಡೀ ಭಾರತದ ವಿವಿಧ ಭಾಷಾ ಸಿನಿಮಾಗಳಲ್ಲಿ ಪುರುಸೊತ್ತಿಲ್ಲದೆ ನಟಿಸುತ್ತಿದ್ದಾರೆ. ಆದರೂ ಆತ ಭಟ್ಟರ 'ಡ್ರಾಮಾ'ದಲ್ಲಿ ನಟಿಸಲು ಒಪ್ಪಿಕೊಂಡಿದ್ದರು. ಆದರೀಗ ರೈ ಈ ಸಿನಿಮಾದಿಂದ ಹೊರಗುಳಿಯಲು ಕಾರಣ ಅವರ ತಾಯಿಯ ಅನಾರೋಗ್ಯ. ಸದ್ಯ ಪ್ರಕಾಶ್‌ರ ತಾಯಿ ತೀವ್ರ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದಾರೆ.





ಮೊದಲೇ ರೈ "ಸಿನಿಮಾನೇ ನನ್ನುಸಿರು ಅನ್ನೋ ಮನುಷ್ಯ ನಾನಲ್ಲ, ನನಗೆ ಸಿನಿಮಾಗಿಂತ ನನ್ನ ಲೈಫ್ ಮುಖ್ಯ" ಎಂದವರು. ಅಂತೆಯೇ ಈಗ ರೈ ತನ್ನೆಲ್ಲಾ ಶೂಟಿಂಗು-ಕೆಲಸಗಳನ್ನು ಪಕ್ಕಕ್ಕಿಟ್ಟು ಅಮ್ಮನತ್ತ ಗಮನ ಕೊಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ಬಂದು ನಮ್ಮ ಸಿನಿಮಾದಲ್ಲಿ ನಟಿಸಿ ಎಂದು ಹಠ ಮಾಡುವುದು ಸರಿಯಲ್ಲ ಎಂಬ ಕಾರಣಕ್ಕೆ ಭಟ್ಟರೂ ಬೇರೆಯವರತ್ತ ಕಣ್ಣು ಹಾಯಿಸಿದ್ದಾರೆ.

## ಪಪ್ಪಿ ಕೊಟ್ಟರೂ ಪ್ರಪೋಸ್ ಮಾಡಲೇ ಇಲ್ಲ!

ಇದನ್ನು ನಂಬುವುದು, ಬಿಡುವುದು ನಿಮಗೇ ಬಿಟ್ಟಿದ್ದು!

ಬಾಲಿವುಡ್‌ನಲ್ಲಿ ಸದ್ಯ ಹಾಟ್ ಮಿಂಚುಳ್ಳಿ ಎನಿಸಿರುವ ಕತ್ರೀನಾ ಕೈಫ್ "ಪಪ್ಪಿ ಕೊಟ್ಟರೂ ಯಾರೂ ನನಗೆ ಪ್ರಪೋಸ್ ಮಾಡಲೇ ಇಲ್ಲ!" ಎಂಬ ಸ್ಟೇಟ್‌ಮೆಂಟು ನೀಡಿ ಸೆನ್ಸೇಷನ್ ಸೃಷ್ಟಿಸಿದ್ದಾಳೆ. ಈಗ ಕತ್ರೀನಾ ಪೋಷಕರು ಮದುವೆಗೆ ಒತ್ತಾಯಿಸುತ್ತಿದ್ದಾರಂತೆ. ಆದರೆ ಕತ್ರೀನಾಗೆ ಸೂಕ್ತ ಹುಡುಗ ಇನ್ನೂ ಸಿಕ್ಕಿಲ್ಲವಂತೆ!

ಸಲ್ಮಾನ್ ಖಾನ್ ಜೊತೆ ಸುದೀರ್ಘ ಸರಸವನ್ನು, ರಣಬೀರ್ ಕಪೂರ್‌ನೊಂದಿಗೆ ಪಾರ್ಟ್ ಟೈಂ ಪ್ರೇಮವನ್ನು ಮಾಡಿ ಮುಗಿಸಿರುವ ಕತ್ರೀನಾಗೆ ಸೂಕ್ತ ವರ ಸಿಗಲಿಲ್ಲವೆಂದರೆ ಹೇಗೆ? "ಈವರೆಗೂ ಯಾರೂ ನನ್ನ ಬಳಿ ಮದುವೆಯ ಪ್ರಪೋಸಲ್ ಇಟ್ಟೇ ಇಲ್ಲ" ಎಂದು ಕತ್ರೀನಾ ಕೊರಗಿದ್ದಾಳೆ.

"ಪಪ್ಪಿ ಕೊಟ್ಟು ಕೈ ಕೊಟ್ಟರು, ಪ್ರಪೋಸ್ ಮಾಡದೇ ಓಡಿಬಿಟ್ಟರು..." ಎಂಬ ಐಟಂ ಸಾಂಗಿಗೆ ಇದು ಸಕಾಲವಲ್ಲವೇ?

## 'ಕಿಸ್'ಬಾಯಿ ತೆರೆದಳು ರಾಖಿ ಸಾವಂತ್!



ಹೇಗಾದರೂ ಮಾಡಿ ಸುದ್ದಿಯಲ್ಲಿರಬೇಕೆಂಬುದು ಐಟಂ ಗರ್ಲ್ ರಾಖಿ ಸಾವಂತಳ ಚಟ. ಸದ್ಯಕ್ಕೆ ಈಕೆ ಬಾಲಿವುಡ್‌ನಲ್ಲಿ ಬ್ಯೂಸಿ ಆಗಿರದಿದ್ದರೂ ಯಾವುದಾದರೊಂದು ಎಂಟರ್‌ಟೈನ್‌ಮೆಂಟ್ ಚಾನೆಲ್‌ನಲ್ಲಿ ಈಕೆಯ 'ಚಟ'ವಟಿಕೆ, ವಟಗುಟ್ಟುವಿಕೆ ನಡೆಯುತ್ತಲೇ ಇರುತ್ತದೆ. ತನ್ನ 'ಕಿಸ್'ಬಾಯಿಯಿಂದಾಗಿ ಈಕೆ ಸುದ್ದಿ ಮಾಡಿದಷ್ಟೂ ಈ ಚಾನೆಲ್‌ಗಳಿಗೆ ಸಂಭ್ರಮವೋ ಸಂಭ್ರಮ.

ಸುದ್ದಿಯಲ್ಲಿರಲು ಈ ರಾಖಿ ಈಗ ಮಾಡಿರುವ ಆರೋಪ ಏನೆಂದರೆ "ಆಮಿರ್ ಖಾನ್ ನನ್ನ ಐಡಿಯಾವನ್ನು ಕಾಪಿ ಮಾಡುತ್ತಿದ್ದಾನೆ" ಎಂಬುದು. ಸ್ಟಾರ್‌ಪ್ಲಸ್, ದೂರದರ್ಶನ ಮತ್ತು ಹಲವಾರು ಭಾಷಾ ಚಾನೆಲ್‌ಗಳಲ್ಲಿ ಪ್ರಸಾರವಾಗುತ್ತಿರುವ ಆಮೀರ್ ಖಾನ್‌ನ 'ಸತ್ಯಮೇವ ಜಯತೆ'ಯ ಪರಿಕಲ್ಪನೆಯನ್ನು ತನ್ನ 'ರಾಖಿ ಕಾ ಇನ್ಸಾಫ್' ಎಂಬ ಕಾರ್ಯಕ್ರಮದಿಂದ ಎಗರಿಸಿದ್ದಾನೆ ಎಂಬುದು ರಾಖಿ ಮಾಡಿರುವ ಗಂಭೀರ ಆರೋಪ.

ಎನ್‌ಡಿಟಿವಿ ಮಾಲೀಕತ್ವದ ಇಮ್ಯಾಜಿನ್ ಚಾನೆಲ್‌ನಲ್ಲಿ 'ರಾಖಿ ಕಾ ಇನ್ಸಾಫ್' ಕಾರ್ಯಕ್ರಮ ಬಿತ್ತರವಾಗುತ್ತಿದ್ದು, ಈ ಚಾನಲ್ಲೇ ಬಂದ್ ಆಗಿದೆ. ಆದರೇನಂತೆ ರಾಖಿಯ ಬಾಯಿ ಮಾತ್ರ ಬಂದ್ ಆಗುವ ಸಾಧ್ಯತೆಗಳೇ ಇಲ್ಲ!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427. Fax : 26604536, E-mail :lankesh70@rediffmail.com